# ಜನತಾವಾಣಿ

ಸಂಪಾದಕರು :
ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಅಕ್ಟೋಬರ್ 14, 2024

ಸಂಪುಟ : 51 ಸಂಚಿಕೆ : 151 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಬಡವರಿಗೆ ನೆರವಾಗುವ ಸಹಕಾರಿ ಬ್ಯಾಂಕ್

**ದಿ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ**

ದಾವಣಗೆರೆ, ಅ. 13 - ಬಡವರು ಹಾಗೂ ಗ್ರಾಮೀಣ ಕುಟುಂಬಗಳಿಗೆ ನೆರವು ನೀಡುವ ಶಕ್ತಿ ಹಾಗೂ ಸಾಮರ್ಥ್ಯ ಸಹಕಾರಿ ಬ್ಯಾಂಕುಗಳಿಗೆ ಮಾತ್ರ ಇದೆ. ಅಂತಹ ಸಾಮರ್ಥ್ಯ ರಾಷ್ಟ್ರೀಕೃತ ಬ್ಯಾಂಕುಗಳಿಗೆ ಇಲ್ಲ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ನಗರದ ತ್ರಿಶೂಲ್ ಕಲಾಭವನದಲ್ಲಿ ಆಯೋಜಿಸಲಾಗಿದ್ದ ದಿ ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್‌ನ ಸುವರ್ಣ ಮಹೋತ್ಸವ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಒಂದು ವರ್ಗದ ಜನರು ಮಾತ್ರ ಸಾಲ ಪಡೆಯಲು ಸಾಧ್ಯ. ಅಲ್ಲಿನ ನಿಬಂಧನೆಗಳು ಹಾಗೂ ವ್ಯವಸ್ಥೆಗಳೇ ಬೇರೆ. ಸಹಕಾರಿ ಬ್ಯಾಂಕುಗಳು ತಳ ಹಂತದಲ್ಲಿರುವ ಸಣ್ಣ ವ್ಯಾಪಾರಿಗಳಿಗೆ ಸಾಲ ನೀಡುವ ಮೂಲಕ ದೇಶದ ಬೆಳವಣಿಗೆಯಲ್ಲಿ ದೊಡ್ಡ ಪಾತ್ರ ವಹಿಸಿವೆ ಎಂದು ಕುಮಾರಸ್ವಾಮಿ ತಿಳಿಸಿದರು.

ಕೇಂದ್ರ ಸರ್ಕಾರ ಸಹ ಸಹಕಾರಿ ವಲಯಕ್ಕೆ ಪ್ರತ್ಯೇಕ ಸಚಿವಾಲಯ ರೂಪಿಸುವ ಮೂಲಕ ಸಹಕಾರಿ ವಲಯಕ್ಕೆ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ ಎಂದು ಹೇಳಿದರು.

ಆದರೆ, ಸಹಕಾರಿ ವಲಯಗಳಲ್ಲಿ ರಾಜಕೀಯ ಪ್ರವೇಶಿಸಬಾರದು. ಈ ವಲಯದಲ್ಲಿ ರಾಜಕೀಯ ಪ್ರವೇಶಿಸಿದಾಗ ಆಗುವ ಪರಿಸ್ಥಿತಿಗಳನ್ನು ನಾನು ನೋಡಿದ್ದೇನೆ. ಸಹಕಾರಿ ವಲಯ ರಾಜಕೀಯ ಬಿಟ್ಟು ಜನರಿಗೆ ಒಳಿತು ಮಾಡುವ ಉದ್ದೇಶದಿಂದ ಕಾರ್ಯನಿರ್ವಹಿಸಬೇಕು ಎಂದರು.

ದಾವಣಗೆರೆ ಜಿಲ್ಲೆ ಈ ಹಿಂದೆ ಹತ್ತಿ ಗಿರಣಿ ಹಾಗೂ ಎಣ್ಣೆ ಕಾರ್ಖಾನೆಗಳಿಂದ ಹೆಸರಾಗಿತ್ತು. ವಾಣಿಜ್ಯ ಕೇಂದ್ರವಾಗಿ ಬೆಳೆದಿತ್ತು. ಇಂದು ದಾವಣಗೆರೆಯು ಶೈಕ್ಷಣಿಕ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರಿನಂತಹ ನಗರಗಳ ಹೊರತಾಗಿ ದಾವಣಗೆರೆಯಂತಹ ಜಿಲ್ಲೆಗಳೂ ದೇಶದ ಬೆಳವಣಿಗೆಯಲ್ಲಿ ತಮ್ಮದೇ ಆದ ಪಾಲು ಹೊಂದಿವೆ ಎಂದವರು ಹೇಳಿದರು.

ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್ 11 ಶಾಖೆಗಳನ್ನು ತೆರೆಯುವ ಮೂಲಕ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ. ವೃದ್ಧರು ಹಾಗೂ ದಿವ್ಯಾಂಗರ ನೆರವಿಗಾಗಿ ಬ್ಯಾಂಕ್ 15 ಲಕ್ಷ ರೂ.ಗಳ ನೆರವು ನೀಡಿದೆ. ಇದು ಶ್ಲಾಘನೀಯ ಕೆಲಸ ಎಂದು ಕುಮಾರಸ್ವಾಮಿ ತಿಳಿಸಿದರು.

'ಹೊನ್ನ ಮುಕುಟ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿ ಮಾತನಾಡಿದ ಮಾಜಿ ಕೇಂದ್ರ ಸಚಿವ ಜಿ.ಎಂ. ಸಿದ್ದೇಶ್ವರ, 1972ರಲ್ಲಿ ಆರಂಭವಾದ ಮೊದಲ ವರ್ಷದಲ್ಲಿ 274 ರೂ. ಲಾಭ ಗಳಿಸಿದ್ದ ಬ್ಯಾಂಕ್ ಈಗ 5.86 ಕೋಟಿ ರೂ.ಗಳ ಲಾಭ ಗಳಿಸಿದೆ. ಬ್ಯಾಂಕ್‌ನ ಎನ್.ಪಿ.ಎ. ಪ್ರಮಾಣ ಕಡಿಮೆ (4ನೇ ಪುಟಕ್ಕೆ)

## ಸುಳ್ಳು ಮೊಕದ್ದಮೆಗಳು ವಾಪಸ್

### ಹುಬ್ಬಳ್ಳಿ ಗಲಭೆ ಪ್ರಕರಣ ವಾಪಸ್ ಪಡೆದಿದ್ದಕ್ಕೆ ಸಿಎಂ ಸಿದ್ದರಾಮಯ್ಯ ಸಮರ್ಥನೆ



**ಸಂಪುಟ ಉಪ ಸಮಿತಿಯ ಶಿಫಾರಸ್ಸಿನಂತೆ ಪ್ರಕರಣಗಳನ್ನು ವಾಪಸ್ ಪಡೆಯಲಾಗಿದೆ. ಬಿಜೆಪಿ ಸರ್ಕಾರದ ವೇಳೆ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲಿದ್ದ ಪ್ರಕರಣಗಳನ್ನು ವಾಪಸ್ ಪಡೆದಿತ್ತು**

ಹುಬ್ಬಳ್ಳಿ, ಅ. 13 - ಹುಬ್ಬಳ್ಳಿ ಗಲಭೆಗೆ ಸಂಬಂಧಿಸಿದಂತೆ ಪ್ರಕರಣ ವಾಪಸ್ ಪಡೆದಿರುವ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಪುಟ ಉಪ ಸಮಿತಿ ಶಿಫಾರಸ್ಸಿನ ಅನ್ವಯ ಕ್ರಮ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸುಳ್ಳು ಮೊಕದ್ದಮೆ, ಉದ್ದೇಶಪೂರ್ವಕ ಮೊಕದ್ದಮೆ ಹಾಗೂ ಹೋರಾಟಕ್ಕೆ ಸಂಬಂಧಿಸಿದಂತೆ ಪ್ರಕರಣಗಳು ದಾಖಲಾಗಿದ್ದರೆ ಅವುಗಳನ್ನು ವಾಪಸ್ ಪಡೆಯಲಾಗುತ್ತದೆ ಎಂದಿದ್ದಾರೆ.

ಈ ಬಗ್ಗೆ ಸಂಪುಟ ಉಪ ಸಮಿತಿ ರಚಿಸಲಾಗಿತ್ತು. ಸಂಪುಟ ಉಪ ಸಮಿತಿಯ ಶಿಫಾರಸ್ಸಿನಂತೆ ಪ್ರಕರಣಗಳನ್ನು ವಾಪಸ್ ಪಡೆಯಲಾಗಿದೆ. ಇದು ಎಲ್ಲ ಕಾಲದಲ್ಲೂ ನಡೆದು ಬಂದಿದೆ ಎಂದು ಸಿದ್ದರಾಮಯ್ಯ ತಿಳಿಸಿದರು.

ರಾಜ್ಯ ಸಂಪುಟ 43 ಪ್ರಕರಣಗಳನ್ನು ವಾಪಸ್ ಪಡೆಯಲು ನಿರ್ಧರಿಸಿತ್ತು. ಇದರಲ್ಲಿ ಹುಬ್ಬಳ್ಳಿ ಗಲಭೆ ಪ್ರಕರಣ ಸಹ ಸೇರಿತ್ತು. ಪೊಲೀಸ್ ಠಾಣೆಯ ಮೇಲೆ ದಾಳಿ ನಡೆಸಿದ ಪ್ರಕರಣವನ್ನು ವಾಪಸ್ ಪಡೆಯಲು ಸರ್ಕಾರ ಮುಂದಾಗಿದ್ದನ್ನು ಬಿಜೆಪಿ ತೀವ್ರವಾಗಿ ಖಂಡಿಸಿದೆ.

ಸುಳ್ಳು ಪ್ರಕರಣಗಳು ದಾಖಲಾಗಿದ್ದರೆ, ಉದ್ದೇಶಪೂರ್ವಕವಾಗಿ ಪ್ರಕರಣಗಳನ್ನು ದಾಖಲಿಸಿದ್ದರೆ ಅಥವಾ ಹೋರಾಟಗಳಿಗೆ ಸಂಬಂಧಿಸಿದಂತೆ ಪ್ರಕರಣಗಳನ್ನು ದಾಖಲಿಸಿದ್ದರೆ, ಅವುಗಳನ್ನು ಪರಿಶೀಲಿಸಲು ಸಂಪುಟ ಉಪಸಮಿತಿ ರಚಿಸಲಾಗುತ್ತದೆ. ಇದು (4ನೇ ಪುಟಕ್ಕೆ)

## ಕೈ ಸರ್ಕಾರದಿಂದ ಗಲಭೆಕೋರರಿಗೆ ರಕ್ಷಣೆ

**ಹುಬ್ಬಳ್ಳಿ ಗಲಭೆ ಪ್ರಕರಣ ವಾಪಸ್ ಪಡೆದ ಸರ್ಕಾರಕ್ಕೆ ಕುಮಾರಸ್ವಾಮಿ ತರಾಟೆ**



ದಾವಣಗೆರೆ, ಅ. 13 - ರಾಜ್ಯ ಕಾಂಗ್ರೆಸ್ ಸರ್ಕಾರ ದ್ವೇಷ ರಾಜಕಾರಣ ಮಾಡುತ್ತಿದೆ ಹಾಗೂ ಗಲಭೆಕೋರರಿಗೆ ರಕ್ಷಣೆ ನೀಡುತ್ತಿದೆ ಎಂದು ಕೇಂದ್ರ ಸಚಿವ ಹಾಗೂ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ಆರೋಪಿಸಿದ್ದಾರೆ.

ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹುಬ್ಬಳ್ಳಿಯಲ್ಲಿ ಕಾನೂನು ಬಾಹಿರ ಕೃತ್ಯ ಎಸಗಿದವರು, ಅಶಾಂತಿ ಮಾಡಿದವರು ಹಾಗೂ ಗಲಭೆ ಮಾಡಿದವರ ವಿರುದ್ಧದ ಪ್ರಕರಣವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿದೆ. ಆ ಮೂಲಕ ಗಲಭೆಕೋರರಿಗೆ ಸರ್ಕಾರದಿಂದ ರಕ್ಷಣೆ ದೊರೆತಿದೆ ಎಂದು ಟೀಕಿಸಿದರು.

ದಸರಾ ಹಬ್ಬದ ಸಂದರ್ಭದಲ್ಲಿ ಸರ್ಕಾರದಿಂದ ಪ್ರಕಟಿಸಲಾದ ಜಾಹೀರಾತಿ ನಲ್ಲೂ ಕೀಳು ಮಟ್ಟದ ರಾಜಕೀಯ ಮಾಡಲಾಗುತ್ತಿದೆ. ಇದನ್ನೆಲ್ಲ ನೋಡಿದಾಗ ಸರ್ಕಾರಕ್ಕೆ ಉತ್ತಮ ಮಾರ್ಗದಲ್ಲಿ ನಡೆಯುವುದು ಬೇಕಿಲ್ಲ ಎಂಬುದು ಗೊತ್ತಾಗುತ್ತದೆ ಎಂದು ಹೇಳಿದರು. ವಿಶೇಷ ತನಿಖಾ ತಂಡದ ಮುಖ್ಯಸ್ಥ (4ನೇ ಪುಟಕ್ಕೆ)

## ಬರದನಾಡು ಜಗಳೂರು ಇನ್ನು ಬಂಗಾರದ ನಾಡಾಗಲಿದೆ

### ಜಗಳೂರು ಕೆರೆ ವೀಕ್ಷಿಸಿ ಬಾಗಿನ ಅರ್ಪಿಸಿದ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ



ಜಗಳೂರು, ಅ.13- ಈ ವರ್ಷದಂತೆ ಪ್ರತಿ ವರ್ಷವೂ ಕೆರೆ ಕೋಡಿ ಬಿದ್ದು, ಬರದ ನಾಡು ಜಗಳೂರು ಶಾಶ್ವತವಾಗಿ ಬಂಗಾರದ ನಾಡಾಗುವುದು ನಿಶ್ಚಿತ ಎಂದು ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಆಶಯ ವ್ಯಕ್ತಪಡಿಸಿದರು.

ಪಟ್ಟಣದ ಕೆರೆ ಕೋಡಿ ಬಳಿ ಆಯೋಜಿಸಲಾಗಿದ್ದ ಕೆರೆ ವೀಕ್ಷಣೆ ಹಾಗೂ ಬಾಗಿನ ಅರ್ಪಣಾ ಕಾರ್ಯಕ್ರಮದಲ್ಲಿ ಬಾಗಿನ ಅರ್ಪಿಸಿ, ನಂತರ ದಿವ್ಯ ಸಾನ್ನಿಧ್ಯ ವಹಿಸಿ ಸ್ವಾಮೀಜಿ ಮಾತನಾಡಿದರು.

ಯಾವುದೇ ಯಂತ್ರೋಪಕರಣಗಳಿಲ್ಲದ ಕಾಲಘಟ್ಟದಲ್ಲಿ ರಾಜ ಮಹಾರಾಜರುಗಳು ಜನಪರ ಕಾಳಜಿಯಿಂದ ದೂರದೃಷ್ಟಿಯಿಂದ ನಿರ್ಮಿಸಿದ ಕೆರೆಗಳು ಮಧ್ಯ ಕರ್ನಾಟಕದಲ್ಲಿ ನೀರಾವರಿ ಜಾಲದಂತಿದ್ದು ಒಂದು ಕೆರೆ ಮತ್ತೊಂದು ಕೆರೆಯನ್ನು ಸಂಪರ್ಕ ಹೊಂದಲು ಶ್ರಮಿಸಿದ ಪೂರ್ವಜರ ಸತ್ಕಾರ್ಯದ ಫಲವಾಗಿ ಇಂದು ನೀರಾವರಿ ಸಂಪನ್ಮೂಲ ಬಳಕೆ ನಮ್ಮದಾಗಿದೆ ಎಂದು ಸ್ಮರಿಸಿದರು.

ಪಟ್ಟಣದಲ್ಲಿ 2019ರಲ್ಲಿ ನಡೆದ ತರಳಬಾಳು ಹುಣ್ಣಿಮೆಯಲ್ಲಿನ ಸಂಕಲ್ಪದಂತೆ ಎಚ್.ಪಿ.ರಾಜೇಶ್ ಸಹಕಾರದಿಂದ ಹಾಲಿ ಮುಖ್ಯಮಂತ್ರಿಯೂ ಆಗಿರುವ ಸಿದ್ದರಾಮಯ್ಯ ಜಗಳೂರು- ಮತ್ತು ಭರಮಸಾಗರ ನೀರಾವರಿ ಯೋಜನೆಗಳಿಗೆ 500 ಕೋಟಿ ರೂ. ಬಜೆಟ್‌ನಲ್ಲಿ ಘೋಷಿಸಿದ್ದರು.

ನಂತರ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಆಡಳಿತಾವಧಿಯಲ್ಲಿ ಮಾಜಿ ಶಾಸಕ ಎಸ್.ವಿ.ರಾಮಚಂದ್ರಗೆ ರಾಜೀನಾಮೆ ಸಲ್ಲಿಸಲು ಸೂಚಿಸಿದಾಗ, 5 ಜನ ಸಚಿವರುಗಳಿಗೆ ವಿರೋಧ ವ್ಯಕ್ತಪಡಿಸಿದ ವೇಳೆ ನಮ್ಮ ಬೇಡಿಕೆಯಂತೆ ವಾರದಲ್ಲಿಯೇ 1200ಕೋಟಿ ರೂ. ಅನುದಾನದ ಐತಿಹಾಸಿಕ ಮರು ಆದೇಶದ ಫಲವಾಗಿ ಹಲವಾರು ಕೆರೆಗಳು ನೀರು ತುಂಬಿ ಕೆರೆ ಕೋಡಿ ಬೀಳುತ್ತಿವೆ ಎಂದರು.

ಧರ್ಮ ಮತ್ತು ಕಾನೂನು ಒಗ್ಗೂಡಿದಾಗ ಯಶಸ್ವಿ ಸಾಧ್ಯ. ಧರ್ಮ ಗುರುಗಳ ಸಲಹೆಗಳನ್ನು ಪಕ್ಷಾತೀತವಾಗಿ ಸ್ವೀಕರಿಸಿದ ಎಲ್ಲಾ ಪಕ್ಷದ ರಾಜಕಾರಣಿಗಳು, ರೈತರು,ಅಧಿಕಾರಿಗಳಿಗೆ ಅಭಿನಂದನೆಗಳು ಎಂದರು.

ಬಾಕಿ ಇರುವ 11 ಕೆರೆಗಳ ಪೈಪ್ ಲೈನ್ ಕಾಮಗಾರಿಯನ್ನು ಒಂದು ತಿಂಗಳೊಳಗಾಗಿ ಪೂರ್ಣಗೊಳಿಸಿ, ದೀಟೂರು ಬಳಿ 8 ಪಂಪ್‌ಗಳೂ ಚಾಲನೆಗೊಂಡು ಕಾರ್ಯರೂಪಗೊಳ್ಳಲು ಶಾಸಕರು, ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಏತ ನೀರಾವರಿ ಸಾಮಾಜಿಕ ಜಾಲತಾಣ ಗ್ರೂಪ್ ರಚಿಸಿಲಾಗಿದ್ದು. ರೈತರಿಂದ ಪ್ರತಿನಿತ್ಯ ಕೆರೆಗಳ (2ನೇ ಪುಟಕ್ಕೆ)

## ಐದು ಎಕರೆ ಬೇಡವೆಂದ ಖರ್ಗೆ ಟ್ರಸ್ಟ್

### ಜಮೀನಿಗಾಗಿ ಕೆಐಎಡಿಬಿಗೆ ದಾಖಲಿಸಿದ್ದ ಮನವಿ ವಾಪಸ್

ಬೆಂಗಳೂರು ಅ. 13 - ಬೆಂಗಳೂರಿನಲ್ಲಿ ಬಹು ಕೌಶಲ್ಯಾಭಿವೃದ್ಧಿ ಕೇಂದ್ರ ತೆರೆಯಲು ಐದು ಎಕರೆ ಜಮೀನಿಗಾಗಿ ಸಲ್ಲಿಸಿದ್ದ ಮನವಿಯನ್ನು ಸಿದ್ದಾರ್ಥ ವಿಹಾರ ಟ್ರಸ್ಟ್ ಅಧ್ಯಕ್ಷ ರಾಹುಲ್ ಎಂ. ಖರ್ಗೆ ವಾಪಸ್ ಪಡೆದಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದ ಟ್ರಸ್ಟ್‌ಗೆ ಜಮೀನು ನೀಡಿದ್ದನ್ನು ಬಿಜೆಪಿ ಟೀಕಿಸಿತ್ತು. ಇದಕ್ಕೂ ಮುಂಚೆ ಮುಡಾದಿಂದ ಪಡೆಯಲಾಗಿದ್ದ 14 ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ವಾಪಸ್ ನೀಡಿದ್ದರು.

> **ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಕುಟುಂಬದವರು ತಪ್ಪು ಮಾಡಿರುವ ಕಾರಣದಿಂದ ಕೆಐಎಡಿಬಿಗೆ ಜಮೀನು ವಾಪಸ್ ನೀಡಿದ್ದಾರೆ. ಈಗ ಅವರಿಗೆ ತಪ್ಪಿನ ಅರಿವಾಗಿದೆ.**
>
> **- ಹೆಚ್.ಡಿ. ಕುಮಾರಸ್ವಾಮಿ, ಕೇಂದ್ರ ಸಚಿವ**

ಖರ್ಗೆ ಕುಟುಂಬದ ಟ್ರಸ್ಟ್‌ಗೆ ಜಮೀನು ನೀಡಿದ್ದನ್ನು ಟೀಕಿಸಿದ್ದ ಬಿಜೆಪಿ ಐ.ಟಿ. ವಿಭಾಗದ ಉಸ್ತುವಾರಿ ಅಮಿತ್ ಮಾಳವೀಯ, ಇದು ಅಧಿಕಾರ ದುರ್ಬಳಕೆ, ಪಕ್ಷಪಾತ ಹಾಗೂ ಹಿತಗಳ ಸಂಘರ್ಷ ಎಂದಿದ್ದರು.

ಮಲ್ಲಿಕಾರ್ಜುನ ಖರ್ಗೆ ಅವರ (4ನೇ ಪುಟಕ್ಕೆ)

## ಸಮಸ್ಯೆಗಳಿಗೆ ಶಾಶ್ವತ ಮುಕ್ತಿ ಅಗತ್ಯ



**ಸಚಿವ ಎಸ್ಸೆಸ್ಸೆಂ**

ದಾವಣಗೆರೆ, ಅ.13- ಈ ಹಿಂದೆ ಮಳೆಯಾದರೆ ಎಪಿಎಂಸಿ ಮಾರುಕಟ್ಟೆ ಹಾಗೂ ತಗ್ಗು ಪ್ರದೇಶದ ವ್ಯಾಪಾರಿಗಳು ತತ್ತರಿಸಿ ಹೋಗುತ್ತಿದ್ದರು. ಪ್ರಸ್ತುತ ವಾತವರಣ ಬದಲಾಗಿದೆ. ಎಂತಹ ಮಳೆಯಾದರೂ ಮಳೆ ನೀರು ನಿಲ್ಲದೆ ಸರಾಗವಾಗಿ ಹರಿಯುತ್ತಿದೆ. ಯಾವುದೇ ಸಮಸ್ಯೆಗಳಿದ್ದರೂ ಅವುಗಳಿಗೆ ಶಾಶ್ವತವಾದ ಮುಕ್ತಿ ದೊರಕುವಂಥಹ ಕಾರ್ಯಗಳಾಗಬೇಕು ಎಂದು ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ತಿಳಿಸಿದರು.

ತಮ್ಮ ಗೃಹ ಕಚೇರಿ ಆವರಣದಲ್ಲಿ ರೈತರುಗಳ ಸಮಸ್ಯೆಗಳನ್ನು ಆಲಿಸಿ ಮನವಿಯನ್ನು ಸ್ವೀಕರಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಸರ್ವೇ ಕಾರ್ಯಗಳು, ಕೆರೆಗಳ ಭರ್ತಿ, ಹೊಸ ಕೆರೆಗಳ ನಿರ್ಮಾಣ, ಅರಣ್ಯೀಕರಣ, ಪರಿಸರ ರಕ್ಷಣೆ ಹಾಗೂ ಮಾಲಿನ್ಯ ತಡೆ ಸೇರಿದಂತೆ ಅನೇಕ ಸಮಸ್ಯೆಗಳ ಬಗ್ಗೆ ರೈತರು ಜಿಲ್ಲಾ ಸಚಿವರ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಜಿಲ್ಲಾಡಳಿತ, ಜಿಲ್ಲಾ ಸರ್ವೇ ಅಧಿಕಾರಿಗಳು ಮುಂತಾದ ಸಂಬಂಧ ಪಟ್ಟ ಇಲಾಖೆಯೊಂದಿಗೆ ಚರ್ಚಿಸಿ ಸಮಸ್ಯೆಗಳನ್ನು ಬಗೆಹರಿಸುವ ಬಗ್ಗೆ ತಿಳಿಸಿದರು.

ರೈತ ಮುಖಂಡ ಬಲ್ಲೂರು ರವಿಕುಮಾರ್, ಜಿಲ್ಲೆಯಲ್ಲಿ ಹೊಸ ಕೆರೆಗಳ ನಿರ್ಮಾಣಕ್ಕೆ ಮನವಿ ಸಲ್ಲಿಸಿ, ಎಲ್ಲಾ ತಾಲ್ಲೂಕುಗಳಲ್ಲಿ ಸರ್ಕಾರಿ ಜಮೀನುಗಳಿವೆ ಪ್ರತಿ ತಾಲ್ಲೂಕಿಗೆ ಎರಡು ಹೊಸ ಕೆರೆಗಳನ್ನು ನಿರ್ಮಾಣ ಮಾಡಿದರೆ ಅಂತರ್ಜಲ ಮಟ್ಟ ಹೆಚ್ಚಳವಾಗಿ ನೀರಿನ ಭವಣೆ ನೀಗುವುದು ಎಂದರು.

ಸಚಿವರು ಸಂಬಂಧ ಪಟ್ಟವರೊಂದಿಗೆ ಚರ್ಚಿಸಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರೈತ ಮುಖಂಡರುಗಳು ಕಾರ್ಯಕರ್ತರು ಇದ್ದರು.

## ಆಯುಷ್ಮಾನ್‌ಗೆ ಇನ್ನಷ್ಟು ಚಿಕಿತ್ಸಾ ಪ್ಯಾಕೇಜ್

**70 ವರ್ಷ ಮೀರಿದ ಎಲ್ಲರೂ ಯೋಜನೆಗೆ ಸೇರ್ಪಡೆ, ಹೆಚ್ಚುವರಿಯಾಗಿ 5 ಲಕ್ಷ ರೂ.ಗಳ ಆರೋಗ್ಯ ವಿಮೆ**


ನವದೆಹಲಿ, ಅ. 13 - ಆಯುಷ್ಮಾನ್ ಭಾರತ್ ಯೋಜನೆಗೆ ಇನ್ನಷ್ಟು ಚಿಕಿತ್ಸಾ ಪ್ಯಾಕೇಜ್‌ಗಳನ್ನು ಸೇರ್ಪಡೆ ಮಾಡಲು ಈ ಯೋಜನೆ ಜಾರಿಗೆ ತರುವ ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ ಪರಿಶೀಲಿಸುತ್ತಿದೆ.

70 ವರ್ಷ ಮೀರಿದ ಎಲ್ಲರನ್ನೂ ಆಯುಷ್ಮಾನ್ ಭಾರತ್ ಯೋಜನೆಗೆ ಸೇರ್ಪಡೆ ಮಾಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಈ ಹಿನ್ನೆಲೆಯಲ್ಲಿ ಹೆಚ್ಚಿನ ಪ್ಯಾಕೇಜ್ ಸೇರ್ಪಡೆಗೆ ಪರಿಶೀಲಿಸಲಾ ಗುತ್ತಿದೆ. ಸರ್ಕಾರದ ನಿರ್ಧಾರದಿಂದ 4.5 ಕೋಟಿ ಕುಟುಂಬಗಳ ಆರು ಕೋಟಿ ಜನರಿಗೆ ನೆರವಾಗಲಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಹೆಚ್ಚಿನ ಆರೋಗ್ಯ ಪ್ಯಾಕೇಜ್‌ಗಳನ್ನು ಸೇರ್ಪಡೆ ಮಾಡಲು ಸಂಬಂಧಿಸಿದ ಸಮಿತಿಯು ಪರಿಶೀಲಿಸುತ್ತಿದೆ. ಪ್ರಸಕ್ತ 1,949 ಆರೋಗ್ಯ ಪ್ಯಾಕೇಜ್‌ಗಳನ್ನು ಯೋಜನೆಗೆ ಸೇರ್ಪಡೆ ಮಾಡಲಾಗಿದೆ.

ಪ್ರಸಕ್ತ ಈ ಯೋಜನೆಯ ಅನ್ವಯ ಆಸ್ಪತ್ರೆಯಿಂದ (4ನೇ ಪುಟಕ್ಕೆ)


## ನಾಲ್ಕನೇ ವರ್ಷದ ಪುಣ್ಯಸ್ಮರಣೆ



ಹರಿಹರ ತಾ. ನಿಟ್ಟೂರು ಗ್ರಾಮದ ಹಿರಿಯರು,
ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷರೂ,
ಭದ್ರಾ ಕಾಡಾ ಸಮಿತಿ ಮಾಜಿ ಸದಸ್ಯರಾದ

**ಶ್ರೀ ನಿಟ್ಟೂರು ಪಟೇಲ್ ನಾಗಪ್ಪ**

(ಮರಣ : 14.10.2020)

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು
ನಿಮ್ಮ ನೆನಪು ನಮ್ಮಲ್ಲಿ ಸದಾ ಹಸಿರಾಗಿದೆ.
ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪವಾಗಿದೆ.
ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥಿಸುವ....
ನಿಮ್ಮ ಕುಟುಂಬ ವರ್ಗ

✦ ಶ್ರೀ ಪಟೇಲ್ ಹಾಲಸ್ವಾಮಿ ✦ ಶ್ರೀಮತಿ ಕವಿತಾ, ಶ್ರೀ ದಾನಪ್ಪ
✦ ಶ್ರೀಮತಿ ಅನಿತಾ ಶ್ರೀ ಸಂತೋಷ್ ✦ ಶ್ರೀಮತಿ ಶೃತಿ ಪಟೇಲ್, ಸತೀಶ್ ಪಟೇಲ್
✦ ಮೊಮ್ಮಕ್ಕಳಾದ : ಸುಕೇಶ್ ಪಟೇಲ್, ಹಿತೇಶ್ ಪಟೇಲ್,
ವಂಶಸ್ಥರು ಹಾಗೂ ಬಂಧು-ಮಿತ್ರರು, ನಿಟ್ಟೂರು ಗ್ರಾಮಸ್ಥರು.

|| ಶ್ರೀ ಬೋರಲಿಂಗೇಶ್ವರ ಸ್ವಾಮಿ ಪ್ರಸನ್ನ ||

## ಏಳನೇ ವರ್ಷದ ಪುಣ್ಯಸ್ಮರಣೆ



ಜನನ : 02-08-1944

ನಿಧನ : 14-10-2017

ಉಸಿರು ಹೋದರೂ ಹೆಸರು ಉಳಿಸಿದ

**ಲಿಂಗೈಕ್ಯ ಶರಣ ಎ. ಲಿಂಗಪ್ಪನವರು**

ನಿವೃತ್ತ ಪ್ರಾಂಶುಪಾಲರು, ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿ ಪುರಸ್ಕೃತರು
ಧರ್ಮದರ್ಶಿಗಳು, ವಾಲ್ಮೀಕಿ ಗುರುಪೀಠ, ರಾಜನಹಳ್ಳಿ, ಹರಿಹರ.

ನೀವು ನಮ್ಮನ್ನಗಲಿ ಇಂದಿಗೆ ಏಳು ವರ್ಷಗಳಾದವು. ನಿಮ್ಮ ನೆನಪು ಸದಾ ಹಚ್ಚ ಹಸಿರಾಗಿದ್ದು, ನಿಮ್ಮ ಪ್ರೀತಿ - ವಾತ್ಸಲ್ಯ - ಆದರ್ಶ - ಶಿಸ್ತು - ಪ್ರಾಮಾಣಿಕತೆ ಮತ್ತು ಶ್ರಮದ ಕಾಯಕತ್ವವು ನಮಗೆಲ್ಲಾ ಆದರ್ಶವಾಗಿವೆ. ನೀವು ತೋರಿದ ಸನ್ಮಾರ್ಗದಲ್ಲಿ ಮುನ್ನಡೆಯುತ್ತಿದ್ದೇವೆ. ಪರಮಾತ್ಮನು ನಿಮ್ಮ ಪವಿತ್ರ ಆತ್ಮಕ್ಕೆ ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಧರ್ಮಪತ್ನಿ: ಶ್ರೀಮತಿ ಆರ್.ಟಿ. ಇಂದಿರಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು.
ದೂರವಾಣಿ : 08192-260523 ಮೊಬೈಲ್: 94483 25178

# ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕೆ ನಿರ್ದೇಶನ

## ಪಂಚ ಗ್ಯಾರಂಟಿ ಯೋಜನೆಗಳ ಸಭೆಯಲ್ಲಿ ಪ್ರಾಧಿಕಾರದ ಹರಿಹರ ತಾಲ್ಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್



ಹರಿಹರ, ಅ.13- ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಕ್ಕೆ ತರುವ ಕೆಲಸವನ್ನು ಮಾಡುವಂತೆ ಪಂಚ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಹರಿಹರ ತಾಲ್ಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಅಧಿಕಾರಿಗಳಿಗೆ ಹೇಳಿದರು.

ನಗರದ ತಾಪಂ ಕಚೇರಿಯ ಸಭಾಂಗಣದಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಗಳ ಸಭೆಯ ಅಧ್ಯಕ್ಷತೆ ವಹಿಸಿ, ಅವರು ಮಾತನಾಡಿದರು.

ಯಾವುದೇ ರೀತಿಯ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಜನರಿಗೆ ತಲುಪಬೇಕಾದರೇ, ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕಾರ್ಯವೈಖರಿ ಮುಖ್ಯವಾಗಿರುತ್ತವೆ. ಆದ್ದರಿಂದ ಲೋಪಗಳು ಆಗದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ಹರಿಹರ ನಗರಕ್ಕೆ ಗುತ್ತೂರು, ದೀಟೂರು, ಸಾರಥಿ, ಗಂಗನಹರಸಿ ಕಡೆಯಿಂದ ಶಾಲಾ-ಕಾಲೇಜುಗಳಿಗೆ ಬರುವಂತ ವಿದ್ಯಾರ್ಥಿಗಳಿಗೆ ತೊಂದರೆ ಆಗದಂತೆ ಬಸ್ ವ್ಯವಸ್ಥೆ ಮಾಡಬೇಕು, ನ್ಯಾಯಬೆಲೆ ಅಂಗಡಿಗಳಲ್ಲಿ ನೀಡುವ ಅಕ್ಕಿ ದುರ್ಬಳಕೆಗೆ ಕಡಿವಾಣ ಹಾಕಬೇಕು.

ತಾಲ್ಲೂಕಿನಲ್ಲಿ ಗೃಹ ಲಕ್ಷ್ಮಿ ಯೋಜನೆ ಹಣ ಯಾವ ವ್ಯಕ್ತಿಗಳಿಗೆ ತಲುಪಿರುವುದಿಲ್ಲವೋ ಅವರ ಹೆಸರನ್ನು ಪಟ್ಟಿ ಮಾಡಿ ಸರ್ಕಾರಕ್ಕೆ ಪತ್ರವನ್ನು ಹಾಕಿ ಅವರಿಗೂ ಕೂಡ ಆದಷ್ಟು ಬೇಗ ಹಣವನ್ನು ತಲುಪಿಸುವ ಕೆಲಸವನ್ನು ಮಾಡಬೇಕು ಎಂದರು.

ತಾಪಂ ಇಓ ಸುಮಲತಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿಡಿಪಿಓ ಪೂರ್ಣಿಮಾ ಮಾತನಾಡಿ, ಗೃಹಲಕ್ಷ್ಮಿ ಯೋಜನೆ ಅಡಿಯಲ್ಲಿ 57242 ಅರ್ಜಿಗಳು ಬಂದಿದ್ದು, ಅದರಲ್ಲಿ 52.800 ಅರ್ಜಿದಾರರ ಖಾತೆಗೆ 2 ಸಾವಿರ ಹಣವನ್ನು ಹಾಕಲಾಗಿದೆ.

ಉಳಿದ 3877 ಅರ್ಜಿಗಳು ತಾಂತ್ರಿಕ ದೋಷ ಸರಿಪಡಿಸಿದ ನಂತರ ಅವರ ಖಾತೆಗೆ ಹಣ ಜಮಾ ಆಗಲಿದೆ, ಅದರಲ್ಲಿ 24 ಜನರು ಮರಣವನ್ನು ಹೊಂದಿದ್ದು 330 ಅರ್ಜಿಗಳನ್ನು ತಡೆಹಿಡಿಯಲಾಗಿದೆ ಎಂದು ಹೇಳಿದರು.

ಆಹಾರ ಶಿರಸ್ತೇದಾರ ಮಂಜುನಾಥ್ ಮಾತನಾಡಿ, ಅನ್ನಭಾಗ್ಯ ಯೋಜನೆ ಅಡಿಯಲ್ಲಿ 57690 ಬಿಪಿಎಲ್ ಮತ್ತು ಅಂತ್ಯೋದಯ ಕಾರ್ಡ್ ಫಲಾನುಭವಿಗಳ ಖಾತೆಗೆ 340 ಮತ್ತು 170 ರೂಪಾಯಿ ಹಣವನ್ನು ಜಮಾ ಮಾಡಲಾಗಿದೆ. ಪಡಿತರ ಚೀಟಿಗೆ 120 ಹೊಸದಾಗಿ ಅರ್ಜಿಗಳು ಬಂದಿವೆ. ಅಕ್ರಮ ಅಕ್ಕಿ ಸಾಗಾಟ ಮಾಡುವ ವ್ಯಕ್ತಿಗಳ ಮೇಲೆ ಇಲ್ಲಿಯವರೆಗೂ 28 ಪ್ರಕರಣಗಳನ್ನು ದಾಖಲು ಮಾಡಲಾಗಿದೆ ಎಂದು ಹೇಳಿದರು.

ಬೆಸ್ಕಾಂ ಇಲಾಖೆ ಅಧಿಕಾರಿ ನಾಗರಾಜ್ ನಾಯ್ಕ್ ಮಾತನಾಡಿ, ತಾಲ್ಲೂಕಿನಲ್ಲಿ ತಿಂಗಳಿಗೆ 2 ಕೋಟಿ 40 ಲಕ್ಷ ರೂಪಾಯಿ ಉಚಿತ ವಿದ್ಯುತ್ ಬಿಲ್ ಪಾವತಿ ಮಾಡ ಲಾಗಿದ್ದು, ಇದುವರೆಗೂ 33 ಕೋಟಿ 81 ಲಕ್ಷ ರೂಪಾಯಿ ಪಾವತಿ ಮಾಡಲಾಗಿದೆ. ಇತ್ತೀಚೆಗೆ ಸರ್ಕಾರದ 100 ಪ್ಲಸ್ 10 ಯೂನಿಟ್‌ಗೆ ಮಾತ್ರ ಉಚಿತ ನೀಡುತ್ತಿದ್ದು, 200 ಯೂನಿಟ್ ಹೆಚ್ಚು ವಿದ್ಯುತ್ ಬಳಕೆ ಮಾಡಿದರೆ ಪೂರ್ಣ ಪ್ರಮಾಣದಲ್ಲಿ ಹಣವನ್ನು ಕಟ್ಟಿಸಿಕೊಳ್ಳುವಂತೆ, 100 ರೂಪಾಯಿ ಬಾಕಿ ಇದ್ದರೂ ಸಹ ವಿದ್ಯುತ್ ಸಂಪರ್ಕ ಕಡಿತಗೊಳಿಸುವಂತೆ ಆದೇಶವನ್ನು ನೀಡಲಾಗಿದೆ ಎಂದು ಹೇಳಿದರು.

ಕೆ.ಎಸ್.ಆರ್.ಟಿ.ಸಿ. ಅಧಿಕಾರಿ ಹನುಮಂತಪ್ಪ ಮಾತನಾಡಿ, ತಾಲ್ಲೂಕಿನಲ್ಲಿ ಮೊದಲು 116 ಬಸ್ ರೂಟ್ ಇದ್ದವು, ಈಗ ಅದನ್ನು 136 ಕ್ಕೆ ಏರಿಸಲಾಗಿದೆ. ಹರಿಹರ ಡಿಪೋ ವ್ಯಾಪ್ತಿಯಲ್ಲಿ ಬರುವ ವಾಹನಗಳಿಂದ ತಿಂಗಳಲ್ಲಿ 1 ಕೋಟಿ 38 ಲಕ್ಷದ 68 ಸಾವಿರ ರೂಪಾಯಿ ಆಗಿದ್ದು, ಇಲ್ಲಿಯವರೆಗೂ 50 ಕೋಟಿ 92 ಲಕ್ಷ ರೂಪಾಯಿ ಮಹಿಳೆಯರ ಉಚಿತ ಪ್ರಯಾಣಕ್ಕೆ ಖರ್ಚು ಆಗಿದೆ ಎಂದು ಹೇಳಿದರು.

ವಿದ್ಯಾನಿಧಿ ಯೋಜನೆಯಿಂದ 2287 ಪದವಿ ಮತ್ತು ಡಿಪ್ಲೋಮಾ ಮಾಡಿರುವ 18 ವಿದ್ಯಾರ್ಥಿಗಳಿಗೆ ಒಟ್ಟು 4 ಕೋಟಿ 75 ಲಕ್ಷದ 65 ಸಾವಿರ ರೂಪಾಯಿ ಹಣವನ್ನು ಖಾತೆಗೆ ಜಮಾ ಮಾಡಲಾಗಿದೆ ಎಂದು ಇಲಾಖಾ ಅಧಿಕಾರಿ ರವೀಂದ್ರ ಹೇಳಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ನಿರ್ದೇಶಕರಾದ ಸಂತೋಷ ನೋಟದರ್, ಹೆಚ್ ವಿಶ್ವನಾಥ್, ವೈ.ಎಸ್. ಶಂಕರ್, ಎಂ ಮಂಜುನಾಥ್, ಜಿ. ಕೃಷ್ಣಪ್ಪ, ಪಿ.ಆರ್. ನವೀನ್, ಎ.ಬಿ. ಚಂದ್ರಪ್ಪ, ಸಚ್ಚಿನ್ ಕೊಂಡಜ್ಜಿ, ಹಬೀಬುಲ್ಲಾ ಬೇಗ್ , ಸವಿತಾ ನಾಯ್ಕ್, ಜೆ.ಪಿ. ಪಕ್ಕಿರೇಶ್, ವೈ.ಎನ್. ನಾಗರಾಜ್ , ಮುಖಂಡರಾದ ಎಂ. ಬಿ. ಅಭಿದಾಲಿ, ಕಮಲಪುರ ಮಲ್ಕೇಶ್ ಮತ್ತು ತಾಪಂ ಸಿಬ್ಬಂದಿಗಳು ಹಾಜರಿದ್ದರು.

## ನಿಷ್ಠಾವಂತ ಕಾರ್ಯಕರ್ತರ ಕಡೆಗಣನೆ ಸೋಮಲಾಪುರ ಹನುಮಂತಪ್ಪ ವ್ಯಾಕುಲತೆ



ದಾವಣಗೆರೆ, ಅ. 13- ಕಳೆದ 50-60 ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕಾಗಿ ದುಡಿದ ಮತ್ತು ಈಗಲೂ ದುಡಿಯುತ್ತಿರುವ ನಿಷ್ಠಾವಂತ ಕಾರ್ಯಕರ್ತ ರಿದ್ದಾರೆ. ಆದರೂ ಇತ್ತೀಚಿಗೆ ಪಕ್ಷಕ್ಕೆ ವಲಸೆ ಬಂದ ಕಾರ್ಯಕರ್ತರಿಗೆ ಪಕ್ಷದಲ್ಲಿ ಸ್ಥಾನಮಾನ ನೀಡುತ್ತಿರುವುದು ಖಂಡನೀಯ ಎಂದು ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಕೆಪಿಸಿಸಿ ಎಸ್ಸಿ ವಿಭಾಗದ ಕಾರ್ಯದರ್ಶಿ ಸೋಮಲಾಪುರದ ಹನುಮಂತಪ್ಪ ಹೇಳಿದ್ದಾರೆ.

ಈ ಸಂಬಂಧ ಅವರು, ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷರೂ, ಶಾಸಕರೂ ಆದ ಡಾ. ಶಾಮನೂರು ಶಿವಶಂಕರಪ್ಪ, ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ನಿಷ್ಠಾವಂತ ಕಾರ್ಯಕರ್ತರನ್ನು ಕಡೆಗಣಿಸಿದ ಪರಿಣಾಮ ಕಳೆದ ಬಾರಿ ಸರ್ಕಾರ ಸಂಪೂರ್ಣವಾಗಿ ಸೋತಿರುವುದು, ಎಲ್ಲರಿಗೂ ತಿಳಿದ ವಿಷಯವಾಗಿದೆ. ರಾಜ್ಯ ಸರ್ಕಾರದಲ್ಲಿ ನೂರಾರು ನಿಗಮ ಮಂಡಳಿಗಳಿದ್ದರೂ ನಿಷ್ಠಾವಂತ ಕಾರ್ಯಕರ್ತರನ್ನು ಗುರುತಿಸದೇ ಕಡೆಗಣಿಸಿರುವುದು ವಿಷಾದದ ಸಂಗತಿ. ನಾನು ಕೂಡ ಒಬ್ಬ ನಿಷ್ಠಾವಂತ ಕಾರ್ಯಕರ್ತ ನಿಗಮ ಮಂಡಳಿಗೆ ನೇಮಕ ಮಾಡುವಂತೆ ಒತ್ತಾಯಿಸಿದ್ದಾರೆ.

ಮನವಿ ಸಲ್ಲಿಸುವ ಸಂದರ್ಭದಲ್ಲಿ ಪುನೀತ್ ರಾಜಕುಮಾರ್ ಬಡಾವಣೆಯ ಹಿತರಕ್ಷಣಾ ಸಮಿತಿ ಗೌರವಾಧ್ಯಕ್ಷ ಮಂಜುನಾಥ್ ಕಲಘಟಗಿ, ಗಾಂಧೀಜಿ ಹರಿಜನ ಯುವಕ ಸಂಘದ ನಿರ್ದೇಶಕರಾದ ಗುಡದಪ್ಪ, ಅಜ್ಜಯ್ಯ, ಲಕ್ಕಪ್ಪ, ಅನಿಕೇತನ ಪೋಟೋ ಸ್ಟುಡಿಯೋ ಮಾಲೀಕರಾದ ಚಂದ್ರಶೇಖರ ತೆಗ್ಗಿನಮಠ ಮತ್ತಿತರರು ಇದ್ದರು.

## ಗರ್ಭಿಣಿಯರು ವೈದ್ಯರ ಸಲಹೆ ಮೇರೆಗೆ ಔಷಧಿ ತೆಗೆದುಕೊಳ್ಳಿ : ಡಾ. ಪ್ರಶಾಂತ್



ಮಲೇಬೆನ್ನೂರು, ಅ.13- ಗರ್ಭಿಣಿಯರಲ್ಲಿ ಶೇ. 60ರಷ್ಟು ಮಹಿಳೆಯರು ರಕ್ತಹೀನತೆಗೆ ಒಳಗಾಗುತ್ತಿದ್ದಾರೆ. ಹಾಗಾಗಿ ಅವರು ವೈದ್ಯರ ಸಲಹೆ ಮೇರೆಗೆ ಔಷಧಿ ತೆಗೆದುಕೊಂಡು ಹಿಮೋಗ್ಲೋಬಿನ್ ಹೆಚ್ಚಿಸಿಕೊಂಡು ಸ್ವಾಸ್ಥ್ಯ ವಾಗಿರುವಂತೆ ವೈದ್ಯಾಧಿಕಾರಿ ಡಾ. ಪ್ರಶಾಂತ್ ಹೇಳಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಬುಧವಾರ ಹಮ್ಮಿಕೊಂಡಿದ್ದ ಪ್ರಧಾನ ಮಂತ್ರಿ ಸುರಕ್ಷತಾ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಾಮಾನ್ಯವಾಗಿ ಗರ್ಭಿಣಿಯರು ಕಬ್ಬಿಣಾಂಶದ ಮಾತ್ರೆಗಳನ್ನು ಊಟದ ನಂತರ ನುಂಗುತ್ತಾರೆ. ಈ ರೀತಿ ನುಂಗುವುದರಿಂದ ಮಾತ್ರೆಯಲ್ಲಿರುವ ಕಬ್ಬಿನಾಂಶ ಹೀರುವಿಕೆ ಕಡಿಮೆಯಾಗುತ್ತದೆಯೇ ಹೊರತು ವೃದ್ಧಿಯಾಗುವುದಿಲ್ಲ. ಆದ್ದರಿಂದ ಊಟವಾದ ತಾಸಿನ ನಂತರ ಕಬ್ಬಿಣಾಂಶದ ಮಾತ್ರೆಗಳನ್ನು ತೆಗೆದುಕೊಳ್ಳಬೇಕು ಎಂದರು.

ಮಾತ್ರೆ ನುಂಗಿದಾಗ ಹಾಲು ಹಾಗೂ ಬೇಕರಿ ಪದಾರ್ಥಗಳನ್ನು ಸೇವಿಸಬಾರದು. ಈ ರೀತಿ ಪಾಲನೆ ಮಾಡುವುದರಿಂದ ಕಬ್ಬಿನಾಂಶ ಇರುವಿಕೆ ಕಡಿಮೆಯಾಗಿ ರಕ್ತ ವೃದ್ಧಿಯಾಗುತ್ತದೆ. ಇದರಿಂದ ತಾಯಿ ಹಾಗೂ ಮಗುವಿನ ಮರಣ ತಡೆಗಟ್ಟಬಹುದು ಎಂದು ಡಾ. ಪ್ರಶಾಂತ್ ಹೇಳಿದರು.

ತಾಲ್ಲೂಕು ಆರೋಗ್ಯ ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜ್ ಮಾತನಾಡಿ, ಗರ್ಭಿಣಿ ಅವಧಿಯಲ್ಲಿ ಆಹಾರಕ್ಕೆ ಸರಿಸಮಾನವಾಗಿ ಅಯೋಡಿನ್ ಉಪ್ಪನ್ನು ಬಳಸಬೇಕು. ಇದರಿಂದ ದಿನ ತುಂಬದ ಹೆರಿಗೆ ತಪ್ಪಿಸಬಹುದು ಹಾಗೂ ಹುಟ್ಟುವ ಮಕ್ಕಳು ಬುದ್ಧಿಮಾಂಧ್ಯರಾಗದಂತೆ ತಡೆಗಟ್ಟಬಹುದೆಂದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿಗಳಾದ ವಿಮಲ ಶೀಲಾ, ನಳಿನ, ಆಶಾ ಕಾರ್ಯಕರ್ತೆಯರು ಮತ್ತು ಗರ್ಭಿಣಿಯರು ಇದ್ದರು.

## ತುಂತುರು ನೀರಾವರಿ ಘಟಕಕ್ಕೆ ರೈತರಿಂದ ಅರ್ಜಿ ಆಹ್ವಾನ

ಹರಿಹರ,ಅ.13- ಲಘು ನೀರಾವರಿ ಯೋಜನೆ (ಪಿಎಂಕೆಎಸ್‌ವೈ) ಅಡಿಯಲ್ಲಿ ರೈತರು ತುಂತುರು ನೀರಾವರಿ ಘಟಕಗಳನ್ನು ಪಡೆಯಲು ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರಗಳಿಗೆ ಅರ್ಜಿ ಸಲ್ಲಿಸುವಂತೆ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಎಲ್ಲಾ ಸಾಮಾನ್ಯ, ಪ.ಜಾತಿ ಮತ್ತು ಪ.ಪಂಗಡದ ರೈತರಿಗೆ ಶೇ.90 ರಿಯಾ ಯತಿ ದರದಲ್ಲಿ ಘಟಕಗಳನ್ನು ವಿತರಿಸಲಾಗುವುದು. ಹಾಗೆಯೇ 2024-25ನೇ ಸಾಲಿನ ಕೃಷಿ ಸಂಸ್ಕರಣೆ ಯೋಜನೆಯಡಿ ಸಂಸ್ಕರಣ ಘಟಕಗಳಾದ ಹಿಟ್ಟಿನ ಗಿರಣಿ, ಕಾರಪುಡಿ ಮಷೀನ್, ಶಾವಿಗೆ ಮಷೀನ್, ಎಣ್ಣೆಗಾಣ, ರಾಗಿ ಕ್ಲೀನಿಂಗ್ ಮಷೀನ್ ಇತ್ಯಾದಿ ಘಟಕಗಳನ್ನು ಪಡೆಯಲೂ ಸಹ ರೈತರು ಅರ್ಜಿ ಸಲ್ಲಿಸಬಹುದು. ಈ ಯೋಜನೆ ಅಡಿ ಸಾಮಾನ್ಯ ರೈತರಿಗೆ ಶೇ. 50 ಮತ್ತು ಎಸ್.ಸಿ ಮತ್ತು ಎಸ್.ಟಿ ರೈತರಿಗೆ ಶೇ. 90 ಸಹಾಯಧನ ಅಡಿ ಯಲ್ಲಿ ಘಟಕಗಳನ್ನು ವಿತರಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.



## ನೋಡುಗರ ಕಣ್ಮನ ಸೆಳೆಯುವ ಮಿಂಚುಳ್ಳಿ ಫಾಲ್ಸ್

ಮಲೇಬೆನ್ನೂರು, ಅ.13- ಕಳೆದ 3 - 4 ದಿನಗಳಿಂದ ಸುರಿದ ಮಳೆಯಿಂದಾಗಿ ಕೊಮಾರನಹಳ್ಳಿ ಸಮೀಪ (ಎಸ್.ಹೆಚ್.ರಸ್ತೆ ಪಕ್ಕದಲ್ಲಿ) ಗುಡ್ಡದಿಂದ ಮಿಂಚುಳ್ಳಿ ಜಲಪಾತ ಮೈದುಂಬಿ ಹರಿಯುತ್ತಿದ್ದು, ಪ್ರವಾಸಿಗರ ಕಣ್ಮನ ಸೆಳೆಯುತ್ತಿದೆ. ಈ ಕಿರು ಜಲಪಾತ ನೋಡಲು ಕೊಮಾರನಹಳ್ಳಿ, ಮಲೇಬೆನ್ನೂರು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಗಳ ಜನ ದಾವಿಸುತ್ತಿರುವ ದೃಶ್ಯ ಶನಿವಾರ ಕಂಡು ಬಂತು. ಜಲಪಾತದ ನೀರು ಹರಿದು ಹೋಗಿ ಕೊಮಾರನಹಳ್ಳಿ ಕೆರೆ ಸೇರುತ್ತಿದೆ.

## ಸಿದ್ದಿಕಿ ಹತ್ಯೆ : ಇಬ್ಬರ ಬಂಧನ

ನವದೆಹಲಿ, ಅ. 13 - ಎನ್‌ಸಿಪಿ ನಾಯಕ ಬಾಬಾ ಸಿದ್ದಿಕಿ ಅವರನ್ನು ಮುಂಬೈನಲ್ಲಿ ಹತ್ಯೆ ಮಾಡಿರುವುದು ರಾಜಕೀಯ ಬಿರುಗಾಳಿಗೆ ಕಾರಣವಾಗಿದೆ. ಮಹಾರಾಷ್ಟ್ರದಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣ ಕುಸಿದಿದೆ ಎಂದು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ಆರೋಪಿಸಿವೆ. ಮುಂದಿನ ತಿಂಗಳು ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ನಡೆಯುವ ಸಾಧ್ಯತೆ ಇದೆ.

ಸಿದ್ದಿಕಿ ಹತ್ಯೆಯಲ್ಲಿ ಭಾಗಿಯಾದವರನ್ನು ಬಿಡುವುದಿಲ್ಲ. ಆದರೆ, ಪ್ರತಿಪಕ್ಷಗಳು ಈ ವಿಷಯದಲ್ಲಿ ಕ್ಷುದ್ರ ರಾಜಕೀಯ ಮಾಡುತ್ತಿವೆ ಎಂದು ಬಿಜೆಪಿ ಹಾಗೂ ಎನ್‌ಸಿಪಿ ಹೇಳಿವೆ.

66 ವರ್ಷದ ಮಾಜಿ ಸಚಿವ ಸಿದ್ದಿಕಿ ಅವರು ಇತ್ತೀಚೆಗೆ ಕಾಂಗ್ರೆಸ್ ತೊರೆದು ಅಜಿತ್ ಪವಾರ್ ನೇತೃತ್ವದ ಎನ್.ಸಿ.ಪಿ. ಪಕ್ಷಕ್ಕೆ ಸೇರ್ಪಡೆಯಾಗಿದ್ದರು. ಮುಂಬೈನಲ್ಲಿರುವ ತಮ್ಮ ಪುತ್ರ ಹಾಗೂ ಶಾಸಕ ಜೀಶಾನ್ ಸಿದ್ದಿಕಿ ಕಚೇರಿ ಬಳಿ ಸಿದ್ದಿಕಿ ಇದ್ದಾಗ ಮೂವರು ಗುಂಡು ಹಾರಿಸಿ ಹತ್ಯೆ ಮಾಡಿದ್ದರು. ಹತ್ಯೆಗೆ ಸಂಬಂಧಿಸಿದಂತೆ ಹರಿಯಾಣದ ಗುರ್ಮೈಲ್ ಬಲ್ ಜಿತ್ ಸಿಂಗ್ ಹಾಗೂ ಉತ್ತರ ಪ್ರದೇಶದ ಧರ್ಮರಾಜ್ ರಾಜೇಶ್ ಕಶ್ಯಪ್ ಎಂಬುವವರನ್ನು ಬಂಧಿಸಲಾಗಿದೆ. ಹತ್ಯೆಯ ಸಂಚಿನಲ್ಲಿ ಭಾಗಿಯಾಗಿದ್ದ ಪ್ರವೀಣ್ ಲೊಂಕರ್ ಎಂಬಾತನನ್ನೂ ಬಂಧಿಸಲಾಗಿದೆ.

ಈ ನಡುವೆ ಸಿದ್ದಿಕಿ ಹತ್ಯೆಯ ಹೊಣೆ ಹೊರುವುದಾಗಿ ಲಾರೆನ್ಸ್ ಬಿಷ್ಣೋಯಿ ತಂಡ ಹೇಳಿಕೆ ನೀಡಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಕಂಡುಬಂದಿದೆ. ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

## ಹೊಲಿಗೆ, ವಿಡಿಯೋಗ್ರಫಿ ತರಬೇತಿಗೆ ಅರ್ಜಿ

ದಾವಣಗೆರೆ, ಅ. 13 - ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ ಯುವಕ, ಯುವತಿಯರಿಗೆ ಹೊಲಿಗೆ ಹಾಗೂ ವಿಡಿಯೋಗ್ರಫಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಹೊಲಿಗೆ ತರಬೇತಿಗೆ ಎಸ್.ಎಸ್. ಎಲ್.ಸಿ. ಉತ್ತೀರ್ಣರಾಗಿ 18 ರಿಂದ 40 ವರ್ಷದೊಳಗಿರಬೇಕು. ವಿಡಿಯೋಗ್ರಫಿ ತರಬೇತಿಗೆ ಎಸ್.ಎಸ್.ಎಲ್.ಸಿ ಉತ್ತೀರ್ಣ, ಅನುತ್ತೀರ್ಣರಾಗಿದ್ದು 18 ರಿಂದ 40 ವರ್ಷ ವಯೋಮಾನ ದವರಾಗಿರಬೇಕು. ಅರ್ಜಿಯನ್ನು ಕಚೇರಿಯಿಂದ ಪಡೆದು ಅಗತ್ಯ ದಾಖಲೆಗಳೊಂದಿಗೆ ಇದೇ ದಿನಾಂಕ 25 ರೊಳಗೆ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸಿ : 08192-237480.

## ವರ್ಲ್ಡ್ ಬ್ಯಾಂಕ್ ಸಿಎಸ್ ಪಿಎಫ್ ಚುನಾವಣೆ ಕಣದಲ್ಲಿ ಡಾ. ರಾಕೇಶ್



ದಾವಣಗೆರೆ, ಅ.13- ಅಮೆರಿಕದ ವಾಷಿಂಗ್ಟನ್‌ನಲ್ಲಿ ನಡೆಯುತ್ತಿರುವ ವಿಶ್ವಬ್ಯಾಂಕ್ ಸಿವಿಲ್ ಸೊಸೈಟಿ ಪಾಲಿಸಿ ಫೋರಂ (ಸಿಎಸ್‌ಪಿಎಫ್) 2024-2026 ಅಧಿಕಾರವಧಿ ವರ್ಕಿಂಗ್ ಗ್ರೂಪ್ ವಿಶೇಷ ಪ್ರತಿನಿಧಿ ಚುನಾವಣಾ ಅಭ್ಯರ್ಥಿಯಾಗಿ ದಾವಣಗೆರೆ ಸಿದ್ಧವೀರಪ್ಪ ಬಡಾವಣೆಯ ನಿವಾಸಿ ಡಾ.ಎಲ್. ರಾಕೇಶ್ ಸ್ಪರ್ಧಿಸುತ್ತಿದ್ದಾರೆ.

ದಕ್ಷಿಣ ಏಷ್ಯಾದ ಎಂಟು ದೇಶಗಳ ಪರವಾಗಿ ಅವರನ್ನು ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಲಾಗಿದೆ. ಜಗತ್ತಿನ 189 ದೇಶಗಳ ಪ್ರತಿನಿಧಿಗಳು ಚುನಾವಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅಕ್ಟೋಬರ್ 15 ರಿಂದ ನವೆಂಬರ್ 15 ರವರೆಗೆ ಒಂದು ತಿಂಗಳು ಚುನಾವಣೆ ನಡೆಯಲಿದೆ. ದಾವಣಗೆರೆಯ ಐಡಾ ಲವ್‌ಲೇಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾಗಿರುವ ಡಾ.ಎಲ್. ರಾಕೇಶ್, ಕಳೆದ ವರ್ಷ ನಡೆದ ವಿಶ್ವಬ್ಯಾಂಕ್ ಮತ್ತು ಐಎಂಎಫ್ ಅಂತರರಾಷ್ಟ್ರೀಯ ಹಣಕಾಸು ನಿಧಿ ವಾರ್ಷಿಕ ಸಭೆಯನ್ನು ಪ್ರತಿನಿಧಿಸಿದ್ದರು.



## ಈರಗಾರರಿಂದ ದೊಡ್ಡ ಎಡೆ ಪೂಜೆ....

**ಮಲೇಬೆನ್ನೂರು ಸಮೀಪದ ಕೊಮಾರನಹಳ್ಳಿ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದಲ್ಲಿ ವಿಜಯದಶಮಿ ಅಂಗವಾಗಿ ಭಾನುವಾರ ಜರುಗಿದ ಮರಿ ಬನ್ನಿ ಕಾರ್ಯಕ್ರಮದಲ್ಲಿ ಈರಗಾರರಿಂದ ನಡೆದ ಶ್ರದ್ಧಾ- ಭಕ್ತಿಯ ದೊಡ್ಡ ಎಡೆ ಪೂಜೆ ಭಕ್ತರ ಗಮನ ಸೆಳೆಯಿತು.**

## ವನಿತಾ ಯೋಗ ಕೇಂದ್ರದಲ್ಲಿ ಪೂಜೆ



ದಾವಣಗೆರೆ, ಅ.13- ನಗರದ ಪಿ.ಜೆ. ಬಡಾವಣೆಯ ವನಿತಾ ಯೋಗ ಕೇಂದ್ರದಲ್ಲಿ 9 ದಿನಗಳ ವಿಜಯದಶಮಿ ಪೂಜಾ ಕಾರ್ಯಕ್ರಮ ದಿನವೂ ಯೋಗ ಜತೆಗೆ ದುರ್ಗಾ ಮಾತೆಯ ವಿವಿಧ ರೂಪಾವಳಿಯ ಪೂಜೆಯನ್ನು ಮಾಡಿದರು. ಯೋಗ ಶಿಕ್ಷಕ ನಾರಾಯಣ್ ಎಲ್ಲಾ ಕಾರ್ಯಕ್ರಮದ ಪೌರೋಹಿತ್ಯ ವಹಿಸಿದ್ದರು.

## ಮಳೆ : ಬೆಳೆ ಹಾನಿ ಪ್ರದೇಶಗಳನ್ನು ವೀಕ್ಷಿಸಿದ ಶಾಸಕ ಪ್ರಕಾಶ ಕೋಳಿವಾಡ



ರಾಣೇಬೆನ್ನೂರು, ಅ.13- ಇನ್ನೂ ಕೆಲ ದಿನಗಳ ಕಾಲ ಗುಡುಗು, ಸಿಡಿಲು ಸಮೇತ ಮಳೆ ಬರಲಿದ್ದು ಇನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆ ಹಾನಿಯಾಗುವ ಸಂಭವವಿದೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ. ಇದೇ ದಿನಾಂಕ 17ರ ನಂತರ ಬೆಳೆ ಹಾನಿ ಸರ್ವೆ ಮಾಡಲಾಗುತ್ತದೆ. ನಂತರ ಸರ್ಕಾರದಿಂದ ಪರಿಹಾರ ಕೊಡಿಸಲಾಗುವದು ಎಂದು ಶಾಸಕ ಪ್ರಕಾಶ ಕೋಳಿವಾಡ ಹೇಳಿದರು.

ಕಳೆದ ಮೂರು ದಿನಗಳಿಂದ ಗುಡುಗು, ಸಿಡಿಲಿನಿಂದ ಸುರಿದ ಮಳೆಯಿಂದಾಗಿ ತಾಲ್ಲೂಕಿನಲ್ಲಿ ಬೆಳೆ ಹಾನಿಯಾದ ಪ್ರದೇಶಗಳಿಗಿಂದು ಭೇಟಿ ನೀಡಿ ಪತ್ರಕರ್ತರೊಂದಿಗೆ ಮಾತನಾಡುತ್ತಿದ್ದರು.

ಇಂದು ಬೆಳೆ ಹಾನಿಯಾದ ಗ್ರಾಮಗಳಿಗೆ ಭೇಟಿ ನೀಡಿ ರೈತರಿಂದ ಮಾಹಿತಿ ಪಡೆಯುತ್ತಿದ್ದೇನೆ. ಅಧಿಕಾರಿಗಳು ಸಹ ಗ್ರಾಮಗಳಿಗೆ ತೆರಳಿ ಸದ್ಯದ ಪರಿಸ್ಥಿತಿಯ ಮಾಹಿತಿ ಸಂಗ್ರಹಿಸುತ್ತಿದ್ದಾರೆ ಎಂದು ಶಾಸಕರು ಹೇಳಿದರು.

ನೈಸರ್ಗಿಕ ವಿಕೋಪದಿಂದ ಜನರು ತೊಂದರೆ ಅನುಭವಿಸುವದನ್ನು ತಡೆಯುವ ಪ್ರಯತ್ನ ಮಾಡಲಾಗುವುದು ಎಂದು ಶಾಸಕರು ವಿವರಿಸಿದರು. ತಹಶಿಲ್ದಾರ ಭಾವನ, ಕೃಷಿ ಅಧಿಕಾರಿ ಶಾಂತಮಣಿ ಇತರರಿದ್ದರು.

## ಹರಪನಹಳ್ಳಿ : ಇಂದಿನಿಂದ ಶ್ರೀ ಶಿವಯೋಗಿ ಹಾಲಸ್ವಾಮೀಜಿ ರಥೋತ್ಸವ



ಹರಪನಹಳ್ಳಿ, ಅ.13- ಭಾವೈಕತೆಯ ಸಾರುವ ಸದ್ಗುರು ಶ್ರೀ ಶಿವಯೋಗಿ ಹಾಲಸ್ವಾಮಿಗಳವರ ಜಾತ್ರಾ ಮಹೋತ್ಸವವು ಪಟ್ಟಣದ ವಾಲ್ಮೀಕಿ ನಗರದಲ್ಲಿ ನಾಳೆ ದಿನಾಂಕ 14ರ ಸೋಮವಾರದಿಂದ ಮೂರು ದಿನಗಳ ಕಾಲ ಸಂಭ್ರಮದಿಂದ ನೆರವೇರಲಿದೆ ಎಂದು ಹಾಲಸ್ವಾಮಿ ಮಠದ ಶ್ರೀ ಸಣ್ಣ ಹಾಲಸ್ವಾಮಿಗಳು ತಿಳಿಸಿದರು.

ಹಾಲಸ್ವಾಮಿ ಮಠದಲ್ಲಿ ಜರುಗಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಮಹಾಸ್ವಾಮೀಜಿ, ಸುಕ್ಷೇತ್ರ ರಾಂಪುರ ಶ್ರೀ ಸದ್ಗುರು ಶಿವಯೋಗಿ ಶಿವಕುಮಾರ ಹಾಲಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ನಾಳೆ ದಿನಾಂಕ 14 ರಂದು ರಾತ್ರಿ 11 ಗಂಟೆಗೆ ಮುಳ್ಳು ಗದ್ದಿಗೆ ಉತ್ಸವ 15ರಂದು ಸಂಜೆ 5 ಗಂಟೆಗೆ ರಥೋತ್ಸವ ಜರುಗಲಿದೆ. 16ರ ಬುಧವಾರ ಸಂಜೆ 5 ಗಂಟೆಗೆ ಅಡ್ಡ ಪಲ್ಲಕ್ಕಿ ಉತ್ಸವ ನಡೆಯಲಿದೆ.

ಈ ಸಂದರ್ಭದಲ್ಲಿ ವಾಲ್ಮೀಕಿ ನಾಯಕ ಸಮಾಜದ ಮಾಜಿ ಅಧ್ಯಕ್ಷ ಕೆ. ಉಚ್ಚೆಂಗೆಪ್ಪ, ವಾಲ್ಮೀಕಿ ನಾಯಕ ಸಮಾಜದ ಉಪಾಧ್ಯಕ್ಷ ಸುರೇಶ್ ಮಂಡಕ್ಕಿ, ಮುಖಂಡರಾದ ಟಿ. ತಿರುಪತಿ, ಪಟ್ನಾಮದ ಹಾಲ ಸಿದ್ದಪ್ಪ, ನಿಟ್ಟೂರು ದೊಡ್ಡ ಹಾಲಪ್ಪ, ರಾಯದುರ್ಗದ ದುರುಗಪ್ಪ, ಕಾಗೇರ್ ತಿಮ್ಮಪ್ಪ, ರಾಜಪ್ಪ, ದ್ಯಾಮಜ್ಜಿ ಪರುಸಪ್ಪ, ಗೋಕರ್ಣ ಸಿ ಚಂದ್ರು ಸೇರಿದಂತೆ ಇತರರು ಇದ್ದರು.

## ಕುಂದೂರು ಪಂಚಾಯತಿ ಉಪಾಧ್ಯಕ್ಷರಾಗಿ ರಹಮತ್ ವುಲ್ಲಾ ಖಾನ್ ಆಯ್ಕೆ



ಹೊನ್ನಾಳಿ, ಅ. 13 - ತಾಲ್ಲೂಕಿನ ಕುಂದೂರು ಪಂಚಾಯ್ತಿ ಉಪಾಧ್ಯಕ್ಷರಾಗಿ ರಹಮತ್ ವುಲ್ಲಾ ಖಾನ್ ಅವಿರೋಧ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ಅಕ್ಷರ ದಾಸೋಹದ ಸಹಾಯಕ ನಿರ್ದೇಶಕ ನಾಗೇಂದ್ರಪ್ಪ ತಿಳಿಸಿದರು.

ಈ ಹಿಂದೆ ಪಂಚಾಯತಿ ಉಪಾಧ್ಯಕ್ಷರಾಗಿದ್ದ ಚಿದಾನಂದ ಮೂರ್ತಿ ನಿಧನದಿಂದಾಗಿ ತೆರವಾದ ಸ್ಥಾನಕ್ಕೆ ಮಂಗಳವಾರ ಚುನಾವಣೆ ನಡೆಯಿತು. ಪಂಚಾಯತಿ ಅಧ್ಯಕ್ಷರಾದ ರತ್ನಮ್ಮ, ಸದಸ್ಯರಾದ ರೇಖಾ, ಲತಾ, ಪ್ರಸನ್ನ ಕುಮಾರ್, ಆಂಜನೇಯ, ಉದಯಕುಮಾರ್, ಸುರೇಶ್, ರೇಣುಕಮ್ಮ, ಮಂಜುಳಾ, ಧನಂಜಯ, ಕಾರ್ಯದರ್ಶಿ ವೀರೇಂದ್ರ ಇನ್ನಿತರರಿದ್ದರು.

## ಬರದನಾಡು ಇನ್ನು ಬಂಗಾರದ ನಾಡಾಗಲಿದೆ

**(1ನೇ ಪುಟದಿಂದ)** ಸ್ಥಿತಿಗತಿಗಳನ್ನು ಮಾಹಿತಿ ಪಡೆಯಲಾಗುತ್ತಿದೆ ಎಂದು ಶ್ರೀಗಳು ಮಾಹಿತಿ ನೀಡಿದರು.

ಶಾಸಕ ಬಿ.ದೇವೇಂದ್ರಪ್ಪ ಮಾತನಾಡಿ, ಕೆರೆ ಉಂಬಿಸುವ ಯೋಜನೆಯನ್ನು ಸಾಕಾರಗೊಳಿಸುವ ಮೂಲಕ ಸಿರಿಗೆರೆ ಶ್ರೀಗಳು ಕಲಿಯುಗದ ಶ್ರೀಕೃಷ್ಣರಾಗಿ ಕ್ಷೇತ್ರದ ಜನತೆಗೆ ಜಲಾಮೃತ ಉಣಬಡಿಸುತ್ತಿದ್ದಾರೆ ಎಂದು ಬಣ್ಣಿಸಿದರು.

5 ದಶಕಗಳ ನಂತರ ಜಗಳೂರು ಕೆರೆ ಕೋಡಿ ಬಿದ್ದಿರುವ ಸಂತಸಕ್ಕೆ ಶ್ರೀಗಳ ಸಲಹೆ ಪಡೆದು ಅದ್ದೂರಿಯಾಗಿ ಪಕ್ಷಾತೀತವಾಗಿ 'ಜಗಳೂರು ಉತ್ಸವ' ಆಚರಿಸಲಾಗುವುದು. ಗಂಡನ ಮನೆಯಲ್ಲಿರುವ ಮಹಿಳೆಯರು ಉತ್ಸವಕ್ಕೆ ಆಗಮಿಸಿ ತವರಿನ ಜಲಸಿರಿಯನ್ನು ವೀಕ್ಷಿಸಿ ಸಂತಸಪಡಬೇಕು ಎಂದರು.


ನೀರಾವರಿ ಇಲಾಖೆ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ ಗುಂಗೆ ಮಾತನಾಡಿ ,ನೀರಾವರಿ ಯೋಜನೆ ರೈತರಿಗೆ ಆರ್ಥಿಕ, ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತವೆ. ಕೆರೆಗಳಲ್ಲಿನ ಜಾಲಿಗಿಡಗಳನ್ನು ತೆರವುಗೊಳಿಸಲು ರೈತರು ಕೈಜೋಡಿಸಬೇಕು ಎಂದು ತಿಳಿಸಿದರು.

ಮಾಜಿ ಶಾಸಕ ಎಚ್.ಪಿ.ರಾಜೇಶ್ ಮಾತನಾಡಿ, ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ ನನ್ನ ಆಡಳಿತಾವಧಿಯಲ್ಲಿ ರೂಪುಗೊಂಡ 57 ಕೆರೆತುಂಬಿಸುವ ಯೋಜನೆ ಸರ್ವರ ಸಹಕಾರದಿಂದ ಯಶಸ್ವಿಯಾಗಿ ಕೆರೆಕೋಡಿಬಿದ್ದಿವೆ. ಆಡಳಿತರೂಢ ಸರ್ಕಾರದ ಶಾಸಕರು ಬಹುಗ್ರಾಮ ಕುಡಿಯುವ ನೀರು, ಭದ್ರಾಮೇಲ್ದಂಡೆ ಯೋಜನೆ ಸಕಾರಗೊಳಿಸಿ ಬರದನಾಡನ್ನು ಅಭಿವೃದ್ದಿ ನಾಡನ್ನಾಗಿಸಲು ಕಾಳಜಿವಹಿಸಬೇಕು ಎಂದು ಸಲಹೆ ನೀಡಿದರು.

ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ನನ್ನ ಆಡಳಿತಾವಧಿಯಲ್ಲಿ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ, ಮಾಜಿ ಸಂಸದ ಜಿ.ಎಂ.ಸಿದ್ದೇಶ್ವರ್ ಅವರ ಸಹಕಾರದಿಂದ ಎರಡೂ ನೀರಾವರಿ ಯೋಜನೆಗಳಿಗೆ ಚಾಲನೆ ಸಿಕ್ಕಿತ್ತು. ಯೋಜನೆ ಸಾಕಾರಗೊಳ್ಳಲು ಸಿರಿಗೆರೆ ಶ್ರೀಗಳ ಆದೇಶ ದಂತೆನಾನು ಶಾಸಕ ಸ್ಥಾನಕ್ಕೆ ರಾಜಿನಾಮೆಗೂ ಸಿದ್ದನಾಗಿದ್ದೆ. ಇಂದು ಕೆರೆಗಳು ಕೋಡಿಬಿದ್ದಿವೆ. ಸಿರಿಗೆರೆ ಶ್ರೀಗಳು ಗುಡುಗಿದರೆ ವಿಧಾನಸೌಧವೂ ನಡುಗುತ್ತದೆ ಎಂಬುದಕ್ಕೆ ಜೀವಂತ ಸಾಕ್ಷಿಯಾಗಿದೆ ಎಂದರು.

ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಕೆ.ಪಿ.ಪಾಲಯ್ಯ, ಎಂ.ಡಿ.ಕೀರ್ತಿಕುಮಾರ್, ಪ.ಪಂ. ಅಧ್ಯಕ್ಷ ನವೀನ್, ತಹಶೀಲ್ದಾರ್ ಸಯ್ಯದ್ ಕಲೀಂ ಉಲ್ಲಾ, ತಾ.ಪಂ ಇಓ ಕೆಂಚಪ್ಪ, ಡಾ.ರವಿಕುಮಾರ್, ಶಿವನಗೌಡ, ಪಿ.ಎಸ್. ಸುರೇಶ್ ಗೌಡ, ಎನ್.ಎಸ್.ರಾಜು, ಗುತ್ತಿಗೆದಾರ ಶಂಕರ್ ಮುಂತಾದವರು ಇದ್ದರು.

## ಶೋಭಾಯಾತ್ರೆ : ಕಾರ್ಯಕರ್ತರಿಗೆ ಕುಡಿಯುವ ನೀರಿನ ವ್ಯವಸ್ಥೆ



ದಾವಣಗೆರೆ, ಅ. 13- ನಾಡಹಬ್ಬ ದಸರಾ ಅಂಗವಾಗಿ ನಗರದಲ್ಲಿ ಇಂದು ಬೃಹತ್ ಶೋಭಾಯಾತ್ರೆಯಲ್ಲಿ ಚೌಕಿಪೇಟೆ ಅಕ್ಕಿ ವರ್ತಕರ ಸಂಘದ ಅಧ್ಯಕ್ಷ ಎಂ.ವಿ. ಜಯಪ್ರಕಾಶ್ ಮಾಗಿ ಹಾಗೂ ಸ್ನೇಹ ಬಳಗದಿಂದ ಶೋಭಾಯಾತ್ರೆಗೆ ಬಂದ ಕಾರ್ಯಕರ್ತರಿಗೆ ದಾಹ ತಣಿಸಲು ನೀರಿನ ವ್ಯವಸ್ಥೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಎಂ. ದೊಡ್ಡಪ್ಪ, ಎಂ.ವೈ. ರವಿಕುಮಾರ್, ಟಿ.ಎಸ್. ಮಲ್ಲಿಕಾರ್ಜುನ, ಜಯರಾಜ್ ಮೇಟಿ, ಬಸವರಾಜ್ ಅಥಣಿ, ಪಿ.ಬಿ. ಬಕ್ಕೇಶ್, ವಿನಯ್ ಬ್ಯಾಡಗಿ, ಎಸ್.ಜಿ. ಮಂಜುನಾಥಯ್ಯ, ಎಂ.ಬಿ. ಶಿವಯೋಗಿ, ಪ್ರಕಾಶ್ ಮೇಟಿ, ಬಸಾಪುರ ಗಿರೀಶ್, ಬಿಜಾಪುರ ಸಿದ್ದೇಶ್, ಬಿಜಾಪುರ ಪ್ರವೀಣ, ಬ್ರೋಕರ್ ಮಲ್ಲಿಕಾರ್ಜುನ ಮತ್ತಿತರರು ಉಪಸ್ಥಿತರಿದ್ದರು.



## ಕೊಮಾರನಹಳ್ಳಿಯಲ್ಲಿ ಸಂಭ್ರಮದ ರಥೋತ್ಸವ

ಮಲೇಬೆನ್ನೂರು, ಅ.13- ದಸರಾ ಹಾಗೂ ವಿಜಯದಶಮಿ ಹಬ್ಬದ ಅಂಗವಾಗಿ ಕೊಮಾರನಹಳ್ಳಿ ಗ್ರಾಮದ ಹೆಳವನಕಟ್ಟೆ ಶ್ರೀ ಲಕ್ಷ್ಮಿ ರಂಗನಾಥ ಸ್ವಾಮಿಯ ಬ್ರಹ್ಮ ರಥೋತ್ಸವವು ಶನಿವಾರ ಬೆಳಗ್ಗೆ ಸಂಭ್ರಮದಿಂದ ಜರುಗಿತು. ಉಪ ತಹಸೀಲ್ದಾರ್ ಆರ್. ರವಿ ರಥಕ್ಕೆ ಪೂಜೆ ಸಲ್ಲಿಸಿ ರಥೋತ್ಸವಕ್ಕೆ ಚಾಲನೆ ನೀಡಿದರು.

ನಂತರ ಭಕ್ತರು 'ಗೋವಿಂದ ಗೋವಿಂದಾ' ಎಂಬ ಜಯಘೋಷದೊಂದಿಗೆ ರಥವನ್ನು ಎಳೆದು ಭಕ್ತಿ ಸಮರ್ಪಿಸಿದರು. ವಿವಿಧ ಕಲಾ ಮೇಳಗಳು ರಥೋತ್ಸವಕ್ಕೆ ಮೆರಗು ತಂದವು. ರಥೋತ್ಸವದ ನಂತರ ಭಕ್ತರಿಗೆ ಬನ್ನಿ ವಿತರಿಸಲಾಯಿತು. ದೇವಸ್ಥಾನದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

# ಸಮಾಜಮುಖಿಯಾಗಿ ಆಲೋಚಿಸಿದವರು ಜಯದೇವ ಜಗದ್ಗುರುಗಳು

### ಶ್ರೀ ಜಯದೇವ ಶ್ರೀಗಳ 150ನೇ ಜಯಂತ್ಯೋತ್ಸವ ಹಾಗೂ ಶರಣ ಸಂಸ್ಕೃತಿ ಉತ್ಸವ ಕಾರ್ಯಕ್ರಮದಲ್ಲಿ ಡಾ. ವೀರಭದ್ರ ಚನ್ನಮಲ್ಲ ಸ್ವಾಮೀಜಿ

ಚಿತ್ರದುರ್ಗ, ಅ.13- ಕೆಲವು ಅಂಶಗಳನ್ನು ಚಾರಿತ್ರಿಕ ನೆಲೆಯೊಳಗೆ ಗ್ರಹಿಸಬೇಕಾಗುತ್ತದೆ. ಪೀಠ ಪರಂಪರೆಯ ಮಠಗಳಲ್ಲಿ ಹೆಚ್ಚು ಜ್ಞಾನಿಗಳು, ಹೆಚ್ಚು ಕ್ರಿಯಾಶೀಲರು, ಸಮಾಜಮುಖಿಯಾಗಿ ಆಲೋಚಿಸಿದವರು ಜಯದೇವ ಜಗದ್ಗುರುಗಳು. ಕರ್ನಾಟಕದಲ್ಲಿ ಮೊದಲು ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಿದವರು ಜಯದೇವ ಜಗದ್ಗುರುಗಳು ಎಂದು ಬೆಂಗಳೂರಿನ ನಿಡುಮಾಮಿಡಿ ಮಠದ ಡಾ.ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ಮುರುಘಾ ಮಠದಿಂದ ಇಲ್ಲಿನ ಅನುಭವ ಮಂಟಪದಲ್ಲಿ ಮೊನ್ನೆ ಏರ್ಪಾಡಾಗಿದ್ದ ಶ್ರೀ ಜಯದೇವ ಜಗದ್ಗುರುಗಳ 150ನೇ ಜಯಂತ್ಯೋತ್ಸವ ಹಾಗೂ ಶರಣ ಸಂಸ್ಕೃತಿ ಉತ್ಸವ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಜಯದೇವ ಜಗದ್ಗುರುಗಳು ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದರು. ಅವರ ವ್ಯಕ್ತಿತ್ವ, ವಿದ್ವತ್ತು ಆಯಸ್ಕಾಂತ ಇದ್ದ ಹಾಗೆ ಇತ್ತು. ಜಯದೇವ ಶ್ರೀಗಳ ಕಾಲಮಾನ ಕೇವಲ ಮುರುಘಾ ಮಠಕ್ಕೆ ಸೀಮಿತವಾಗಿರಲಿಲ್ಲ. ಅವರ 150ನೇ ಜಯಂತ್ಯೋತ್ಸವವನ್ನು ಶ್ರೀಮಠದ ಆಡಳಿತ ಮಂಡಳಿ ಅರ್ಥಪೂರ್ಣವಾಗಿ ಆಚರಿಸುತ್ತಿದೆ



ಎಂದು ನುಡಿದರು.

ಬೆಂಗಳೂರು ಬೇಲಿಮಠದ ಶ್ರೀ ಶಿವರುದ್ರ ಸ್ವಾಮಿಗಳು ಮಾತನಾಡಿ, ಜಯದೇವಶ್ರೀ ಕಾಲದ ಮಹಾಬೆಳಕಾಗಿ ಬಂದವರು. ಅವರಿಗೆ ಪ್ರೇರಣೆ ಯಾಗಿ ಬಂದವರು ಅಥಣಿ ಶ್ರೀಗಳು. ಅಂದಿನ ಕಾಲದಲ್ಲಿ ಪೀಠಾಧಿಪತಿಗಳೆಂದರೆ ಗರ್ಭದಲ್ಲಿರುವ ಶಿಶುವಿನಂತೆ. ಜನರಿಗೆ ದರ್ಶನ ಭಾಗ್ಯ ಅಪರೂಪವಾಗಿತ್ತು.

ಈ ಸಂದರ್ಭದಲ್ಲಿ ಜಯದೇವ ಶ್ರೀಗಳು ತಮ್ಮ ಗುರುಗಳ ಆದೇಶದಂತೆ ಸುತ್ತು ಮತ್ತು ಕಟ್ಟು ಎಂಬಂತೆ ಮಠವನ್ನು ಬಿಟ್ಟು ಸಮಾಜವನ್ನು ಕಟ್ಟಲು ಸುತ್ತಿದರು. ಶಿಕ್ಷಣ, ಊಟ, ವಸತಿಗೆ ಜಯದೇವ ಶ್ರೀಗಳು ಹೆಚ್ಚು ಒತ್ತು ಕೊಟ್ಟರು. ಜಯದೇವ ಶ್ರೀಗಳ ಬಗ್ಗೆ ಮಾತನಾಡಿದರೆ ಮಾತು ಮೌನವಾಗುತ್ತದೆ. ಅವರು ಮತ್ತಷ್ಟು ಎತ್ತರದಲ್ಲಿ ಕಾಣಿಸುತ್ತಾರೆ ಎಂದು ನುಡಿದರು.

ಬೀದರ್ ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಬಸವರಾಜ್ ಧನ್ನೂರು ಮಾತನಾಡಿ, ಬಸವಣ್ಣನವರು ತಮ್ಮ ವಚನಗಳಲ್ಲಿ ಅನೇಕ ಬಾರಿ ಹೇಳಿದ್ದಾರೆ. ನಮ್ಮ ಕೂಡಲ ಸಂಗಮದ ಶರಣರನ್ನು ಹೋಲಿಕೆ ಮಾಡಲು ಪ್ರತಿಯಿಲ್ಲ. ಪೂಜ್ಯರಾದ ಜಯದೇವ ಶ್ರೀಗಳಿಗೆ ಈ ಮಾತು ಅನ್ವಯವಾಗುತ್ತದೆ. ಶ್ರೀಗಳು ಉಪಮಾತೀತರು. ಅವರಿಗೆ ಅವರೇ ಸಾಟಿ. ದೇವರು ನಮಗೆ ಜ್ಞಾನ ಮತ್ತು ಸಾಮರ್ಥ್ಯ ನೀಡಿದ್ದಾನೆ. ಜ್ಞಾನ ನಮಗಾಗಿ ಬಳಸಬೇಕು. ಸಾಮರ್ಥ್ಯವನ್ನು ಇತರರ ಒಳಿತಿಗಾಗಿ ಬಳಸಬೇಕು.

ನದಿ ಹರಿದು ಭೂಮಿಯನ್ನು ಫಲವತ್ತಾಗಿ ಮಾಡುತ್ತದೆ. ಮಾವಿನಗಿಡ ಸಾವಿರಾರು ಹಣ್ಣು ಬಿಟ್ಟು ಮಾನವನಿಗೆ ಕೊಡುಗೆ ನೀಡುವಂತೆ ನಾವು ನಮ್ಮ ಸಾಮರ್ಥ್ಯವನ್ನು ಬಳಸಬೇಕು. ಆದರೆ ನಾವು ಜ್ಞಾನ ಮತ್ತು ಸಾಮರ್ಥ್ಯವನ್ನು ಸ್ವಾರ್ಥಕ್ಕಾಗಿ ಬಳಸುತ್ತಿದ್ದೇವೆ. ಜಯದೇವ ಶ್ರೀಗಳು ತಮ್ಮ ಸಾಮರ್ಥ್ಯವನ್ನು ಸಮಾಜಕ್ಕೆ ಧಾರೆಯೆರೆದರು.

ಶರಣಸಂಸ್ಕೃತಿ ವಿಶಿಷ್ಟ ಹಾಗು ಜಗತ್ತಿನ ಅತ್ಯಂತ ಶ್ರೇಷ್ಠ ಸಂಸ್ಕೃತಿ. ಮಾನವೀಯ ಸಂಸ್ಕೃತಿ ಶರಣ ಸಂಸ್ಕೃತಿ. ಶ್ರೀಮಠ ಈ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯ ಮಾಡುತ್ತಿದೆ. ಬಸವಣ್ಣನವರ ಜ್ಯೋತಿ ನಿರಂತರವಾಗಿ ಬೆಳಗುತ್ತಿರಬೇಕು ಎಂದು ನುಡಿದರು.

ಕಾರ್ಯಕ್ರಮದಲ್ಲಿ ತಮಿಳುನಾಡು ಜಂಗಮ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ಎಸ್.ಜೆ.ಎಂ. ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರಾದ ಡಾ. ಬಸವಕುಮಾರ ಸ್ವಾಮೀಜಿಗಳು, ಶಾಸಕರಾದ ಕೆ.ಸಿ.ವೀರೇಂದ್ರ (ಪಪ್ಪಿ), ಕೆ.ಎಂ. ವೀರೇಶ್, ತಿಪಟೂರಿನ ಶ್ರೀ ಜಯದೇವ ವಿದ್ಯಾರ್ಥಿನಿಲಯದ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ಸಂಭ್ರಮದಲ್ಲಿ ಹೆಸರಾಂತ ಹಿನ್ನೆಲೆ ಗಾಯಕ ರಾಜೇಶ್ ಕೃಷ್ಣನ್ ಮತ್ತು ತಂಡದವರು ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು. ಗಾನಯೋಗಿ ಬಳಗದವರು ಜಯದೇವ ಜಗದ್ಗುರುಗಳ ಜೀವನಧಾರಿತ ಜಯದೀಪ ಜ್ಯೋತಿ ರೂಪಕ ನಡೆಸಿಕೊಟ್ಟರು.

**ಮಹಾದಾನಿಗಳಿಗೆ ಗೌರವ**

ಸಮಾರಂಭದಲ್ಲಿ ಮಹಾದಾನಿಗಳಾದ ಮಾಜಿ ಶಾಸಕ ಯಜಮಾನ್ ಮೋತಿ ವೀರಣ್ಣ, ಅಂಬಲಿ ಚನ್ನಬಸಪ್ಪನವರ ಸುಪುತ್ರ ಎ.ಸಿ.ಷಡಕ್ಷರಿ, ನಿವೃತ್ತ ಇಂಜಿನಿಯರ್ ಎಸ್. ಚನ್ನವೀರಪ್ಪ, ದಾವಣಗೆರೆಯ ಜಯದೇವ ಪ್ರೆಸ್ ಮಾಲೀಕ ಕಣಕುಪ್ಪಿ ಮುರುಗೇಶಪ್ಪ, ದಾವಣಗೆರೆಯ ವರ್ತಕ ಮುರುಘರಾಜೇಂದ್ರ ಚಿಗಟೇರಿ ಅವರುಗಳನ್ನು ಸನ್ಮಾನಿಸಲಾಯಿತು.

# ಹಿಮಯುಗಕ್ಕೂ ಜಗ್ಗದ ಮನುಜ

**ನಮ್ಮ ಪೂರ್ವಜರು ಇತರೆ ಜೀವಿಗಳಂತೆ ವಲಸೆ ಹೋಗದೇ ಬದುಕುಳಿಯುವ ಸಾಮರ್ಥ್ಯ ಕಂಡುಕೊಂಡಿದ್ದು ಪತ್ತೆ**

ನವದೆಹಲಿ, ಅ. 13 - ಕೊನೆಯ ಹಿಮಯುಗ ಕಾಲದಲ್ಲಿ ಮನುಷ್ಯರು ವಲಸೆ ಹೋಗುವ ಮೂಲಕ ಉಳಿದುಕೊಳ್ಳಲು ಸಾಧ್ಯವಾಗಿತ್ತು ಎಂದು ಇಲ್ಲಿಯವರೆಗೂ ಭಾವಿಸಲಾಗಿತ್ತು. ಆದರೆ, ಇತ್ತೀಚೆಗೆ ನಡೆಸಲಾದ ಅಧ್ಯಯನದ ಪ್ರಕಾರ, ಕೊನೆ ಹಿಮಯುಗ ಎದುರಿಸುವಲ್ಲಿ ಮನುಷ್ಯರು ಯಶಸ್ವಿಯಾಗಿದ್ದರು.

ಈ ಬಗ್ಗೆ ಬೂರ್ನ್‌ಮೌತ್ ವಿಶ್ವವಿದ್ಯಾಲಯದ ವಿಕಾಸವಾದ ಉಪನ್ಯಾಸಕ ಜಾನ್ ಸ್ಟೀವರ್ಟ್ ಹಾಗೂ ಕಾರ್ನೆಲ್ ವಿಶ್ವವಿದ್ಯಾಲಯದ ವಿಕಾಸವಾದ ಜೀವಶಾಸ್ತ್ರದ ಉಪನ್ಯಾಸಕ ಜೆರೆಮೆ ಸಿಯಾರ್ಲೆ ಅಧ್ಯಯನ ಮಾಡಿ ವರದಿ ರೂಪಿಸಿದ್ದಾರೆ.

ಕೊನೆಯ ಹಿಮಯುಗ ತಾರಕಕ್ಕೇರಿದಾಗ ಆಧುನಿಕ ಮನುಷ್ಯರು ದಕ್ಷಿಣ ಯುರೋಪ್ ಕಡೆ ತೆರಳಿದ್ದರು. ಜಾಗತಿಕ ತಾಪಮಾನ ನಂತರದಲ್ಲಿ ಹೆಚ್ಚಾದಾಗ ಬೇರೆ ಪ್ರದೇಶಗಳಿಗೆ ಹರಡಿದ್ದರು ಎಂದು ಈ ಹಿಂದೆ ಭಾವಿಸಲಾಗಿತ್ತು. ಆದರೆ, ಇತ್ತೀಚೆಗೆ ವಂಶವಾಹಿಗಳ ಮಾಹಿತಿ ಆಧರಿಸಿ ಅಧ್ಯಯನ ನಡೆಸಿದಾಗ, ಕನಿಷ್ಠ ಕೆಲವು ಮನುಷ್ಯರಾದರೂ ಮಧ್ಯ ಯುರೋಪ್‌ನಲ್ಲಿ ನೆಲೆಸಿದ್ದರು ಎಂಬುದು ಕಂಡು ಬಂದಿದೆ.

ಪರಿಸರದಲ್ಲಿ ಬದಲಾವಣೆಯಾದಂತೆ ಪ್ರಾಣಿಗಳು ಹಾಗೂ ಸಸ್ಯಗಳು ವಿಶ್ವದಾದ್ಯಂತ ಹರಡುವುದರಲ್ಲಿ ವ್ಯತ್ಯಾಸವಾಗುತ್ತದೆ ಎಂಬುದನ್ನು ವಿಜ್ಞಾನಿಗಳು 19ನೇ ಶತಮಾನದ ಆರಂಭದಲ್ಲೇ ಪತ್ತೆ ಮಾಡಿದ್ದರು. ಈಗ ಪರಿಸರ ಬದಲಾವಣೆಯ ಕಾಲದಲ್ಲಿ ಈ ಪ್ರಾಣಿಗಳ ವಲಸೆ ಹಾಗೂ ಬದುಕುವ ಏರಿಳಿತದ ಅಧ್ಯಯನ ಇನ್ನಷ್ಟು ಪ್ರಾಮುಖ್ಯತೆ ಪಡೆದುಕೊಂಡಿದೆ.

ಒಂದೇ ಜಾತಿಯ ಪ್ರಾಣಿಗಳಿದ್ದರೂ ಸಹ, ಬೇರೆ ಬೇರೆ ಜಾಗದಲ್ಲಿ ನೆಲೆಸಿದಾಗ ಅವುಗಳ ವಂಶವಾಹಿಯಲ್ಲಿ ಬದಲಾವಣೆಯಾಗುತ್ತದೆ. ಇತ್ತೀಚೆಗೆ ವಿಜ್ಞಾನಿಗಳು ಪರಿಸರ ಬದಲಾವಣೆ ಕಾರಣದಿಂದ ವಿವಿಧ ಜಾತಿಗಳ ಪ್ರಾಣಿಗಳ ವಂಶವಾಹಿಯಲ್ಲಿ ಆಗುವ ಬದಲಾವಣೆಗಳ ಅಧ್ಯಯನ ಮಾಡಿದ್ದರು. 20 ಸಾವಿರ ವರ್ಷಗಳ ಹಿಂದೆ ಹಿಮಯುಗದಲ್ಲಿ ಮನುಷ್ಯರೂ ಸೇರಿದಂತೆ ಹಲವಾರು ಪ್ರಾಣಿಗಳು ತಮ್ಮ ಭೌಗೋಳಿಕ ನೆಲೆ ವಿಸ್ತರಿಸಿಕೊಂಡಿದ್ದು ಈ ಅಧ್ಯಯನದಿಂದ ಪತ್ತೆಯಾಯಿತು.

ಒಂದು ಕಾಲದಲ್ಲಿ ಯುರೋಪಿನ ಹಿಮಪದರ ಡೆನ್ಮಾರ್ಕ್ ಹಾಗೂ ದಕ್ಷಿಣ ವೇಲ್ಸ್‌ವರೆಗೂ ವಿಸ್ತರಿಸಿತ್ತು. ಈಗಿನ ಅಲಾಸ್ಕಾ ಇಲ್ಲವೇ ಸೈಬೀರಿಯಾ ರೀತಿಯ ಪರಿಸ್ಥಿತಿ ಯುರೋಪ್‌ನಲ್ಲಿ ಉಂಟಾಗಿತ್ತು.

ಬರ್ಮಿಂಗ್‌ಹ್ಯಾಮ್ ವಿಶ್ವವಿದ್ಯಾಲಯದ ಒಕ್ಸಲಾ ಗಾರ್ಸಿಯಾ - ರಾಡ್ರಿಗೂಜ್ ಅವರ ನೇತೃತ್ವದ ತಂಡ ಯುರೋಪಿನ 23 ಸಾಮಾನ್ಯ ಸಸ್ತನಿಗಳ ವಂಶವಾಹಿ ಇತಿಹಾಸದ ಅಧ್ಯಯನ ಮಾಡಿತ್ತು. ಕೆಲ ಜಾತಿಯ ಪ್ರಾಣಿಗಳು ಒಂದೇ ಸ್ಥಳದಲ್ಲಿ ಸುದೀರ್ಘ ಕಾಲಕ್ಕೆ ನೆಲೆಸಿದಾಗ ವಂಶವಾಹಿಯಲ್ಲಿ ಆಗುವ ಬದಲಾವಣೆ ಬಗ್ಗೆ ಅಧ್ಯಯನ ಬೆಳಕು ಚೆಲ್ಲಿದೆ.

ಹಿಮಯುಗದಲ್ಲಿ ಮನುಷ್ಯರು ಹೆಚ್ಚು ಶೀತ ಇರುವ ಸ್ಥಳದಲ್ಲೇ ಮುಂದುವರೆದಿದ್ದು ಅಧ್ಯಯನದಲ್ಲಿ ಕಂಡು ಬಂದಿದೆ. ಹಿಮಯುಗದ ಪರಿಸ್ಥಿತಿಯಲ್ಲಿ ಈ ಮನುಷ್ಯರು ವಲಸೆ ಹೋಗಬಹುದಿತ್ತು. ಆದರೆ, ಕಠಿಣವಾದ ಹಿಮಯುಗದ ಸ್ಥಳದಲ್ಲೇ ಉಳಿದುಕೊಂಡಿದ್ದು ಏಕೆ ಎಂಬುದು ಸ್ಪಷ್ಟವಾಗಿಲ್ಲ.

ಮನುಷ್ಯ ಸರ್ವಭಕ್ಷಕನಾಗಿದ್ದಾನೆ. ಈ ಕಾರಣದಿಂದ ಹಿಮಯುಗದಲ್ಲೂ ಉಳಿಯಲು ಸಾಧ್ಯವಾಯಿತೇ ಅಥವಾ ಇತರೆ ಪ್ರಾಣಿಗಳಿಗಿಂತ ತಂತ್ರಜ್ಞಾನದಲ್ಲಿ ಮುಂದುವರೆದ ಕಾರಣ ಹಿಮಯುಗದಲ್ಲಿ ಮುಂದುವರೆಯಲು ಸಾಧ್ಯವಾಯಿತೇ ಎಂಬುದು ಸ್ಪಷ್ಟವಾಗಿಲ್ಲ. ಈ ಅವಧಿಯಲ್ಲಿ ಮನುಷ್ಯರು ಬಟ್ಟೆ ಕಂಡುಕೊಂಡಿದ್ದರು, ನೆಲೆ ಕಟ್ಟಿಕೊಂಡಿದ್ದರು ಹಾಗೂ ಬೆಂಕಿ ನಿಯಂತ್ರಿಸುವುದನ್ನು ಕಂಡುಕೊಂಡಿದ್ದರು. ಇದು ಆಗ ಮನುಷ್ಯರಿಗೆ ನೆರವಾಗಿರಬಹುದು.

ಈ ಅಧ್ಯಯನ ಕಾರಣದಿಂದಾಗಿ ಪರಿಸರ ಬದಲಾವಣೆ ಹಾಗೂ ಜೀವ ಭೌಗೋಳಿಕತೆ ಬಗ್ಗೆ ಮರು ಚಿಂತನೆ ನಡೆಸುವ ಅಗತ್ಯ ಎದುರಾಗಿದೆ. ಪರಿಸರ ಬದಲಾವಣೆ ಕಾರಣದಿಂದ ಕೆಲ ಸ್ಥಳಗಳಲ್ಲಿ ಬದುಕಲು ಸಾಧ್ಯವಾಗದು ಎಂದು ಈ ಹಿಂದೆ ಭಾವಿಸಿದ್ದ ಸ್ಥಳಗಳಲ್ಲೂ, ಮನುಷ್ಯ ಮುಂದುವರೆಯಲು ಸಾಧ್ಯವಿದೆ ಎಂಬುದನ್ನು ಈ ಅಧ್ಯಯನ ತಿಳಿಸಿದೆ.

## ನವಿಲೆಯಲ್ಲಿ 18ರಿಂದ ಕೃಷಿ ಮತ್ತು ತೋಟಗಾರಿಕೆ ಮೇಳ

ದಾವಣಗೆರೆ, ಅ.13- ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ ಕೃಷಿ ಹಾಗೂ ಕೃಷಿ ಸಂಬಂಧಿತ ಅಭಿವೃದ್ಧಿ ಇಲಾಖೆಗಳ ಸಹಯೋಗದೊಂದಿಗೆ ಇದೇ ದಿನಾಂಕ 18 ರಿಂದ 21 ರವರೆಗೆ ನವಿಲೆಯಲ್ಲಿನ ವಿವಿ ಆವರಣದಲ್ಲಿ ಕೃಷಿ ಮತ್ತು ತೋಟಗಾರಿಕೆ ಮೇಳ ಆಯೋಜಿಸಲಾಗಿದೆ.

ಕೃಷಿ-ತೋಟಗಾರಿಕೆ ಮೇಳವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟನೆ ಮಾಡುವರು.

ಈ ಮೇಳದಲ್ಲಿ ನೂತನ ಕೃಷಿ ಪದ್ಧತಿ, ವಿವಿಧ ತಳಿಗಳ ಪರಿಚಯ, ಕೃಷಿಯಲ್ಲಿ ಆಧುನಿಕತೆ ಸೇರಿದಂತೆ ವಸ್ತುಪ್ರದರ್ಶನ ಮತ್ತು ಮಾಹಿತಿ ನೀಡಲಾಗುತ್ತದೆ. ರೈತರು ಮೇಳದಲ್ಲಿ ಭಾಗವಹಿಸಿ ಲಾಭ ಪಡೆಯಲು ಕೋರಲಾಗಿದೆ.

## ಡಾ. ಎಂ. ಬಸವಂತಪ್ಪ ನಿಧನಕ್ಕೆ ಜಿಲ್ಲಾ ಕಸಾಪ ಕಂಬನಿ

ದಾವಣಗೆರೆ, ಅ. 13- ಸರಳ ಸಜ್ಜನಿಕೆ ಸಾಕಾರ ಮೂರ್ತಿಯಾಗಿದ್ದ ತಮ್ಮ ವೈದ್ಯಕೀಯ ವೃತ್ತಿಯಲ್ಲಿ ಅಪಾರ ಜನಪ್ರಿಯತೆ ಪಡೆದಿದ್ದ, 2022 ನೇ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾಗಿದ್ದ ಸಂತೆಬೆನ್ನೂರಿನ ಡಾ. ಎಂ. ಬಸವಂತಪ್ಪ ಅವರ ನಿಧನಕ್ಕೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದೆ.

ಡಾ. ಬಸವಂತಪ್ಪ ಅವರ ಅಗಲಿಕೆಯಿಂದ ಬಡವರ ಪಾಲಿನ ವೈದ್ಯ ದೇವರನ್ನು ಆ ಭಾಗದ ಜನರು ಕಳೆದುಕೊಂಡಂತಾಗಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಹೇಳಿದ್ದಾರೆ.

# ನಿವೇಶನ ಹಕ್ಕು ಪತ್ರ ನೀಡುವಂತೆ ಆಗ್ರಹಿಸಿ ಪುರಸಭೆ ಎದುರು ಧರಣಿ



ಮಲೇಬೆನ್ನೂರು, ಅ.13- ಪಟ್ಟಣದ 11ನೇ ವಾರ್ಡ್‌ನಲ್ಲಿ ಭದ್ರಾ ಚಾನಲ್ ಪಕ್ಕದ ಸರ್ಕಾರಿ ಜಾಗದಲ್ಲಿ ಕಳೆದ 35 ವರ್ಷಗಳಿಂದ ವಾಸಿಸುತ್ತಿರುವ ನಮಗೆ ನಿವೇಶನ ಹಕ್ಕು ಪತ್ರ ನೀಡುವಂತೆ ಆಗ್ರಹಿಸಿ ಅಲ್ಲಿನ ನಿವಾಸಿಗಳು ಪುರಸಭೆ ಎದುರು ಬುಧವಾರ ಧರಣಿ ನಡೆಸಿದರು.

ಈ ಜಾಗದಲ್ಲಿ ಸರ್ಕಾರದಿಂದ ನೀರಿನ ಟ್ಯಾಂಕ್ ಕಟ್ಟಿದ್ದಾರೆ. ಅಲ್ಲದೆ ಅಲ್ಲಿ ದೇವಸ್ಥಾನವೂ ಇರುತ್ತದೆ. ನಾವು ಈ ಜಾಗದಲ್ಲಿ ವಾಸಿಸುತ್ತಿರುವ ಬಗ್ಗ ಐಡಿ ಕಾರ್ಡ್, ಆಧಾರ್ ಕಾರ್ಡ್ ಪಡೆದಿದ್ದೇವೆ. ಜೊತೆಗೆ ನಾವು ವಾಸಿಸುವ ಗುಡಿಸಲು ಮನೆಗಳಿಗೆ ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕವನ್ನೂ ನೀಡಿದ್ದಾರೆ.

ಇಷ್ಟೆಲ್ಲಾ ದಾಖಲೆಗಳಿದ್ದರೂ ಖಾಸಗಿ ವ್ಯಕ್ತಿಗಳ ಒತ್ತಡಕ್ಕೆ ಮಣಿದು ನಮಗೆ ಜಾಗ ಖಾಲಿ ಮಾಡುವಂತೆ ಒತ್ತಡ ಹಾಕುವುದು ಸರಿಯೇ? ಎಂದು ಧರಣಿ ನಿರತರು ಪುರಸಭೆ ಅಧಿಕಾರಿಗಳನ್ನು ಪ್ರಶ್ನಿಸಿದರು.

ಧರಣಿ ನಿರತರದಿಂದ ಮನವಿ ಪತ್ರ ಸ್ವೀಕರಿಸಿದ ಪುರಸಭೆ ಮುಖ್ಯಾಧಿಕಾರಿ ಭಜಕ್ಕನವರ್ ಮಾತನಾಡಿ, ಈ ವಿಷಯವನ್ನು ಡಿಸಿ ಯವರ ಗಮನಕ್ಕೆ ತರುತ್ತೇನೆ ಎಂದರು.

ಧರಣಿಯಲ್ಲಿ ಪಾಲ್ಗೊಂಡಿದ್ದ ಕರಿಬಸಮ್ಮ, ಬಸಮ್ಮ, ನಾಗಮ್ಮ, ಲಕ್ಷ್ಮಣ, ದುಗ್ಗಮ್ಮ, ಭೋವಿ ಹನುಮಂತ, ವೆಂಕಟೇಶ್, ಗೋವಿಂದರಾಜ್, ಚಂದ್ರು, ದೇವೇಂದ್ರಪ್ಪ, ರಾಮ, ಗೋರಪ್ಪ ಸೇರಿದಂತೆ ಇನ್ನೂ ಅನೇಕರು ಮಾತನಾಡಿ, ನಾವು ಯಾವ ಕಾರಣಕ್ಕೂ ಅಲ್ಲಿಂದ ಜಾಗ ಖಾಲಿ ಮಾಡಲ್ಲ. ನಮಗೆ ನಿವೇಶನ ಹಕ್ಕು ಪತ್ರ ನೀಡಿ ಎಂದು ಆಗ್ರಹಿಸಿದರು.

## ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ದಾವಣಗೆರೆ, ಅ. 13 - ಡಾ. ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದಿಂದ ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಸೇವಾ ಸಿಂಧು ಪೋರ್ಟಲ್ ಮೂಲಕ ಇದೇ ದಿನಾಂಕ 30 ರೊಳಗಾಗಿ ಅರ್ಜಿ ಸಲ್ಲಿಸಿ, ಸಲ್ಲಿಸಿದ ಅರ್ಜಿ ಮತ್ತು ದಾಖಲೆ ಗಳನ್ನು ಜಿಲ್ಲಾ ಸಂಯೋಜಕರು, ಡಾ.ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ನಿಗಮ, ದಾವಣಗೆರೆ ಇಲ್ಲಿಗೆ ಸಲ್ಲಿಸಲು ಹಾಗೂ ಮೊ.ಸಂ:98458 01361, 8105976617 ನ್ನು ಸಂಪರ್ಕಿಸಲು ತಿಳಿಸಲಾಗಿದೆ.



## ಕೊಟ್ಟೂರು ಶ್ರೀ ಗುರು ಬಸವೇಶ್ವರ ಸ್ವಾಮಿ ಪಲ್ಲಕ್ಕಿ ಉತ್ಸವ

ಕೊಟ್ಟೂರು, ಅ.13- ಶ್ರದ್ಧಾ ಭಕ್ತಿಗಳೊಂದಿಗೆ ಆಚರಣೆಗೊಂಡ ವಿಜಯದಶಮಿ ಹಬ್ಬದಂದು ಆರಾಧ್ಯ ದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಯ ಬೆಳ್ಳಿಯ ಪಲ್ಲಕ್ಕಿ ಮಹೋತ್ಸವ ವೈಭವದಿಂದ ಶನಿವಾರ ಸಂಜೆ ಅಂತಿಮ ತೆರೆಕಂಡಿತು.

# ಶೂನ್ಯಪೀಠದ ಮಹಾಚೇತನ ಶ್ರೀ ಜಯದೇವ ಜಗದ್ಗುರುಗಳು

**ಚಿತ್ರದುರ್ಗದಲ್ಲಿ 150 ನೇ ವರ್ಷದ ವರ್ಧಂತಿ ಮಹೋತ್ಸವ**



ಭಾರತದ ಇತಿಹಾಸ ಪರಂಪರೆಯಲ್ಲಿ ಹನ್ನೆರಡನೆಯ ಶತಮಾನ ಅತ್ಯಂತ ಮಹತ್ವಪೂರ್ಣವಾದ ಕಾಲಘಟ್ಟ, ಕಾರಣ ಆ ಕಾಲದ ವಿಚಾರಶಕ್ತಿ, ಅಧ್ಯಾತ್ಮಿಕ ಉನ್ನತಿ, ಸಾಮಾಜಿಕ ಆಂದೋಲನ ಹಾಗೂ ವಿವಿಧ ಕ್ಷೇತ್ರಗಳ ಕ್ರಾಂತಿಕಾರಕ ಸುಧಾರಣೆಗಳು ಇವುಗಳ ಬೆಳವಣಿಗೆಗೆ ಕಾರಣ ಕರ್ತವಾದ ಮಹಾ ಚೈತನ್ಯಗಳೇ ಶ್ರೀ ಬಸವಾದಿ ಶರಣರು. ಇವರ ವಚನ ಸಂದೇಶ ಇಡೀ ನಾಡಿನ ಮಾನವ ಕಲ್ಯಾಣವನ್ನು ಸಾಧಿಸಿ, ವಿಶ್ವವನ್ನೇ ತನ್ನ ಬೆಳ್ಳಿಯ ಬೆಳಕಿನಿಂದ ಬೆಳಗಿಸಿದ ಮಹಾನ್ ಕಿರಣಗಳು. ಅಂಥ ಪರಂಪರೆಯಲ್ಲಿ ಸಾಗಿಬಂದ ಚಿತ್ರದುರ್ಗದ ಶೂನ್ಯ ಪೀಠ ಮಹತ್ವ ಪಡೆದುಕೊಂಡಿದೆ. ಈ ಪರಂಪರೆಯಲ್ಲಿ ಅನೇಕ ಜಗದ್ಗುರುಗಳು ಪೀಠವನ್ನು ಅಲಂಕರಿಸಿ, ತಾವು ನಡೆದ ಸತ್ಯ, ಧರ್ಮದ ಮಾರ್ಗದಲ್ಲಿ ಜನತೆಯನ್ನು ಮುನ್ನಡೆಸಿ ಕೃತಾರ್ಥರಾಗಿದ್ದಾರೆ. ಅಂಥ ಮಹಾಚೇತನರಲ್ಲಿ ಶ್ರೀ ಜಯದೇವ ಜಗದ್ಗುರುಗಳು ಒಬ್ಬರು.

ಇತಿಹಾಸ ಪ್ರಸಿದ್ಧವಾದ ಕೊಪ್ಪಳ ಜಿಲ್ಲೆ ಯಲಬುರ್ಗ ತಾಲ್ಲೂಕಿನ ಬಿನ್ನಾಳ ಗ್ರಾಮದ ಹಿರೇಮಠದ ಶ್ರೀ ಚನ್ನಬಸವಯ್ಯ ಮತ್ತು ಭ್ರಮರಾಂಬೆ ಅವರ ಪುಣ್ಯ ಗರ್ಭದಲ್ಲಿ ದಿ: 27-08-1874 ರಂದು ಜನಿಸಿ ಚನ್ನವೀರ ದೇವರೆಂಬ ನಾಮಾಂಕಿತದಿಂದ ಬೆಳೆದು, ಬಾಲ್ಯದಲ್ಲಿಯೇ ಗದುಗಿನ ತೋಂಟದಾರ್ಯ ಮಠದಲ್ಲಿ ಇದ್ದು, ಹಂಪಸಾಗರದಲ್ಲಿ ವಿದ್ಯಾಭ್ಯಾಸ ಪಡೆದು ನಂತರ ಗದುಗಿನ ಪಾಠಶಾಲೆಯಲ್ಲಿ ನೀಲಕಂಠ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ವಿದ್ಯಾಭ್ಯಾಸ ಮುಂದುವರೆಸಿ ಆಗಾದ ಪ್ರತಿಭೆ-ಪಾಂಡಿತ್ಯವನ್ನು ಪಡೆದವರು. ವಾರದ ಮಲ್ಲಪ್ಪನವರ ಸಹಾಯದಿಂದ ಕಾಶಿ ಜ್ಞಾನಪೀಠದಲ್ಲಿ ಉನ್ನತ ವ್ಯಾಸಂಗವನ್ನು ಮುಂದುವರೆಸಿ ಶ್ರೀ ಭಟ್ಟಾಚಾರ್ಯ ಮತ್ತು ಶ್ರೀ ತಾರಚರಣರಲ್ಲಿ ಸಂಸ್ಕೃತ ವ್ಯಾಕರಣ, ತರ್ಕ, ನ್ಯಾಯಶಾಸ್ತ್ರವನ್ನು ಅಭ್ಯಾಸ ಮಾಡಿ ಆ ಪರೀಕ್ಷೆಯಲ್ಲಿ ಉನ್ನತ ಸ್ಥಾನ ಪಡೆದು 'ಜಯದೇವ' ಎಂಬ ಪ್ರಶಸ್ತಿಗೆ ಭಾಜನರಾಗಿ ಆ ಅನ್ವರ್ಥ ನಾಮದಿಂದ ಲೋಕ ವಿಖ್ಯಾತರಾದವರು. ಅಂತಹ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟದ ನೇತಾರರಲ್ಲಿ ಒಬ್ಬರಾದ ಲೋಕಮಾನ್ಯ ಬಾಲಗಂಗಾಧರ ತಿಲಕ್‌ರು ಕಾಶಿ ಜ್ಞಾನಪೀಠಕ್ಕೆ ಭೇಟಿ ನೀಡಿ ಆ ವಿಶೇಷ ಪ್ರತಿಭೆಯನ್ನು ಕಂಡು ಹಾರೈಸಿದ ಮಹಾನೀಯರು.

ಅಥಣಿ ಶಿವಯೋಗಿಗಳು ಮತ್ತು ಹುಬ್ಬಳ್ಳಿ ಗಂಗಾಧರ ಜಗದ್ಗರುಗಳು ಹಾಗೂ ಹಾನಗಲ್ ಕುಮಾರ ಶಿವಯೋಗಿಗಳಂತವರು ಅವರ ಪ್ರತಿಭೆ ಹಾಗೂ ಮುಖದ ಅದ್ವಿತೀಯ ತೇಜಸ್ಸನ್ನು ಕಂಡು ಆಶ್ಚರ್ಯ ಚಕಿತರಾಗಿ ಮುಂದೆ ದೊಡ್ಡ ಪೀಠದ ಅಧಿಪತ್ಯ ವಹಿಸಿ ಆಡಳಿತ ನಡೆಸುವ ಮಹಾಮೇಧಾವಿಗಳು ಎಂದು ಮುನ್ಸೂಚನೆ ನೀಡಿ ಬಣ್ಣಿಸಿದ ಮಹಾತ್ಮರು.

ಅಂತೆಯೇ ಚಿತ್ರದುರ್ಗ ಶೂನ್ಯ ಪೀಠದ ಶ್ರೀ ಜಗದ್ಗುರು ಮುಪ್ಪಿನೇಂದ್ರ ಮಹಾಸ್ವಾಮಿಗಳು ಲಿಂಗೈಕ್ಯರಾದ ನಂತರ ದಿನಾಂಕ :05-11-1903 ರಲ್ಲಿ ಶೂನ್ಯ ಪೀಠವನ್ನು ಅಲಂಕರಿಸಿದ ಮಹಾಮಹಿಮರು.

ಶ್ರೀಜಯದೇವ ಜಗದ್ಗುರುಗಳು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಶ್ರೀಪೀಠ ಆರು ಸಾವಿರ ರೂ. ಸಾಲದ ಸುಳಿಯೊಳಗೆ ಸಿಲುಕಿಕೊಂಡು ಪರಿತಪಿಸುವಂತಹ ಸನ್ನಿವೇಶವನ್ನು ಅವಲೋಕಿಸಿ ತಮ್ಮ ದೃಢಸಂಕಲ್ಪದೊಂದಿಗೆ ಸಾಧನೆಯತ್ತ ಹೆಜ್ಜೆ ಹಾಕಿದವರು.

ಒಮ್ಮೆ ತಮ್ಮ ಕಾಲಿನ ಗಾಯಕ್ಕೆ ಔಷಧಿ ಹಚ್ಚಿ ವಸ್ತ್ರವನ್ನು ಸುತ್ತಿ ಕಟ್ಟುವ ಸಂದರ್ಭದಲ್ಲಿ ಸಮಾಜಕ್ಕೆ ಆದ ಬಡತನ, ಅಜ್ಞಾನ ಹಾಗೂ ಅಂಧಕಾರದ ಗಾಯವನ್ನು 'ಸುತ್ತು-ಕಟ್ಟು' ಎನ್ನುವ ಪರಿಕಲ್ಪನೆಯ ಮುಖೇನ ನಾಡನ್ನು ಸುತ್ತಿ, ಸಮಾಜವನ್ನು ಕಟ್ಟುವ ಕಾರ್ಯದಲ್ಲಿ ಯಶಸ್ವಿಯಾದವರು.

ಪ್ರತಿ ಹಳ್ಳಿಗೆ ಏಕರಾತ್ರಿಯಂತೆ, ಪಟ್ಟಣಕ್ಕೆ ಪಂಚರಾತ್ರಿಯಂತೆ ಸಂಚರಿಸಿ ಸಾಮಾಜಿಕ, ಧಾರ್ಮಿಕ ಮತ್ತು ವಿದ್ಯಾಪ್ರಸಾರ ಕಾರ್ಯಗಳನ್ನು ಕೈಗೊಂಡು ದಾವಣಗೆರೆ, ಬೆಳಗಾವಿ, ಧಾರವಾಡ, ಪೂನಾ, ಹೈದ್ರಾಬಾದ್, ಸೊಲ್ಲಾಪುರ, ಸಾಂಗ್ಲಿ, ಜತ್ತಾ, ಮೈಸೂರು ಹಾಗೂ ಬೆಂಗಳೂರು ಮುಂತಾದ ಕಡೆಗಳಲ್ಲಿ ಸಮಾಜೋನ್ನತಿಗಾಗಿ ವಿದ್ಯಾರ್ಥಿನಿಲಯ ಮತ್ತು ಗ್ರಂಥಾಲಯ ಹಾಗೂ ಆರೋಗ್ಯಧಾಮ ಗಳನ್ನು ಸ್ಥಾಪಿಸಿದಂತಹವರು.

ವೀರಶೈವ ಮಹಾಸಭೆ ವ್ಯವಸ್ಥಿತವಾಗಿ ನಡೆಯಲು ಅನುಕೂಲವಾಗುವಂತೆ 63 ಸಾವಿರ ರೂಪಾಯಿಗಳನ್ನು 'ಚಿರಸ್ಥಾಯಿ ನಿಧಿ' ಸ್ಥಾಪಿಸಿ ಅದರ ಬೆಳವಣಿಗೆ ಹಾಗೂ ಪ್ರಗತಿಗೆ ಕಾರಣೀಕರ್ತರಾದವರು. ನೂರಾರು ಸಂಘ-ಸಂಸ್ಥೆ ಹಾಗೂ ಸಂಘಟನೆಗಳ ಏಳಿಗೆಗೆ ಸಹಾಯ ಮಾಡುವ ಮುಖೇನ ಧಾನ-ದಾಸೋಹಕ್ಕೆ ಮೇಲ್ಪಂಕ್ತಿ ಹಾಕಿದವರು. ಜಾತಿ-ಮತ-ಧರ್ಮಗಳ ಮೇರೆ ದಾಟಿ ಅವುಗಳ ಉನ್ನತಿಗೆ ಶ್ರಮಿಸಿದ ಮಹಾನ್ ಸಂತರು.

1934ರಲ್ಲಿ ಕರ್ನಾಟಕ ಪ್ರದೇಶದಲ್ಲಿ ಸಂಚಾರ ಕೈಗೊಂಡಿದ್ದ ಮಹಾತ್ಮ ಗಾಂಧೀಜಿಯವರು ಹಾವೇರಿಯಲ್ಲಿ ಶ್ರೀಜಯದೇವ ಜಗದ್ಗುರುಗಳನ್ನು ಭೇಟಿ ಮಾಡಿ ಧರ್ಮೋದ್ಧಾರ, ದೇಶೋದ್ಧಾರ ಹಾಗೂ ಸಮಜೋದ್ಧಾರದ ಬಗ್ಗೆ ಚರ್ಚಿಸಿ ಅವುಗಳ ಅನುಷ್ಠಾನಗೊಳಿಸುವ ಬಗ್ಗೆ ಮಾಡಿದ ನಿರ್ಧಾರ ನಿಜಕ್ಕೂ ಅವಿಸ್ಮರಣೀಯ.

ದಿನಾಂಕ : 14-09-1937 ರಲ್ಲಿ ಚಿತ್ರದುರ್ಗದ ಶೂನ್ಯ ಪೀಠಕ್ಕೆ ಅಂದಿನ ಮೈಸೂರು ದೊರೆಗಳಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಆಗಮಿಸಿ ಪೀಠದ ಪವಾಡ ಸದೃಶ್ಯ ಕಾರ್ಯಗಳು ಹಾಗೂ ಜಗದ್ಗುರುಗಳು ಮಾಡುತ್ತಿರುವ ಶಿಕ್ಷಣ, ಪ್ರಸಾದ ನಿಲಯ ಹಾಗೂ ಆರೋಗ್ಯದ ಕಾರ್ಯಗಳು ಮೈಸೂರು ಸಂಸ್ಥಾನಕ್ಕೆ ಕೀರ್ತಿ-ಗೌರವ ತಂದುಕೊಟ್ಟ ಮಹಾನ್ ಕಾಣಿಕೆಗಳಾಗಿವೆ ಎಂದು ಪ್ರಶಂಸಿದ ಗಳಿಗೆ ನಿಜಕ್ಕೂ ಅನನ್ಯ.

ಶ್ರೀ ಜಗದ್ಗುರುಗಳವರು ಕನ್ನಡ ನಾಡು-ನುಡಿ-ಸಂಸ್ಕೃತಿಯ ಬಗ್ಗೆ ಅತ್ಯಂತ ಕಾಳಜಿ, ಪ್ರೇಮ ಮತ್ತು ಅಭಿಮಾನ ಉಳ್ಳವರಾಗಿ ಅಖಿಲ ಕರ್ನಾಟಕ ಏಳನೇ ಸಮ್ಮೇಳನವನ್ನು ಆಯೋಜಿಸಿ ಅದರ ಮೂಲಕ ಕರ್ನಾಟಕ ಏಕೀಕರಣಕ್ಕೆ ನಾಂದಿ ಹಾಡಿದ ಮಹಾಪುರುಷರಾಗಿದ್ದಾರೆ.

ಹೀಗೆ ಸಾವಿರಾರು ರಚನಾತ್ಮಕ ಕಾರ್ಯ ಯೋಜನೆ ಅನುಷ್ಠಾನಗೊಳಿಸಿ 1942 ರಲ್ಲಿ ಮುಳುಗುಂದದ ಶ್ರೀ ಶಿವಲಿಂಗ ದೇವರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ಗೊತ್ತು ಮಾಡಿ 1949 ರಲ್ಲಿ ಅಧಿಕಾರವನ್ನು ಹಸ್ತಾಂತರಿಸಿ, ಶ್ರೀ ಶೂನ್ಯ ಪೀಠವನ್ನು ನವಕೋಟಿ ಪೀಠವನ್ನಾಗಿ ಪರಿವರ್ತಿಸಿ ವಿಶ್ರಾಂತ ಬದುಕನ್ನು ಸಾಗಿಸಿ 1956 ಭಾದ್ರಪದ ಬಹುಳ ಚತುರ್ದಶಿಯಂದು ಲಿಂಗಾಂಗ ಸಾಮರಸ್ಯ ಹೊಂದಿ ದಾವಣಗೆರೆಯ ಶಿವಯೋಗಾಶ್ರಮದಲ್ಲಿ ಸಮಾಧಿ ಸ್ಥಿತಿಯನ್ನು ಪಡೆದವರು.

ಚಿತ್ರದುರ್ಗದ ಶೂನ್ಯ ಪೀಠವನ್ನು 53 ವರ್ಷಗಳವರೆಗೆ ತಮ್ಮ ಪ್ರತಿಭೆ-ಪಾಂಡಿತ್ಯದಿಂದ ಬೆಳಗಿ ಸಾಧನೆ ಸಿದ್ಧಿಗಳಿಂದ ಸಮಾಜ ಅಭಿವೃದ್ಧಿ ಪಥದತ್ತ ಕೊಂಡ್ಯೊಯ್ದು ತಮ್ಮ ಜೀವನ ಭವ್ಯವಾಗಿಸಿಕೊಂಡು ಈ ನಾಡಿನ ಭಕ್ತರ ಹೃನ್ಮಂದಿರಗಳಲ್ಲಿ ಚಿರಸ್ಥಾಯಿಯಾಗಿ ಉಳಿದ ಮಹಾಚೇತನರು.

ಶೂನ್ಯ ಪೀಠ ಪರಂಪರೆಯ ಶ್ರೀ ಜಗದ್ಗುರು ಮುರುಘಾರಾಜೇಂದ್ರ ಬೃಹನ್ಮಠದ ಶರಣ ಸಂಸ್ಕೃತಿ ಉತ್ಸವದಲ್ಲಿ ಶ್ರೀಜಯದೇವ ಜಗದ್ಗುರುಗಳ 150ನೇ ಜಯಂತ್ಯೋತ್ಸವನ್ನು ಅರ್ಥಪೂರ್ಣ ಹಾಗೂ ವಿದ್ವತ್‌ಪೂರ್ಣವಾಗಿ ಆಚರಿಸುತ್ತಿರುವುದು ಹಾಗೂ ಈ ನಾಡಿನ ಭಕ್ತವೃಂದ ಶ್ರೀ ಜಯದೇವ ಜಗದ್ಗುರುಗಳ ಬೆಳ್ಳಿಯ ಪ್ರತಿಮೆ, ಪಾದುಕೆ ಹಾಗೂ ಪದಕಗಳನ್ನು ಶ್ರೀಪೀಠಕ್ಕೆ ಸಮರ್ಪಿಸುವುದರೊಂದಿಗೆ ತಮ್ಮ ಭಕ್ತಿ ಗೌರವವನ್ನು ಸಲ್ಲಿಸುವ ಸ್ಮರಣೀಯ ಸಂಭ್ರಮ ನಿಜಕ್ಕೂ ಸಾರ್ಥಕ.

**-ನಿರಂಜನ ದೇವರ ಮನೆ,**
ಲೇಖಕರು ಹಾಗೂ ಅಧ್ಯಾಪಕರು, ಚಿತ್ರದುರ್ಗ.

## ವಿಜ್ಞಾನ ಪ್ರಶ್ನೆ ಪತ್ರಿಕೆ ಸರಳೀಕರಣ ಮಾಡುವಂತೆ ಶಿಕ್ಷಕರ ಆಗ್ರಹ



ದಾವಣಗೆರೆ, ಅ.13- ಎಸ್.ಎಸ್.ಎಲ್.ಸಿ ವಿಜ್ಞಾನ ವಿಷಯದ ಪ್ರಶ್ನೆ ಪತ್ರಿಕೆಯನ್ನು ಸರಳೀಕರಣಗೊಳಿಸುವಂತೆ ಆಗ್ರಹಿಸಿ ಜಿಲ್ಲಾ ಪ್ರೌಢಶಾಲಾ ವಿಜ್ಞಾನ ಶಿಕ್ಷಕರ ವೇದಿಕೆಯು ಡಿಡಿಪಿಐ ಜಿ. ಕೊಟ್ರೇಶ್ ಹಾಗೂ ಡಯಟ್ ಪ್ರಾಚಾರ್ಯರಾದ ಗೀತಾ ಅವರಿಗೆ ಮನವಿ ಸಲ್ಲಿಸಿತು. ಮೂಲ ವಿಜ್ಞಾನದ ಉಳಿವಿನ ಆರಂಭವು ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಂದ ಆಗಬೇಕಿದೆ. ಹಾಗಾಗಿ ಈ ಹಂತದಲ್ಲಿ ಓದುವ ಮಕ್ಕಳಿಗೆ ವಿಜ್ಞಾನದ ಬಗೆಗೆ ಆಸಕ್ತಿ ಮೂಡಿಸುವುದು ಬಹಳ ಮುಖ್ಯ. ಹಾಗಾಗಿ ಇದಕ್ಕೆ ಪೂರಕವಾಗಿ ಪ್ರಶ್ನೆ ಪತ್ರಿಕೆಯ ಸ್ವರೂಪ ಬದಲಾವಣೆ ಪ್ರಮುಖ ಹೆಜ್ಜೆಯಾಗಿದೆ ಎಂದು ಮನವಿ ಮಾಡಿದ್ದಾರೆ.

ಈ ವೇಳೆ ವೇದಿಕೆಯ ಜಿಲ್ಲಾಧ್ಯಕ್ಷ ಡಿ.ಜಿ. ರಾಮಚಂದ್ರಪ್ಪ, ಪ್ರಧಾನ ಕಾರ್ಯದರ್ಶಿ ಎಂ.ಎನ್. ಶ್ರೀಧರಮಯ್ಯ, ಖಜಾಂಚಿ ವೈ. ರುದ್ರಪ್ಪ ಮತ್ತಿತರರಿದ್ದರು.

## 10ನೇ ತರಗತಿ ವಿಜ್ಞಾನ ಪ್ರಶ್ನೆ ಪತ್ರಿಕೆ ಸಮಸ್ಯೆ

**ಪರಿಹಾರಕ್ಕೆ ಸಭೆ**

ದಾವಣಗೆರೆ, ಅ.13- ಪ್ರಸ್ತುತ ಪ್ರೌಢಶಾಲೆಯಲ್ಲಿ ಬೋಧಿಸುತ್ತಿರುವ ವಿಜ್ಞಾನ ವಿಷಯದ ಹತ್ತನೇ ತರಗತಿಯ ಪ್ರಶ್ನೆ ಪತ್ರಿಕೆಯಲ್ಲಿ ಬರುವ ಪ್ರಶ್ನೆಗಳ ಕಠಿಣತೆ ಮತ್ತು ಪ್ರಶ್ನೆ ಪತ್ರಿಕೆಯ ಸ್ವರೂಪದ ಸರಳೀಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ನಿಂಚನ ಪ್ರೌಢಶಾಲೆಯಲ್ಲಿ ಚರ್ಚಿಸಲಾಯಿತು.

ಜಿಲ್ಲೆಯ ಚನ್ನಗಿರಿ, ಹರಿಹರ, ಜಗಳೂರು, ಹೊನ್ನಾಳಿ, ದಾವಣಗೆರೆ ಉತ್ತರ, ದಾವಣಗೆರೆ ದಕ್ಷಿಣ ವಲಯದ ಪ್ರೌಢಶಾಲಾ ವಿಜ್ಞಾನ ಶಿಕ್ಷಕರು ಸಭೆಯಲ್ಲಿ ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ವಿಜ್ಞಾನ ವಿಷಯ ಶಿಕ್ಷಕರ ವೇದಿಕೆಯನ್ನು ರಚಿಸಿ ಪದಾಧಿಕಾರಿಗಳನ್ನೂ ಆಯ್ಕೆ ಮಾಡಲಾಯಿತು.

ಜಿಲ್ಲಾ ಸಂಘದ ಗೌರವ ಅಧ್ಯಕ್ಷರಾಗಿ ಶಿವಮೂರ್ತಿ ಕೆ, ಅಧ್ಯಕ್ಷರಾಗಿ ರಾಮಚಂದ್ರಪ್ಪ ಡಿ.ಜಿ., ಉಪಾಧ್ಯಕ್ಷರಾಗಿ ಜಹಾನ್ ಅರಾ ಬೇಗಂ, ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀಧರಮಯ್ಯ ಎಂ.ಎನ್. ಮತ್ತು ಭೀಮಪ್ಪ ಹೆಚ್.ವಿ., ಕೋಶಾಧ್ಯಕ್ಷರುಗಳಾಗಿ ಪುಷ್ಪ ಕುಮಾರ್ ಕೆ. ಮತ್ತು ರುದ್ರಪ್ಪ ವೈ. ಸಂಘಟನಾ ಕಾರ್ಯದರ್ಶಿ ಗಳಾಗಿ ಮಂಜುನಾಥ ಸಾಹುಕಾರ್ ಮತ್ತು ಮಂಜುನಾಥ್ ಜೋಗಪ್ಪನವರ್, ಮಾಧ್ಯಮ ಸಂಪನ್ಮೂಲ ತಂಡದ ಸದಸ್ಯರಾಗಿ ಕೃಷ್ಣಮೂರ್ತಿ ಎಚ್., ಸಿದ್ದೇಶ್ ಟಿ., ಶ್ರೀನಿವಾಸ ಬಿ., ಸಂತೋಷ್ ನೂಲಗೇರಿ, ಯೋಗೀಶ್ ಕೆ .ಎಂ. ಅವರುಗಳನ್ನು ಆಯ್ಕೆ ಮಾಡಲಾಯಿತು. ಸಭೆಯಲ್ಲಿ ನಿಂಚನ ಶಾಲೆಯ ಸಂಸ್ಥಾಪಕ ಅಧ್ಯಕ್ಷ ನಿಂಗಪ್ಪ ಅಧ್ಯಕ್ಷೀಯ ನುಡಿಗಳನ್ನಾಡಿ, ಇತ್ತೀಚಿನ ದಿನಗಳಲ್ಲಿ ಕರ್ನಾಟಕ ಪರೀಕ್ಷಾ ಮಂಡಳಿ ನೀಡುತ್ತಿರುವ ಹತ್ತನೇ ತರಗತಿಯ ಪ್ರಶ್ನೆ ಪತ್ರಿಕೆಗಳು ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತುಂಬಾ ಕಠಿಣಕರ ಹಾಗೂ ಗೊಂದಲದಿಂದ ಕೂಡಿರುತ್ತವೆ. ಹಾಗಾಗಿ ಈ ರೀತಿ ಸಂಘಟನೆಯ ಮೂಲಕ ಹೋರಾಟ ಮಾಡುವುದು ಸೂಕ್ತ ಎಂದರು. ಶಾಲೆಯ ಮುಖ್ಯ ಆಡಳಿತಾಧಿಕಾರಿ ಶ್ರೀಮತಿ ಶೃತಿ ಇನಾಂದಾರ್ ಈ ಸಂದರ್ಭದಲ್ಲಿದ್ದರು.

# ಕನ್ನಡ ಸಾಹಿತ್ಯ ಲೋಕದ ಮಹಾಂತರು : ಡಾ. ಶಿವರಾಮ ಕಾರಂತರು

ಕನ್ನಡಕ್ಕಾಗಿ ದುಡಿದು, ಕನ್ನಡದಲ್ಲಿಯೇ 'ನಾಲ್ಕು ನೂರಕ್ಕೂ' ಹೆಚ್ಚು ಗ್ರಂಥಗಳನ್ನು ಬರೆದು ಕನ್ನಡ ಸಂಸ್ಕೃತಿ, ಸಾಹಿತ್ಯದ ಮಹತ್ವವನ್ನು ವಿಶ್ವ ಸಾಹಿತ್ಯ ಪ್ರಪಂಚದ ಎತ್ತರಕ್ಕೆ ಏರಿಸಿದ ಲೇಖಕರಲ್ಲಿ ಡಾ. ಶಿವರಾಮ ಕಾರಂತರು. ಕನ್ನಡದ ಕಿರೀಟಕ್ಕೆ 'ಮೂರನೇ' ಜ್ಞಾನಪೀಠ ಪ್ರಶಸ್ತಿಯ ಗರಿಯನ್ನು ಕಾದಂಬರಿ ಸಾಹಿತ್ಯದ ಮೂಲಕ ಸಿಕ್ಕಿಸಿದರು. ಕಾರಂತರ ಕಾದಂಬರಿ ಸಾಹಿತ್ಯ, ನಾಟಕಗಳು, ಕಥೆ, ಪ್ರವಾಸ ಕಥನ, ಆತ್ಮ ಚರಿತ್ರೆ, ವಿಡಂಬನೆ, ವೈಚಾರಿಕ ಬರಹಗಳು, ಬಾಲ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಯಕ್ಷಗಾನ, ವಾಸ್ತುಶಿಲ್ಪ, ಚಿತ್ರಕಲೆ ಮುಂತಾದ ಕ್ಷೇತ್ರಗಳಲ್ಲಿನ ಅವರ ಸಾಧನೆಯ ಕೃಷಿಗೆ ಕಾರಂತರಿಗೆ 'ಕಾರಂತರೇ ಸಾಟಿ' ಎಂಬಂತಿದೆ. ಅವರ ಬದುಕಿನ ಹೆಜ್ಜೆಗಳು, ಪ್ರಾಮಾಣಿಕ ಸೇವೆ, ನಿರಂತರ ಪ್ರಯತ್ನದ ಬಹುಮುಖ ವ್ಯಕ್ತಿತ್ವದ ಶ್ರೇಷ್ಠ ಕನ್ನಡದ ಮಹಾಂತರು ಅಕ್ಟೋಬರ್ -10 ಅವರ ಜನ್ಮ ದಿನದ ಪ್ರಯುಕ್ತ ಸ್ಮರಿಸುವ ಕಿರು ಪ್ರಯತ್ನ ಓದುಗರಿಗಾಗಿ.

**- ಜನನ, ಶಿಕ್ಷಣ, ಕೌಟುಂಬಿಕ ಜೀವನ:-**

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ 'ಕೋಟ' ಗ್ರಾಮದಲ್ಲಿ 1902 ಅಕ್ಟೋಬರ್ 10 ರಂದು ಶಿವರಾಮ ಕಾರಂತರು ಜನಿಸಿದರು. ತಂದೆ ಶೇಷ ಕಾರಂತರು, ತಾಯಿ ಲಕ್ಷ್ಮೀ. ಶಿವರಾಮರಿಗೆ ನಾಲ್ವರು ಅಣ್ಣಂದಿರು, ನಾಲ್ವರು ತಮ್ಮಂದಿರು ಹಾಗೂ ಮೂವರು ತಂಗಿಯರ ತುಂಬು ಕುಟುಂಬ. ಬಾಲ್ಯದ ವಿದ್ಯಾಭ್ಯಾಸ 'ಕೋಟ' ಗ್ರಾಮದಲ್ಲಿ, ಪ್ರೌಢಶಿಕ್ಷಣ ಕುಂದಾಪುರದಲ್ಲಿ, ಕಾಲೇಜು ಶಿಕ್ಷಣಕ್ಕೆ ಮಂಗಳೂರಿನ ಸರ್ಕಾರಿ ಕಾಲೇಜು ಸೇರಿದರು. 1921 ರಲ್ಲಿ ಗಾಂಧೀಜಿಯ ಅಸಹಕಾರ ಚಳುವಳಿಯ ಪ್ರಭಾವ ವಿದ್ಯಾರ್ಥಿ ಬದುಕಿಗೆ ವಿದಾಯ ಹೇಳಿ ಚಳುವಳಿಯಲ್ಲಿ ಧುಮುಕಿದರು. ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿಷೇಧ, ಸ್ವದೇಶಿ ಪ್ರಚಾರದಲ್ಲಿ ಮನೆ-ಮಾರು ತೊರೆದು ದೇಶ ಸೇವೆಯಲ್ಲಿ ತೊಡಗಿದರು. 1924ರಲ್ಲಿ 'ವಸಂತ ಮಾಸ' ಪತ್ರಿಕೆ ಸಂಪಾದಕರಾದರು. 1936 ರಲ್ಲಿ 'ಲೀಲಾ' ಅವರನ್ನು ಅಂತರ್‌ಜಾತಿ ವಿವಾಹವಾದರು. ಎರಡು ಗಂಡು, ಎರಡು ಹೆಣ್ಣು ಮಕ್ಕಳ ತಂದೆಯಾದರು. ತಮ್ಮ ಬದುಕಿನುದ್ದಕ್ಕೂ ಒಬ್ಬ ಹೋರಾಟಗಾರನಂತೆ ಬಾಳಿದರು. ಕೆಡುಕುಗಳನ್ನು ಖಂಡಿಸಿದರು. 1997 ಡಿಸೆಂಬರ್ 9ಕ್ಕೆ ತಮ್ಮ 95ನೇ ವರ್ಷದಲ್ಲಿ ನಿಧನರಾದರು.

**- ಕೋಟ ಶಿವರಾಮ ಕಾರಂತರ ಕೃತಿಗಳು:-**


ಬಾಲ ಸಾಹಿತ್ಯ – 231, ಕಾದಂಬರಿ-45, ನಾಟಕಗಳು-31, ಕಲೆ-13, ಅನುವಾದಿತ – 16, ವೈಚಾರಿಕ-9, ವಿಶ್ವಕೋಶಗಳು-9, ಜೀವನ ಚರಿತ್ರೆ-09, ಬಿಡಿ ಬರಹಗಳು-08, ವಿಜ್ಞಾನ-8, ಹರಟೆ / ವಿಡಂಬನೆ -06, ಸಂಪಾದಿತ -05, ವಯಸ್ಕರ ಶಿಕ್ಷಣ – 08, ಪ್ರವಾಸ ಕಥನ-06, ಸಣ್ಣಕತೆ-04, ಕವಿತೆ-02, ನಿಘಂಟು -01, ಆಂಗ್ಲ ಭಾಷಾ ಕೃತಿಗಳು -06, ಒಟ್ಟು 417 ಕೃತಿಗಳನ್ನು ಬರೆದು ಕನ್ನಡ ಸಾಹಿತ್ಯ ದಿಗ್ಗಜರೆನಿಸಿಕೊಂಡಿದ್ದಾರೆ.

**- ಕಾರಂತರ ಜೀವನದ ಪ್ರಮುಖ ವಿಷಯಗಳು:-**

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ – 1954, ವಿವಿಧ ವಿಶ್ವವಿದ್ಯಾನಿಲಯಗಳಿಂದ ಗೌರವ ಡಿ.ಲಿಟ್ ಪದವಿ, 1962, ಕ.ವಿ.ವಿ. 1963, ಮೈಸೂರು ವಿವಿ, 1976, ಮೀರತ್ ವಿ.ವಿ 1983, ಮಗಳೂರು ವಿ.ವಿ 1993, ಜಬಲ್‌ಪುರ್ ವಿ.ವಿ 1986, ವರ್ಲ್ಡ್ ಅಕಾಡೆಮಿ 1996, ವಿಶ್ವಭಾರತಿ ವಿವಿ 1996, ನಾಡೋಜ ಕನ್ನಡ ವಿವಿ ಹಂಪಿ 1968, ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ 1978, ಜ್ಞಾನಪೀಠ ಪ್ರಶಸ್ತಿ (ಮೂಕಜ್ಜಿಯ ಕನಸುಗಳು) 1990, ದಾದಾಬಾಯಿ ಮೆಮೋರಿಯಲ್ ಪ್ರಶಸ್ತಿ, 1992, ಪಂಪ ಪ್ರಶಸ್ತಿ, 1994 ಇಂದಿರಾಗಾಂದಿ ಪರ್ಯಾವರಣ ಪುರಸ್ಕಾರ, 1995 - ಸರ್ ಎಂ.ವಿ. ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ, 1959 – ಕೇಂದ್ರ, ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1973 – ಕೇಂದ್ರ ಸಂಗೀತ ನಾಟಕ ಅಕಾಡೆಮಿ ಗೌರವ ಫೆಲೋಷಿಪ್, 1990 – ತುಲಸೀ ಸನ್ಮಾನ್ ಮಧ್ಯಪ್ರದೇಶ ಸರ್ಕಾರದಿಂದ, 1992 ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಇಲಾಖೆಯ ಫೆಲೋಷಿಪ್, ಹೀಗೆ ಇನ್ನೂ ಅನೇಕ ಪ್ರಶಸ್ತಿ, ಪುರಸ್ಕಾರ, ಗೌರವ ಡಾಕ್ಟರೇಟ್‌ಗಳು ದೊರೆತಿವೆ.

**- ಕಾರಂತರ ಬಾಲ ಸಾಹಿತ್ಯ, ವಿಜ್ಞಾನ ಸಾಹಿತ್ಯ:-**

ಮಕ್ಕಳ ಶಿಕ್ಷಣ ಮತ್ತು ಮನೋವಿಕಾಸ ಕುರಿತು ಶ್ರಮಿಸಿದರು. ಅವರು ಸ್ಥಾಪಿಸಿದ 'ಬಾಲವನ' ಅನೇಕ ಶಿಬಿರ, ಪ್ರಯೋಗಗಳು ನಡೆದು ಜನ ಮೆಚ್ಚುಗೆ ಪಡೆದವು. ಮಕ್ಕಳಿಗಾಗಿಯೇ 231 ಕೃತಿಗಳನ್ನು ರಚಿಸಿದ್ದಾರೆ. ಬಾಲ ಪ್ರಪಂಚ, ವಿಜ್ಞಾನ ಪ್ರಪಂಚ ಮತ್ತು ಪ್ರಾಣಿ ಪ್ರಪಂಚವೆಂಬ



ವಿಶ್ವಕೋಶಗಳು, ನಮ್ಮ ಭೂಖಂಡಗಳು 1965 ರಲ್ಲಿ ವಿಚಿತ್ರ ಖಗೋಲ, ವಿಜ್ಞಾನ ಮತ್ತು ಅಂಧಶ್ರದ್ಧೆ, ವಿಶಾಲ ಸಾಗರಗಳು ಎಂಬ ವಿಜ್ಞಾನ ಪುಸ್ತಕಗಳು. 'ಸಿರಿಗನ್ನಡ ಪಾಠಮಾಲೆ', ಹೂಗನ್ನಡ ಪಾಠಮಾಲೆ ಎಂಬ ಪಠ್ಯ ಪುಸ್ತಕಗಳು ಹೀಗೆ ಮಕ್ಕಳ ಸಾಹಿತ್ಯಕ್ಕೆ ಕಾರಂತರು ನೀಡಿದ ಕೊಡುಗೆ ಅಪಾರ.

**- ಕಾರಂತರ ಕನ್ನಡ ಕಾದಂಬರಿ ಸಾಹಿತ್ಯ:-**

ಕನ್ನಡ ಕಾದಂಬರಿಗಳಲ್ಲಿ ಶಿವರಾಮ ಕಾರಂತರಿಗೆ ಅಗ್ರಸ್ಥಾನವಿದೆ. ಆರು ದಶಕಗಳಲ್ಲಿ (1923-1986) ಸುಮಾರು 45 ಕಾದಂಬರಿ ಬರೆದಿದ್ದಾರೆ. ಕಾದಂಬರಿ ಸಾಹಿತ್ಯಕ್ಕೆ ಜ್ಞಾನಪೀಠ ಪ್ರಶಸ್ತಿ ಪಡೆದ ಶ್ರೇಷ್ಠ ಸಾಹಿತ್ಯ ದಿಗ್ಗಜರು. 1923ರಲ್ಲಿ ಬರೆದ 'ವಿಚಿತ್ರ ಕೂಟ' ಕಾರಂತರ ಪ್ರಥಮ ಕಾದಂಬರಿ 1986 ರಲ್ಲಿ ಬರೆದ 'ಅಂಟದ ಅಪರಂಜಿ' ಕೊನೆಯ ಕಾದಂಬರಿ, ಮೂಕಜ್ಜಿಯ ಕನಸುಗಳು' ಜ್ಞಾನಪೀಠ ಪ್ರಶಸ್ತಿ ಪಡೆದ ಕಾದಂಬರಿ. 'ಚೋಮನದುಡಿ', 'ಮರಳಿ ಮಣ್ಣಿಗೆ' ಅಳಿದ ಮೇಲೆ, ಮೈಮನಗಳ ಸುಳಿಯಲ್ಲಿ, ಕರುಳಿನ ಕರೆ, ಸರಸಮ್ಮನ ಸಮಾಧಿ, ಒಡಹುಟ್ಟಿದವರು, ಜನಮೆಚ್ಚಿದ ಕಾದಂಬರಿಗಳು. ಬಹುತೇಕ ಸಾಮಾಜಿಕ ಕಾದಂಬರಿಗಳಾಗಿವೆ. ಬದುಕಿನ ಸಮಸ್ಯೆಗಳು, ಅಂತಃ ಸತ್ವ ತಾಳ್ಮೆ ಅರಿವು, ಮನುಷ್ಯನ ಬದುಕಿಗೆ ಯಾವುದು ಆಧಾರ, ಎಂಬ ಅಂಶಗಳು ಕಾದಂಬರಿಯ ತಿರುಳಾಗಿವೆ. ಒಟ್ಟಾರೆ ಕನ್ನಡ ಸಾಹಿತ್ಯಕ್ಕೆ ಅವರ ಕಾದಂಬರಿಗಳು ವಿಶಿಷ್ಟವೆನಿಸಿವೆ.

**- ಡಾ. ಕಾರಂತರು ಬರೆದ ನಾಟಕಗಳು:-**

ವೃತ್ತಿರಂಗಭೂಮಿಗಾಗಿ 'ಕರ್ಣಾರ್ಜುನ', 'ಜ್ವಾಲಾಬಂಧನ', 'ಗದಾಯುದ್ಧ', 'ಕಠಾರಿ ಭೈರವ', 'ಗೋಮಾತೆ', ವಿಜಯನಗರ ಸೂರ್ಯ, 'ನಿಶಾಮಹಿಮೆ', ದೆಹಲಿಯ ದೌರ್ಭಾಗ್ಯ ಮುಂತಾದ ನಾಟಕ ಬರೆದು ನಿರ್ದೇಶಿಸಿದ ಕೀರ್ತಿ ಇವರದು. ತಮ್ಮ ರಂಗಾಸಕ್ತ ಮಿತ್ರರೊಂದಿಗೆ ಆಗಾಗ ಕೆಲವು ಪ್ರಯೋಗಗಳನ್ನು ನಟರ ಸಾಮರ್ಥ್ಯಗಳನ್ನು ಬಳಸಿಕೊಂಡು ಗೀತನಾಟಕ, ನೃತ್ಯ ನಾಟಕ, ಮೂಕ ನಾಟಕ ಕೈಗೊಂಡು ನಾಟಕ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಸಾಧಿಸಿ ತೋರಿಸಿದರು. 'ಮುಕ್ತದ್ವಾರ' ಕಾರಂತರ ಪ್ರಥಮ ಗೀತ ನಾಟಕ, ಸನ್ಯಾಸಿಯ ಬದುಕು, ಕಣ್ಣಿದ್ದೂ ಕಾಣರು, ಕನ್ಯಾಬಲಿ, ಕೇವಲ ಮನುಷ್ಯರು ಮುಂತಾದ ನಾಟಕಗಳಲ್ಲಿ ಸಮಾಜದ ಹುಳುಕನ್ನು ಎತ್ತಿ ತೋರಿಸಿದ್ದಾರೆ. 'ಗರ್ಭಗುಡಿ' ಬಿತ್ತಿದ ಬೆಳೆ ಅವರ ಪ್ರಮುಖ ನಾಟಕಗಳು. ಹೀಗೆ ಒಟ್ಟು 31 ನಾಟಕಗಳನ್ನು ರಚಿಸಿದ ಕೀರ್ತಿ ಕಾರಂತರದು.

**- ಶಿವರಾಮ ಕಾರಂತರು ಮತ್ತು ಯಕ್ಷಗಾನ:-**

ಕಾರಂತರು ಯಕ್ಷಲೋಕ ವಿಹಾರಿ, ಯಕ್ಷಗಾನ ಅವರ ಆಸಕ್ತಿಯ ಬಹುದೊಡ್ಡ ಕ್ಷೇತ್ರ. ಯಕ್ಷಗಾನ ಕಲೆಯ ವಿಶಿಷ್ಟ ನೃತ್ಯ, ಹಾಡುಗಾರಿಕೆ, ಅಭಿನಯ ಹಾಗೂ ಬಣ್ಣಗಾರಿಕೆ ಶ್ರದ್ಧೆಯಿಂದ ಕಲಿತರು. ಯಕ್ಷಗಾನವನ್ನು ಗೀತ ರೂಪಕವಾಗಿ ಸಾದರ ಪಡಿಸುವ ಸಾಹಸ ಮಾಡಿದ ಪ್ರಥಮರು. 1934 ರಿಂದ 20 ವರ್ಷಗಳ ಕಾಲ ಈ ಕಲೆಯ ಅನ್ವೇಷಣೆಗಾಗಿ ಅಲೆದಾಡಿ 1957 ರಲ್ಲಿ 'ಯಕ್ಷಗಾನ ಬಯಲಾಟ' ಎಂಬ ಗ್ರಂಥ ರಚಿಸಿದರು. ಅದರಲ್ಲಿಯ ನಾಲ್ಕು ಕಲಾ ಸಂಪ್ರದಾಯವನ್ನು ಪರಿಚಯಿಸಿದರು. ಕ್ರಿ.ಶ 11ನೇ ಶತಮಾನದ 'ಯಕ್ಷಗಾನ ಕಲೆಯೇ ಮೊದಲ ನಾಟಕ' ಎಂದು ತಿಳಿಸಿ ಅವರ 90ನೇ ಜನ್ಮದಿನದ ಸಮಾರಂಭದಲ್ಲಿ ಕಾರಂತರು ಕಾಲಿಗೆ ಗೆಜ್ಜೆ ಕಟ್ಟಿ ಅರ್ಧ ಗಂಟೆ ನೃತ್ಯಾಭಿನಯ ಪ್ರದರ್ಶಿಸಿ ಎಲ್ಲರಲ್ಲೂ ಆಶ್ಚರ್ಯ ಮೂಡಿಸಿದ್ದರು. ವಿಶ್ವದಲ್ಲೇ ಅದಕ್ಕೊಂದು ಸ್ಥಾನ ಗಳಿಸಿಕೊಟ್ಟ ಕಾರಂತರು ಯಕ್ಷಲೋಕದ ಶಕ ಪುರುಷರೇ ಸರಿ.

**- ಶಿವರಾಮ ಕಾರಂತರ ದೃಷ್ಟಿಯಲ್ಲಿ ಕನ್ನಡ ನುಡಿ:-**

ಕನ್ನಡಕ್ಕಾಗಿ ದುಡಿದವರಲ್ಲಿ, ಕನ್ನಡ ಕೈಂಕರ್ಯವನ್ನು ಕಾಯಾ, ವಾಚಾ, ಮನಸಾ ಕೈಗೊಂಡ ಪ್ರಮುಖರು. ಕರ್ನಾಟಕ ಏಕೀಕರಣ ಹಾಗೂ ಕನ್ನಡ ನಾಡು ನುಡಿಯ ಏಳಿಗೆಗಾಗಿ ಕನಸು ಕಂಡವರು. ಕನ್ನಡಮ್ಮನ ಸೇವೆಯನ್ನು ನೈಜ ಅರ್ಥದಲ್ಲಿ ಅವರ ಬರಹಗಳಲ್ಲಿ ಕನ್ನಡದ ಸೊಗಸನ್ನು ತೋರಿಸಿದ್ದಾರೆ. 1923 ರಷ್ಟು ಹಿಂದೆಯೇ ಗ್ರಾಮೀಣ ಪ್ರದೇಶದಲ್ಲಿ 'ವಸಂತ' ಕನ್ನಡ ಮಾಸ ಪತ್ರಿಕೆ ಮೂಲಕ ತಮ್ಮ ವಿಚಾರಗಳನ್ನು ತಿಳಿಸಿದರು. ಮಕ್ಕಳ ಶಿಕ್ಷಣದಲ್ಲೂ ಕನ್ನಡಕ್ಕೆ ಹೆಚ್ಚು ಮಹತ್ವ, ತುಳು, ಕೊಂಕಣಿ ಭಾಷೆಯ ಪ್ರಭಾವದಲ್ಲಿಯೂ 'ಕನ್ನಡ ಪುಸ್ತಕ' ಪ್ರಕಟಿಸುವ ಸಾಹಸ ಮಾಡಿದ ಕನ್ನಡ ನಾಡು ನುಡಿಯ ಗೌರವವನ್ನು ಹೆಚ್ಚಿಸಿದ ಕೀರ್ತಿ ಇವರದು. ಕಾರಂತರ ಸಮಗ್ರ ಸಾಹಿತ್ಯ, ಅಧ್ಯಯನಿಸಿದವರಿಗೆ ಕಾರಂತರ ವ್ಯಕ್ತಿತ್ವ, ಬಹುಮುಖ ಪ್ರತಿಭೆ, ತಿಳಿಯದೇ ಇರಲಾರದು.

**- ಡಾ. ಗಂಗಾಧರಯ್ಯ ಹಿರೇಮಠ**
ವಿಶ್ರಾಂತ ಪ್ರಾಧ್ಯಾಪಕರು, ದಾವಣಗೆರೆ
ಮೊ: 9880093613

# ಐದು ಎಕರೆ ಬೇಡವೆಂದ ಖರ್ಗೆ ಟ್ರಸ್ಟ್

**(1ನೇ ಪುಟದಿಂದ)** ಕಿರಿಯ ಪುತ್ರ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರು ಜಮೀನು ಮರಳಿಸುವ ಬಗ್ಗೆ ತಿಳಿಸಿದ್ದಾರೆ. ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಪತ್ರ ಬರೆದಿರುವ ರಾಹುಲ್ ಖರ್ಗೆ, ಬಹು ಕೌಶಲ್ಯಾಭಿವೃದ್ಧಿ ಕೇಂದ್ರ, ತರಬೇತಿ ಸಂಸ್ಥೆ ಹಾಗೂ ಸಂಶೋಧನಾ ಕೇಂದ್ರಕ್ಕೆ ಜಮೀನು ಕೋರಿ ಸಲ್ಲಿಸಿದ್ದ ಮನವಿ ವಾಪಸ್ ಪಡೆಯುತ್ತಿರುವುದಾಗಿ ಹೇಳಿದ್ದಾರೆ.

ಕೈಗಾರಿಕಾ ವಲಯದಲ್ಲಿ ಕೌಶಲ್ಯ ತರಬೇತಿ ಕೇಂದ್ರ ಸ್ಥಾಪಿಸುವುದರಿಂದ ಯುವ ಪೀಳಿಗೆಗೆ ಕೌಶಲ್ಯ ಕಲಿಯಲು ಹೆಚ್ಚು ಅವಕಾಶ ಸಿಗುತ್ತಿತ್ತು. ಸಿದ್ದಾರ್ಥ ವಿಹಾರ ಟ್ರಸ್ಟ್ ಸಾರ್ವಜನಿಕ ಶಿಕ್ಷಣ, ಸಂಸ್ಕೃತಿ ಹಾಗೂ ದತ್ತಿ ಸಂಸ್ಥೆಯಾಗಿದೆ. ಇದು ಖಾಸಗಿ ಇಲ್ಲವೇ ಕುಟುಂಬದ ಟ್ರಸ್ಟ್ ಅಲ್ಲ ಎಂದು ರಾಹುಲ್ ಖರ್ಗೆ ಹೇಳಿದ್ದಾರೆ.

ಶಿಕ್ಷಣ ಸಂಸ್ಥೆಗಾಗಿ ನಿವೇಶನ ಪಡೆಯಲು ಟ್ರಸ್ಟ್‌ಗೆ ಪೂರ್ಣ ಅರ್ಹತೆ ಇದೆ. ಆದರೆ, ದುರುದ್ದೇಶಿತ, ಆಧಾರ ರಹಿತ ಹಾಗೂ ರಾಜಕೀಯ ಪ್ರೇರಿತವಾದ ಆರೋಪ ಗಳನ್ನು ಎದುರಿಸಿ ಶಿಕ್ಷಣ ಸಂಸ್ಥೆ ಕಾರ್ಯನಿರ್ವಹಿಸಲು ಸಾಧ್ಯವಾಗದು ಎಂದು ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

ಫೆಬ್ರವರಿ 12, 2024ರಲ್ಲಿ ಟ್ರಸ್ಟ್ ಜಮೀನಿಗಾಗಿ ಕೆಐಎಡಿಬಿಗೆ ಅರ್ಜಿ ಸಲ್ಲಿಸಿತ್ತು. ತಿಂಗಳ ನಂತರ ಜಮೀನು ಮಂಜೂರು ಮಾಡಲಾಗಿತ್ತು.

# ಮುಂಬೈನಲ್ಲಿ ಹಳಿ ತಪ್ಪಿದ ರೈಲು

ಮುಂಬೈ, ಅ. 13 - ಮುಂಬೈ ಸೆಂಟ್ರಲ್‌ನಲ್ಲಿ ಖಾಲಿ ಸ್ಥಳೀಯ ರೈಲು ಕಾರ್ ಶೆಡ್ ಪ್ರವೇಶಿಸುವಾಗ ಅದರ ಎರಡು ಬೋಗಿಗಳು ಹಳಿ ತಪ್ಪಿವೆ. ಇದರಿಂದಾಗಿ ನಗರ ರೈಲ್ವೆ ಸಂಚಾರಕ್ಕೆ ಅಡ್ಡಿಯಾಗಿತ್ತು. ಕಳೆದ ಎರಡು ದಶಕಗಳಲ್ಲಿ ಈ ರೀತಿಯ ಮೂರು ಘಟನೆಗಳು ನಡೆದಿವೆ ಎಂದು ಮೂಲಗಳು ತಿಳಿಸಿವೆ. ಬೋಗಿಗಳು ಖಾಲಿ ಇದ್ದ ಕಾರಣ ಯಾವುದೇ ಸಾವು - ನೋವುಗಳು ಸಂಭವಿಸಿಲ್ಲ.

# ಕೈ ಸರ್ಕಾರದಿಂದ ಗಲಭೆಕೋರರಿಗೆ ರಕ್ಷಣೆ

**(1ನೇ ಪುಟದಿಂದ)** ಚಂದ್ರಶೇಖರ್ ಅವರು ದಾಖಲಿಸಿರುವ ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ನನ್ನ ವಿರುದ್ಧ ದಾಖಲಿಸಿರುವ ದೂರಿಗೆ ನ್ಯಾಯಾಲಯದಲ್ಲಿ ವಕೀಲರ ಮೂಲಕ ಉತ್ತರ ಕೊಡುತ್ತೇನೆ ಎಂದರು.

ನಾನು ಅಧಿಕಾರ ದುರುಪಯೋಗ ಪಡಿಸಿಕೊಂಡು ಅಧಿಕಾರಿಗಳಿಗೆ ಬೆದರಿಕೆ ಹಾಕಿದ್ದೇನೆ ಎಂದು ದೂರಲಾಗಿದೆ. ನಾನು ನನ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡಿಯೇ ಇಲ್ಲ. ರಾಷ್ಟ್ರಪತಿಗಳ ಪ್ರತಿನಿಧಿಯಾದ ರಾಜ್ಯಪಾಲರ ಕಚೇರಿಯ ತನಿಖೆ ಮಾಡುವ ಹಾಗೂ ಆ ಮಾಹಿತಿಯನ್ನು ಪತ್ರಿಕೆಗಳಿಗೆ ಸೋರಿಕೆ ಮಾಡಿರುವುದರ ಬಗ್ಗೆ ಮಾತನಾಡಿದ್ದೇನೆ ಎಂದು ಸಿದ್ದರಾಮಯ್ಯ ಹೇಳಿದರು.

ದಾವಣಗೆರೆಯಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವ ಕುರಿತ ಮತ್ತೊಂದು ಪ್ರಶ್ನೆಗೆ ಉತ್ತರಿಸಿದ ಕುಮಾರಸ್ವಾಮಿ, ನನ್ನ ಇಲಾಖೆಗಳ ಪರಿಮಿತಿಯಲ್ಲಿ ರಾಜ್ಯಕ್ಕೆ ಕಾರ್ಖಾನೆಗಳನ್ನು ತರುವ ಪ್ರಯತ್ನ ಮಾಡುತ್ತೇನೆ ಎಂದರು.

ತಮ್ಮ ವಿರುದ್ಧ ಶಾಸಕ ಹೆಚ್.ಸಿ. ಬಾಲಕೃಷ್ಣ ಮಾಡಿರುವ ಲಂಚ ಆರೋಪಕ್ಕೆ ತಿರುಗೇಟು ನೀಡಿದ ಕುಮಾರಸ್ವಾಮಿ, ಬಾಲಕೃಷ್ಣ ಹಿನ್ನೆಲೆ ಬಗ್ಗೆ ತಿಳಿದಿದೆ. ಅವರು ಕೆಲಸ ಮಾಡದೇ 600 ಕೋಟಿ ರೂ. ಬಿಲ್ ಮಾಡಿದ್ದಾರೆ ಎಂದು ಕಾಂಗ್ರೆಸ್ ನಾಯಕರೇ ಆರೋಪಿಸಿದ್ದರು. ಈ ಬಗ್ಗೆ ಸದನ ಸಮಿತಿ ರಚಿಸಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದರು. ಈಗ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನೇ ಜೊತೆಗಿಟ್ಟುಕೊಂಡಿದ್ದಾರೆ ಎಂದರು.

ನಾನು ಏನಾದರೂ ಭ್ರಷ್ಟಾಚಾರ ನಡೆಸಿದ್ದರೆ, ಸರ್ಕಾರ ಅವರದ್ದೇ ಇದೆ. ಅವರೇ ತನಿಖೆ ಮಾಡಿಸಲಿ. ಬಾಯಿ ಚಪಲಕ್ಕೆ ಆಡುವ ಮಾತುಗಳಿಗೆ ಉತ್ತರಿಸುವುದಿಲ್ಲ ಎಂದರು.

## ಕಲ್ಯಾಣ ಕರ್ನಾಟಕಕ್ಕೆ ಅನುದಾನ ಕೊಡುತ್ತಿಲ್ಲವೇ ?

### ತೆರಿಗೆ ಹಂಚಿಕೆ ಬಗ್ಗೆ ಕಾಂಗ್ರೆಸ್‌ಗೆ ತಿರುಗೇಟು

ತೆರಿಗೆ ಹಂಚಿಕೆ ಬಗ್ಗೆ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಮಾಡಿರುವ ಟೀಕೆಗಳನ್ನು ತಳ್ಳಿ ಹಾಕಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಹಣಕಾಸು ಆಯೋಗದ ಶಿಫಾರಸ್ಸಿನಂತೆ ತೆರಿಗೆ ಹಂಚಿಕೆಯಾಗುತ್ತಿದೆ ಎಂದಿದ್ದಾರೆ.

ಸ್ವಾತಂತ್ರ್ಯ ದೊರೆತ ಸಮಯದಿಂದ ಇಲ್ಲಿಯವರೆಗೂ ಹಣಕಾಸು ಆಯೋಗದ ಸೂತ್ರದ ಅನ್ವಯ ತೆರಿಗೆ ಹಂಚಿಕೆಯಾಗುತ್ತಿದೆ. ಈ ಬಗ್ಗೆ ಕೇಂದ್ರ ಸರ್ಕಾರ ನಿರ್ಧರಿಸುವುದಿಲ್ಲ ಎಂದರು.

ರಾಜ್ಯ ಸರ್ಕಾರ ಸಹ ಕಲ್ಯಾಣ ಕರ್ನಾಟಕಕ್ಕೆ ಹೆಚ್ಚಿನ ಒತ್ತು ಕೊಡುವುದಾಗಿ ಹಾಗೂ ಆರ್ಥಿಕ ನೆರವು ನೀಡುವುದಾಗಿ ಹೇಳುತ್ತಿಲ್ಲವೇ? ಎಂದು ಹೇಳುವ ಮೂಲಕ ಕುಮಾರಸ್ವಾಮಿ ಅವರು, ಹಿಂದುಳಿದ ರಾಜ್ಯಗಳಿಗೆ ಹೆಚ್ಚಿನ ತೆರಿಗೆ ಹಣ ನೀಡುವುದನ್ನು ಸಮರ್ಥಿಸಿಕೊಂಡರು.

# ಮೊಕದ್ದಮೆಗಳು ವಾಪಸ್

**(1ನೇ ಪುಟದಿಂದ)** ಎಲ್ಲ ಸರ್ಕಾರದಲ್ಲೂ ಅಸ್ತಿತ್ವದಲ್ಲಿರುತ್ತದೆ. ಹಳೇಹುಬ್ಬಳ್ಳಿ ಗಲಭೆ ಪ್ರಕರಣವನ್ನು ಪರಿಶೀಲಿಸಿದ ಸಮಿತಿ, ಅದು ಸುಳ್ಳು ಪ್ರಕರಣ ಎಂದು ತಿಳಿಸಿತ್ತು.

ಬಿಜೆಪಿ ಆಡಳಿತವಿದ್ದಾಗಲೂ ಅನೇಕ ಅಪರೂಪದ ಪ್ರಕರಣಗಳನ್ನು ಹಿಂಪಡೆದಿತ್ತು. ಈ ಹಿಂದೆ ಬಿಜೆಪಿ ಸರ್ಕಾರದ ವೇಳೆ ಆರ್‌ಎಸ್‌ಎಸ್ ಕಾರ್ಯಕರ್ತರ ಮೇಲಿದ್ದ ಪ್ರಕರಣ ಗಳನ್ನು ವಾಪಸ್ ಪಡೆದಿತ್ತು ಎಂದು ಸಿದ್ದರಾಮಯ್ಯ ಹೇಳಿದರು. ಆದರೆ, ಅದಕ್ಕೆ ಕೋರ್ಟ್ ಅನುಮತಿ ಅಗತ್ಯವಾಗಿದೆ. ಕೋರ್ಟ್ ಅನುಮತಿ ನೀಡಿದರೆ ಮಾತ್ರ ಪ್ರಕರಣ ಹಿಂಪಡೆಯಲು ಆಗುತ್ತದೆ. ಇಲ್ಲದಿದ್ದರೆ ಸಾಧ್ಯವಿಲ್ಲ ಎಂದೂ ಮುಖ್ಯಮಂತ್ರಿ ಹೇಳಿದರು.

ಪ್ರಕರಣ ವಾಪಸ್ ಪಡೆದಿರುವುದರ ವಿರುದ್ಧ ಬಿಜೆಪಿ ಪ್ರತಿಭಟನೆ ನಡೆಸಿದ್ದಕ್ಕೆ ಲೇವಡಿ ಮಾಡಿದ ಸಿದ್ದರಾಮಯ್ಯ, ಸುಳ್ಳು ವಿಷಯಗಳ ಮೇಲೆ ಹಾಗೂ ನಿರಾಧಾರ ಆರೋಪದ ಮೇಲೆಯೇ ಬಿಜೆಪಿ ಯಾವಾಗಲೂ ಪ್ರತಿಭಟನೆ ಮಾಡುತ್ತದೆ ಎಂದರು.

ರಾಜ್ಯ ಸರ್ಕಾರ ಹಳೆ ಹುಬ್ಬಳ್ಳಿ ಗಲಭೆ ಕೇಸ್ ಹಿಂಪಡೆದ ವಿಚಾರವಾಗಿ ಬಿಜೆಪಿ ಆಕ್ರೋಶ ವ್ಯಕ್ತಪಡಿಸಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರಿಗೆ ಬಿಜೆಪಿ ಕಾರ್ಯಕರ್ತರು ಕಪ್ಪು ಬಟ್ಟೆ ಪ್ರದರ್ಶಿಸಿದರು. ಹುಬ್ಬಳ್ಳಿಯ ಗೋಕುಲ್ ರಸ್ತೆಯಲ್ಲಿ ಕಪ್ಪು ಬಟ್ಟೆ ಪ್ರದರ್ಶಿಸಿದ ಬಿಜೆಪಿ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

# ಗಾಂಜಾ ಮಾರಾಟಗಾರರ ಬಂಧನ

ದಾವಣಗೆರೆ, ಅ.13- ಬಾಡಾ ಕ್ರಾಸ್ ಬಳಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದವರ ಮೇಲೆ ಪೊಲೀಸರು ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಕಳೆದ ವಾರ ವಶಕ್ಕೆ ಪಡೆದಿದ್ದಾರೆ. ವಿನಯ್ ಕುಲಕರ್ಣಿ, ವಿಶ್ವನಾಥ ಬಂಧಿತರಾಗಿದ್ದು, ಆರೋಪಿಗಳಿಂದ 1 ಲಕ್ಷ ರೂ. ಮೌಲ್ಯದ 1 ಕೆ.ಜಿ ಗಾಂಜಾವನ್ನು ಪಂಚರ ಸಮಕ್ಷಮ ವಶಪಡಿಸಿಕೊಳ್ಳಲಾಗಿದೆ.

# ಬಡವರಿಗೆ ನೆರವಾಗುವ ಸಹಕಾರಿ ಬ್ಯಾಂಕ್

**(1ನೇ ಪುಟದಿಂದ)** ಇದ್ದು, ಸುಸ್ಥಿತಿಯಲ್ಲಿದೆ ಎಂದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ದಾವಣಗೆರೆ ಜಿಲ್ಲೆಯು ಸಹಕಾರ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದೆ. ಮಧ್ಯ ಕರ್ನಾಟಕದಲ್ಲಿ ಸಹಕಾರಿ ಬ್ಯಾಂಕುಗಳು ಇನ್ನಷ್ಟು ಬೆಳೆಯಬೇಕಿದೆ ಎಂದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಠೇವಣಿದಾರರು ಹಾಗೂ ಸಾಲ ಪಡೆಯುವವರು ಬ್ಯಾಂಕ್ ಬೆಳವಣಿಗೆಗೆ ಸಹಕಾರಿಯಾಗಿದ್ದಾರೆ. ಸಮಯಕ್ಕೆ ಸರಿಯಾಗಿ ಪ್ರಾಮಾಣಿಕವಾಗಿ ತೆರಿಗೆ ಮರು ಪಾವತಿ ಮಾಡುವ ಸಾಲಗಾರರೇ ಬ್ಯಾಂಕ್ ಅನ್ನು ಹೆಚ್ಚಾಗಿ ಬೆಳೆಸುತ್ತಾರೆ. ಅವರಿಗೇ ಹೆಚ್ಚು ಗೌರವ ಸಲ್ಲಬೇಕು ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ದಾವಣಗೆರೆ - ಹರಿಹರ ಅರ್ಬನ್ ಸಹಕಾರ ಬ್ಯಾಂಕ್‌ನಲ್ಲಿ ಈಗ 11 ಸಾವಿರಕ್ಕೂ ಹೆಚ್ಚು ಸದಸ್ಯರಿದ್ದಾರೆ. ಡಿಜಿಟಲ್ ವಹಿವಾಟಿನಲ್ಲೂ ಬ್ಯಾಂಕ್ ಮುಂಚೂಣಿಯಲ್ಲಿದೆ ಎಂದು ತಿಳಿಸಿದರು.

ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಉಜ್ಜಯಿನಿ ಪೀಠದ ಜಗದ್ಗುರು ಶ್ರೀ ಸಿದ್ದಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಸಂಘಟನೆಯಿಂದ ಎಲ್ಲರಿಗೂ ಶಕ್ತಿ ದೊರೆಯುತ್ತದೆ. ಬಿಡಿ ಬಿಡಿಯಾಗಿದ್ದರೆ ದುರ್ಬಲರಾಗುತ್ತೇವೆ. ಒಗ್ಗಟ್ಟಿನಿಂದ ಹಾಗೂ ಸಮಸ್ತ ಸಮಾಜದ ಹಿತದೃಷ್ಟಿಯಿಂದ ಸಹಕಾರ ವಲಯ ಕಾರ್ಯನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಇದೇ ಸಂದರ್ಭದಲ್ಲಿ ನಗರದ ಶ್ರೀ ಗುರು ಪಂಚಾಕ್ಷರಿ ಗವಾಯಿ ಅಂಧ ಮಕ್ಕಳ ಶಿಕ್ಷಣ ಸಂಸ್ಥೆ, ಆನಂದ ಧಾಮ ಹಾಗೂ ಸಿಕ್ಪಾರ್ ಶ್ರವಣ ವಿಮೋಚನಾ ಕೇಂದ್ರಗಳಿಗೆ ಸಹಕಾರ ಬ್ಯಾಂಕ್ ವತಿಯಿಂದ ತಲಾ 5 ಲಕ್ಷ ರೂ.ಗಳ ನೆರವು ನೀಡಲಾಯಿತು.

ಪರಿಷತ್ ಸದಸ್ಯ ಕೆ.ಎಸ್.ನವೀನ್, ಶಾಸಕರಾದ ನೇಮಿರಾಜ ನಾಯ್ಕ, ಸುರೇಶ್ ಬಾಬು, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಅಲ್ಲೋಡ್ ಹನುಮಂತಪ್ಪ, ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ, ಹಿರಿಯ ಕೈಗಾರಿಕೋದ್ಯಮಿ ಡಾ.ಅಥಣಿ ಎಸ್. ವೀರಣ್ಣ, ಹೊನ್ನಮುಕುಟ ಸ್ಮರಣ ಸಂಚಿಕೆಯ ಪ್ರಧಾನ ಸಂಪಾದಕ ಬಾ.ಮ. ಬಸವರಾಜಯ್ಯ, ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಉಪಾಧ್ಯಕ್ಷೆ ಜಯಮ್ಮ ಪರಶುರಾಮಪ್ಪ, ಆಡಳಿತ ಮಂಡಳಿ ಸದಸ್ಯರು ಮತ್ತಿತರರು ವೇದಿಕೆ ಮೇಲೆ ಉಪಸ್ಥಿತರಿದ್ದರು.

ಸಂಗೀತ ರಾಘವೇಂದ್ರ ಪ್ರಾರ್ಥಿಸಿದರೆ, ಹೆಚ್.ಬಿ. ಮಂಜುನಾಥ್ ನಿರೂಪಿಸಿದರು.

## ದಿವ್ಯಾಂಗ ಮಹಿಳೆಯನ್ನು ಕೆಲಸದಿಂದ ಕಿತ್ತು ಹಾಕಿರುವುದು ಅಮಾನವೀಯ

2018ರಲ್ಲಿ ನಾನು ಎರಡನೇ ಬಾರಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ದಾವಣಗೆರೆಯ ದಿವ್ಯಾಂಗ ಮಹಿಳೆಯೊಬ್ಬರಿಗೆ ದಾವಣಗೆರೆಯಲ್ಲೇ ಸರ್ಕಾರದಲ್ಲಿ ಉದ್ಯೋಗ ಕೊಡಿಸಿದ್ದೆ. ಆದರೆ, ಈಗ ಆ ಮಹಿಳೆಯನ್ನು ಉದ್ಯೋಗದಿಂದ ತೆಗೆದು ಹಾಕುವ ಅಮಾನವೀಯ ವರ್ತನೆ ತೋರಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದ್ದಾರೆ.

ಆ ಮಹಿಳೆ ಅಪಘಾತದಲ್ಲಿ ಬಲಗೈ ಕಳೆದುಕೊಂಡಿದ್ದರು. ಉದ್ಯೋಗದಿಂದಾಗಿ ಆರು ವರ್ಷಗಳಿಂದ ಅವರು ನೆಮ್ಮದಿಯಾಗಿದ್ದರು. ತಿಂಗಳ ಹಿಂದೆ ಅವರನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ಆ ಮಹಿಳೆ ಏನು ಅನ್ಯಾಯ ಮಾಡಿದ್ದಾರೆ? ಸಮಾಜದಲ್ಲಿ ಇಂತಹ ಅಮಾನವೀಯ ವರ್ತನೆ ಕಂಡುಬರುತ್ತಿದೆ ಎಂದು ಹೇಳಿದರು.

# ಆಯುಷ್ಮಾನ್‌ಗೆ ಇನ್ನಷ್ಟು ಚಿಕಿತ್ಸಾ ಪ್ಯಾಕೇಜ್

**(1ನೇ ಪುಟದಿಂದ)** ಬಿಡುಗಡೆಯಾದ ನಂತರ 15 ದಿನಗಳವರೆಗೆ ಔಷಧಿ, ಆಹಾರ, ವಸತಿ ಹಾಗೂ ದಾಖಲಾಗುವ ಮೂರು ದಿನಗಳ ಮುಂಚೆ ನಡೆಸಲಾಗುವ ವೈದ್ಯಕೀಯ ತಪಾಸಣೆ ಇತ್ಯಾದಿ ವೆಚ್ಚಗಳನ್ನು ಭರಿಸಲಾಗುತ್ತಿದೆ.

ಸೆಪ್ಟೆಂಬರ್ 1ರವರೆಗೆ 29,648 ಆಸ್ಪತ್ರೆಗಳು ಆಯುಷ್ಮಾನ್ ಭಾರತ್ ಯೋಜನೆಗೆ ಒಳಪಟ್ಟಿವೆ. ಇವುಗಳಲ್ಲಿ 12,696 ಖಾಸಗಿ ಆಸ್ಪತ್ರೆಗಳಾಗಿವೆ.

70 ವರ್ಷ ಮೀರಿದವರು ಆಧಾರ್ ಕಾರ್ಡ್ ಮೂಲಕ ಆಯುಷ್ಮಾನ್ ಭಾರತ್ ಯೋಜನೆಗೆ ನೋಂದಣಿ ಮಾಡಿಸಿಕೊಳ್ಳಬಹುದಾಗಿದೆ. ಆಯುಷ್ಮಾನ್ ಭಾರತ್ ಆಪ್ ಇಲ್ಲವೇ ಪಿಎಂಜೆಎವೈ ಪೋರ್ಟಲ್ ಮೂಲಕ ಯೋಜನೆಗೆ ದಾಖಲಾಗಬಹುದು ಎಂದು ಮೂಲಗಳು ತಿಳಿಸಿವೆ.

ಈಗಾಗಲೇ ಯೋಜನೆಯಲ್ಲಿರುವ 70 ವರ್ಷ ಮೀರಿದವರೂ ಸಹ ಹೊಸ ಕಾರ್ಡ್‌ಗಾಗಿ ಅರ್ಜಿ ದಾಖಲಿಸಬೇಕು ಹಾಗೂ ಮತ್ತೊಮ್ಮೆ ಇಕೆವೈಸಿ ಪೂರ್ಣಗೊಳಿಸಬೇಕು ಎಂದು ಮೂಲಗಳು ಹೇಳಿವೆ.

70 ವರ್ಷ ಮೀರಿದವರಿಗೆ ಹೆಚ್ಚುವರಿಯಾಗಿ 5 ಲಕ್ಷ ರೂ.ಗಳ ಆರೋಗ್ಯ ವಿಮೆ ನೀಡಲಾಗುವುದು. ಖಾಸಗಿ ವಿಮಾ ಪಾಲಿಸಿ ಹೊಂದಿರುವವರು ಇಲ್ಲವೇ ಇಎಸ್‌ಐ ಯೋಜನೆಯಲ್ಲಿರುವವರೂ ಸಹ ಆಯುಷ್ಮಾನ್ ಭಾರತ್ ಯೋಜನೆಗೆ ಸೇರ್ಪಡೆಯಾಗಬಹುದು ಎಂದು ಅಧಿಕಾರಿಗಳು ಈ ಹಿಂದೆ ತಿಳಿಸಿದ್ದರು.

**ಸೈಟುಗಳು ಮಾರಾಟಕ್ಕಿವೆ**
1) ಬನಶಂಕರಿ ಲೇಔಟ್‌ನಲ್ಲಿ 30x38 West, 40 ಅಡಿ ರೋಡಿಗಿದೆ. Rate - 4000/-
2) ಡಾಲರ್ಸ್‌ಕಾಲೋನಿಯಿಂದ ಸ್ವಲ್ಪ ಮೇಲೆ 30x50 North. Rate - 3600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆ ಬಾಡಿಗೆಗಿದೆ**
ದಾವಣಗೆರೆ ಎಸ್.ಎ. ರವೀಂದ್ರನಾಥ್ ನಗರ (ನಂ. 604/334) ಚೌಡೇಶ್ವರಿ ದೇವಸ್ಥಾನದ ಹತ್ತಿರ, ಶ್ರೀ ಲಕ್ಷ್ಮಿ ವೆಂಕಟೇಶ್ವರ ಸದನದಲ್ಲಿ 2 BHK ಮತ್ತು 1 BHK ಮನೆಗಳು ಬಾಡಿಗೆಗೆ ಇವೆ.
99645 99375

**ಸೈಟು ಮಾರಾಟಕ್ಕೆ ಇದೆ**
ಡಾಲರ್ಸ್ ಕಾಲೋನಿ 30x60 ಪೂರ್ವಕ್ಕೆ (ಸೆಮಿ ಕಮರ್ಷಿಯಲ್) 30x30 ದಕ್ಷಿಣ ಸೈಟು ಮಾರಾಟಕ್ಕಿದೆ.
ಸುರೇಶ್ 95911 60520

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 40x70 ಪೂರ್ವ, ಜೈನ್ ಸ್ಕೂಲ್ ಹಿಂಭಾಗದಲ್ಲಿ 30x55 ಪಶ್ಚಿಮ, 30x40 ಪಶ್ಚಿಮ ಅಕ್ಕ-ಪಕ್ಕ, 35x50 ಉತ್ತರ-ಪಶ್ಚಿಮ ಕಾರ್ನರ್, 40x70 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
ನೂತನವಾಗಿ ನಿರ್ಮಿಸಿರುವ ಮೊದಲನೇ ಮಹಡಿ 1 BHK ಮನೆ ಬಾಡಿಗೆಗೆ ಇದೆ. ಜೆ.ಹೆಚ್ ಪಟೇಲ್ ಬಡಾವಣೆ, ಇ ಬ್ಲಾಕ್ 3ನೇ ಮೇನ್, 2ನೇ ಕ್ರಾಸ್, ದಾವಣಗೆರೆ.
70199 24038, 81478 38023

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಬೆಳಿಗ್ಗೆ 11ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
99726 52844

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 50x80 North, 40x60 North, 120 ಅಡಿ ರೋಡಿಗಿದೆ. 50x80 East, 40x60 East, 40x60, 40x60 South ಅಕ್ಕ-ಪಕ್ಕ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**HOUSES FOR RENT**
2 BHK, 3BHK Anjaneya Layout, Vidyanagara, Siddeshwara Layout, SS Layout, A & B Block.
Dakshith Iyanahalli
96061 26471

**ಮನೆ ಮಾರಾಟಕ್ಕಿದೆ**
ದಾವಣಗೆರೆ ನಗರದ ಸರಸ್ವತಿ ನಗರದಲ್ಲಿ 30x45ರ ಅಳತೆಯ ಪಶ್ಚಿಮಾಭಿಮುಖವಾಗಿ ಕಟ್ಟಿರುವ 3BHKಯ ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ. (ಮಧ್ಯವರ್ತಿಗಳಿಗೆ ಅವಕಾಶವಿರುವುದಿಲ್ಲ)
99454 92913

**ಸೈಟುಗಳು ಮಾರಾಟಕ್ಕಿವೆ**
ಹದಡಿ ರಸ್ತೆ, ಶಿರಮಗೊಂಡನಹಳ್ಳಿ ಸುತ್ತ-ಮುತ್ತ 30x50 ಪಶ್ಚಿಮ ಅಕ್ಕ-ಪಕ್ಕ, 30x46 ಪೂರ್ವ ಅಕ್ಕ-ಪಕ್ಕ, 30x50 ಪೂರ್ವ, 30x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಬಾಡಿಗೆಗೆ ಇದೆ**
ಪೂರ್ವ ದಿಕ್ಕಿನ 2 ಬೆಡ್ ರೂಮ್‌ವುಳ್ಳ ಗ್ರೌಂಡ್ ಫ್ಲೋರ್ ಮನೆ # 3629/1, 5th Cross, 8th main, MCC 'B' Block Behind Heart Hospital, Davanagere - 577004
63624 97833, 98440 98899

**FOR RENT**
1) 2BHK houese in 30x50 with Corporation / Bore well water.
2) First Floor, A room with Attrached Bath room well furnished Near vidyanagar, 1st Bus stop, Davanagere.
Contact : 63615 93954
Veg Only

**ಬೇಕಾಗಿದ್ದಾರೆ**
PUC ಆದ ಮಹಿಳೆಯರು ಸ್ಟಾಕ್ ತೆಗೆಯಲು, ಹೋಲ್‌ಸೇಲ್ ಫಾರ್ಮಾದಲ್ಲಿ ಬಿಲ್ಲಿಂಗ್ ಮಾಡಿರುವ ಅನುಭವವುಳ್ಳ ಮಹಿಳೆಯರು ಬೇಕಾಗಿದ್ದಾರೆ. ಭೇಟಿಯ ಸಮಯ ಸಂಜೆ 6.30ರ ನಂತರ
ಶ್ರೀ ಗುರು ಎಂಟರ್‌ಪ್ರೈಸಸ್
#579, 6ನೇ ಮುಖ್ಯರಸ್ತೆ, ಪಿಜೆ ಬಡಾವಣೆ, ದಾವಣಗೆರೆ.

**ಮನೆ ಮತ್ತು ರೂಮ್ ಬಾಡಿಗೆಗಿದೆ**
2BHK - 1st Floor, ವೀಣಾ ಕ್ಲಿನಿಕ್ ರೋಡ್, ಹೊಸ ಬಸ್‌ಸ್ಟ್ಯಾಂಡ್ ಹಿಂಭಾಗ. 2ನೇ ಕ್ರಾಸ್. (ವೆಜಿಟೇರಿಯನ್ ಮಾತ್ರ)
81059 11293

**ಮಾರಾಟಕ್ಕೆ ಇವೆ**
ಫರ್ನೀಚರ್‌ಗೆ ಬೇಕಾಗುವ Teak Wood ಮತ್ತು Rose wood ಮತ್ತು J wood ಮತ್ತು Steel Furniture Study desk ತೂಕದಂತೆ ಮಾರಾಟಕ್ಕೆ ಇವೆ. PB Road, Davanagere.
97432 20175

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. ಬಿ ಬ್ಲಾಕ್ ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವ ಮುಖವಾಗಿ 47x60 ಅಡಿ ಅಳತೆ ಇದ್ದು, ಸೊತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ. ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ.
Mohan Real Estate Agencies
97424 34049

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ಕೆಲಸ ಮಾಡಲು ಅನುಭವವುಳ್ಳ (Nurse) ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : ಸಿ.ಜಿ. ಆಸ್ಪತ್ರೆ ಹಿಂಭಾಗ, ಪೆವಿಲಿಯನ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.
98450 35710, 77607 39990

**ಫ್ಲಾಟ್ ಲೀಸ್‌ಗೆ ಇದೆ**
ವಿದ್ಯಾನಗರ ಕಲ್ಲೇಶ್ವರ ಅಪಾರ್ಟ್‌ಮೆಂಟ್‌ನಲ್ಲಿ 2BHK ಫ್ಲಾಟ್ ಲೀಸ್‌ಗೆ ಇವೆ. ಸಂಪರ್ಕಿಸಿ
99807 28533

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ.
98442-94446

**ಸೈಟುಗಳು ಮಾರಾಟಕ್ಕಿವೆ**
ಹೈಟೆಕ್ ಹಾಸ್ಪಿಟಲ್ ಹಿಂಭಾಗ ಪಾಮೇನಹಳ್ಳಿ ಹತ್ತಿರ ಫೈನಲ್ ಅಪ್ರೂವ್ಡ್ ಸೈಟುಗಳು ಮಾರಾಟಕ್ಕಿವೆ. 20x45 ಪೂರ್ವ, ದರ 2,250/-, 20x45 ಪೂರ್ವ, ದರ 2,250/-, 20x30 ಪೂರ್ವ, ದರ 2,150/-, 40x45 ಪೂರ್ವ-ಉತ್ತರ ಕಾರ್ನರ್ ಸೈಟು. ದರ 2,250/- ಬ್ಯಾಂಕ್ ಲೋನ್ ಆಗುತ್ತದೆ.
ಮೊ : 9740258276

**ಸೈಟುಗಳು ಮಾರಾಟಕ್ಕಿವೆ**
ಹರಿಹರದಲ್ಲಿ ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯಿತಿಯಲ್ಲಿ ಮಾರಾಟಕ್ಕಿವೆ. 30x40, 30x50, 40x60
93431 10009

**ಕೆಲಸಕ್ಕೆ ಬೇಕಾಗಿದ್ದಾರೆ**
ಟಿವಿ ಅಂಗಡಿಗೆ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ದಾವಣಗೆರೆ.
84535 30199

**ಉತ್ತಮ ಅಡಿಕೆ ಸಸಿಗಳು ಮಾರಾಟಕ್ಕಿವೆ**
ನಮ್ಮಲ್ಲಿ ಉತ್ತಮವಾದ ಅಡಿಕೆ ಸಸಿಗಳು ಮಾರಾಟಕ್ಕಿವೆ. 2 ಕೆ.ಜಿ. ಚೀಲಗಳು ರೂ. 25/-
ಸ್ಥಳ : ದೊಡ್ಡಬಾತಿ
90088 00080

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಸೈಟುಗಳು ಮಾರಾಟಕ್ಕಿವೆ**
ದಾವಣಗೆರೆ ಸಿಟಿಯಲ್ಲಿ ಪಿ.ಬಿ. ರಸ್ತೆಗೆ ಹತ್ತಿರವಾಗಿ Small Scale Industry ಅಥವಾ ಕಮರ್ಷಿಯಲ್ ಮಾಡಿಕೊಳ್ಳಬಹುದಾದ ಸೈಟುಗಳು ಮಾರಾಟಕ್ಕಿವೆ. ಸಂಪರ್ಕಿಸಿ :
97424 34049

ರಕ್ತ ದಾನ ಶ್ರೇಷ್ಠ ದಾನ

**DUPLEX HOUSE FOR RENT**
40 × 60 fully furnished 5 BHK Duplex house, 4 attached washroom including Corporation water & Borewell water.
Vidyanagar last city bus stop, Davangere
8951938228, 8050222181

**TUITIONS**
ಗುರುದತ್ತ ಬಿ. ನಾಡಿಗೇರ್
PUC I / PUC II / Longterm / PCMB NEET / IIT - JEE / KCET / CLAT - Printed Notes + Study Materials
97398 65711, 94822 44114

**TUITIONS**
ಗುರುದತ್ತ ಬಿ. ನಾಡಿಗೇರ್
Class 6 ಇಂದ Class 10 CBSE / ICSE Boards, NEET / IIT - JEE / Olympiads Memory Techniques + Hand Writing
97398 65711, 94822 44114

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀ ಮಾತಾ ವಿದ್ಯಾಸಂಸ್ಥೆ (ರಿ.). ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ B.A., B.Ed., ಅಥವಾ B.A./B.Sc.,/B.Com ತರಬೇತಿ ಹೊಂದಿದ ಶಿಕ್ಷಕ/ಕಿಯರು ಹಿರಿಯ ಪ್ರಾಥಮಿಕ ತರಗತಿಗಳಿಗೆ ಬೋಧಿಸಲು ಬೇಕಾಗಿದ್ದಾರೆ.
99640 17729

**ಸೈಟುಗಳು ಮಾರಾಟಕ್ಕಿವೆ**
ದೂಡಾ ಅಪ್ರೂವ್ಡ್ ಸೈಟುಗಳು ರಿಯಾಯಿತಿಯಲ್ಲಿ ಮಾರಾಟಕ್ಕಿವೆ. 30x40, 30x50, 40x60
98441 24217
98458 61220

**LEARN PROGRAMMING**
`C' Language, OOP'S with C++
Niyam Computers
PJ Extn. Davanagere
Call for more Info :
90367 19573

**ಬೇಕಾಗಿದ್ದಾರೆ**
ಮದುವೆ ಛತ್ರದಲ್ಲಿ ಕೆಲಸ ಮಾಡಲು ಸೂಪರ್‌ವೈಸರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
ಮೊ : 99012 83135

**NEED COMPUTER OPERATOR**
FOR CYBER SHOP
Near Ram & Co Circle, DVG
70221 58935

**ಕೆಲಸಕ್ಕೆ ಬೇಕಾಗಿದ್ದಾರೆ**
ಮಹಿಳೆಯರಿಗೆ ಮಾತ್ರ
PUC or Degree (Pass / Fail)
ವಯೋಮಿತಿ : 30ರ ಒಳಗೆ.
ವಿಳಾಸ : ಧಾವಿಯಾ ವಿದ್ಯಾನಗರ ಮೇನ್ ರೋಡ್, 4ನೇ ಬಸ್‌ಸ್ಟಾಪ್ ಹತ್ತಿರ, ದಾವಣಗೆರೆ.
63611 50414

**ಶ್ರೀ ಸಾಯಿ ಫೈನಾನ್ಸ್ (ರಿ)**
ಫುಲ್ ಟೈಂ / ಪಾರ್ಟ್ ಟೈಂ ಕೆಲಸಕ್ಕೆ ಬೇಕಾಗಿದ್ದಾರೆ.
ಶಿವಪ್ಪಯ್ಯ ಸರ್ಕಲ್, ದಾವಣಗೆರೆ.
ಆಸಕ್ತಿಯುಳ್ಳವರು ಸಂಪರ್ಕಿಸಿ.
96860 22969

**WANTED**
Banking Sector Tele Caller (Female Only)
Qualification : Any Degree
90715 55081
Interview Time : 11AM

**ಶಾಕಿರ ಬ್ಯೂಟಿ ಪಾರ್ಲರ್**
10th main, PJ Extn, Davanagere, ಮನೆ ಕೆಲಸ ಮತ್ತು ಕ್ಲಿನಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ.
93420 19013

**WANTED ACCOUNTANT**
B.Com - 1 Year Experience
KRUSHI TARPAULIN
Hanagawadi industrial area, Harihar
krushiagrotex@gmail.com

## ಡಿಕೆಎಸ್ ಬ್ರಿಗೇಡ್ ಕಚೇರಿ ಉದ್ಘಾಟನೆ



ದಾವಣಗೆರೆ, ಅ.13- ದಾವಣಗೆರೆ - ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರೂ, ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷರೂ, ಮಾಜಿ ನಗರಸಭಾ ಅಧ್ಯಕ್ಷರೂ, ಕ್ರೀಡಾ ಪ್ರೋತ್ಸಾಹಕರೂ ಆದ ದಿನೇಶ್ ಕೆ. ಶೆಟ್ಟಿ ಅವರ ಅಭಿಮಾನಿ ಬಳಗದ ವತಿಯಿಂದ ನೂತನವಾಗಿ ಸ್ಥಾಪಿಸಿರುವ ದಿನೇಶ್ ಕೆ. ಶೆಟ್ಟಿ ಬ್ರಿಗೇಡ್ ಕಚೇರಿ ಇಂದು ಕಾರ್ಯಾರಂಭ ಮಾಡಿತು.

ಕಚೇರಿ ಉದ್ಘಾಟನೆಯನ್ನು ನೆರವೇರಿಸಿದ ದಿನೇಶ್ ಕೆ. ಶೆಟ್ಟಿ, ಜನರ ಸೇವೆ ನಮ್ಮ ಗುರಿ. ಜನಸಾಮಾನ್ಯರ ಕೊರತೆಗಳನ್ನು ನಿವಾರಿಸಲು ಜನರಿಗೆ ಸದಾ ಕಾಲ ಸಿಗುವಂತಾಗಲಿ ಎಂದು ನವ ಯುವಕರು ನನ್ನ ಹೆಸರಲ್ಲಿ ಡಿಕೆಎಸ್ ಬ್ರಿಗೇಡ್ ಎಂದು ಹೊಸ ತಂಡವನ್ನು ಕಟ್ಟಿಕೊಂಡು ನನಗೆ ನನ್ನ ಸಮಾಜ ಸೇವೆಗೆ ಬೆಂಬಲವಾಗಿ ನಿಲ್ಲಲು ಕಚೇರಿ ಉದ್ಘಾಟನೆ ಮಾಡಲಾಗಿದೆ. ಇದನ್ನು ಒಳ್ಳೆಯ ರೀತಿಯಲ್ಲಿ ಬಳಸಿಕೊಳ್ಳುವಂತೆ ಸಲಹೆ ನೀಡಿದರು

ಎಸ್.ಎಲ್. ಆನಂದಪ್ಪ ಮಾತನಾಡಿ, ದಿನೇಶ್ ಕೆ. ಶೆಟ್ಟಿ ಅವರು 40 ವರ್ಷಗಳಿಂದ ಸಮಾಜ ಸೇವೆ ಸಲ್ಲಿಸುತ್ತಿದ್ದು, ಸದಾಕಾಲ ಜನ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದಾರೆ. ದಿನೇಶ್ ಕೆ. ಶೆಟ್ಟಿ ಅವರ ಹೆಸರಿನಲ್ಲಿ ಬ್ರಿಗೇಡ್ ಸ್ಥಾಪಿಸಿ ಇನ್ನು ಹೆಚ್ಚಿನ ಸೇವೆ ಸಲ್ಲಿಸಲು ಮುಂದಾಗಿರುವುದು ಶ್ಲಾಘನೀಯ ಎಂದರು.

ಶ್ರೀಮತಿ ಲತಿಕಾ ಕೆ ಶೆಟ್ಟಿ, ಬ್ರಿಗೇಡ್ ಅಧ್ಯಕ್ಷ ಬಕ್ಕೇಶ್ ಅಜ್ಜಂಪುರಶೆಟ್ರು, ವಿಜಯಕುಮಾರ್ ಜೈನ್, ವೆಂಕಟೇಶ್, ಪ್ರಸನ್ನಕುಮಾರ್, ಪ್ರತಾಪ್ ಕುಮಾರ್, ಯುವರಾಜ್, ಜಾಫರ್, ಸಾಧಿಕ್, ಶ್ರೀಕಾಂತ್ ಬಗರೆ, ರಾಜು ಭಂಡಾರಿ, ಕೇರಂ ಗಣೇಶ್, ಮಧು ಪವಾರ್, ಗೋಪಾಲ್, ಪರಶುರಾಮ್ ಮತ್ತಿತರರು ಭಾಗವಹಿಸಿದ್ದರು.

## ಮಾನವ ಜನ್ಮ ಪಾವನಕ್ಕೆ ಪ್ರವಚನ ಅಗತ್ಯ



**ರಾಣೇಬೆನ್ನೂರು**

ರಾಣೇಬೆನ್ನೂರು, ಅ.13- ಮಾನವ ಜನ್ಮ ಪಾವನವಾಗಬೇಕಾದರೆ ಪುರಾಣ, ಪ್ರವಚನಗಳನ್ನು, ದೇವತೆಗಳ ಚರಿತ್ರೆಗಳನ್ನು ಆಲಿಸಿ ಪರಿಸಬೇಕೆಂದು ಮಾತೆ ಅನ್ನಪೂರ್ಣೇಶ್ವರಿ ಹಲಗೇರಿ ಹೇಳಿದರು.

ತಾಲ್ಲೂಕಿನ ಹಿರೇಬಿದರಿ ಗ್ರಾಮದೇವತೆ ದೇವಸ್ಥಾನದಲ್ಲಿ ವಿಜಯದಶಮಿ ನಿಮಿತ್ಯ ನಡೆದ 9 ದಿನಗಳ ಕಾಲ ಅವರು ದೇವಿಯ ಪುರಾಣ, ಪ್ರವಚನ ಕಾರ್ಯಕ್ರಮ ನಡೆಸಿಕೊಟ್ಟು, ಆಶೀರ್ವಚನ ನೀಡಿದರು.

ಭೀಮಪ್ಪ ಮಾವಿನತೋಪ ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ಶಿವಕುಮಾರ ಮಲ್ಲಾಪುರ ಇವರು ದೇವಸ್ಥಾನಕ್ಕೆ ವಿದ್ಯುತ್ ಚಾಲಿತ ನಾಮಫಲಕವನ್ನು ದೇಣಿಗೆಯಾಗಿ ನೀಡಿದರು.

ಕಾರ್ಯಕ್ರಮದಲ್ಲಿ ನಾಗಪ್ಪ ಕೂನಬೇವು, ವಿರುಪಾಕ್ಷಪ್ಪ ಹರಪನಹಳ್ಳಿ, ಕೆಂಚನಗೌಡ ಪಾಟೀಲ, ಮಂಜುನಾಥ ಕಂಚಿಕೇರಿ, ಪಾಲಾಕ್ಷಗೌಡ ಕೂನಬೇವು, ಸಂತೋಷ ಬಾಸೂರ, ಮಂಜುನಾಥ ಕುಮರಿ ಹಾಗೂ ಗ್ರಾಮದ ಗುರು-ಹಿರಿಯರು ಉಪಸ್ಥಿತರಿದ್ದರು.

## ಟಿ. ದಾಸಕರಿಯಪ್ಪ ನಿವಾಸಕ್ಕೆ ಎಚ್.ಡಿ. ಕುಮಾರಸ್ವಾಮಿ ಭೇಟಿ



ದಾವಣಗೆರೆ, ಅ. 13 - ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲೆಂದು ಇಂದು ನಗರಕ್ಕೆ ಆಗಮಿಸಿದ್ದ ಮಾಜಿ ಮುಖ್ಯಮಂತ್ರಿಯೂ ಆದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಜೆಡಿಎಸ್ ಮಾಜಿ ಜಿಲ್ಲಾಧ್ಯಕ್ಷ ದಿ. ಟಿ. ದಾಸಕರಿಯಪ್ಪ ಅವರ ನಿವಾಸಕ್ಕೆ ಭೇಟಿ ನೀಡಿದ್ದರು. ದಾಸಕರಿಯಪ್ಪ ಅವರು ಪಕ್ಷದಲ್ಲಿ ಸಮಾಜಕ್ಕೆ ಸಲ್ಲಿಸಿದ ಸೇವೆಯನ್ನು ಮೆಲಕು ಹಾಕಿದ ಕುಮಾರಸ್ವಾಮಿ ಅವರು ದಾಸಕರಿಯಪ್ಪ ಅವರ ಪತ್ನಿ ಮತ್ತು ಕುಟುಂಬ ವರ್ಗದವರಿಗೆ ಸಾಂತ್ವನ ಹೇಳಿದರು. ಮಾಜಿ ಶಾಸಕ ಎಚ್.ಎಸ್. ಶಿವಶಂಕರ್, ಜೆಡಿಎಸ್ ಜಿಲ್ಲಾ ಕಾರ್ಯಾಧ್ಯಕ್ಷ ಗಣೇಶ್ ದಾಸಕರಿಯಪ್ಪ ಮತ್ತು ಕುಟುಂಬ ಪರಿವಾರದವರು ಕುಮಾರಸ್ವಾಮಿ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ, ಬೀಳ್ಕೊಟ್ಟರು.

### ಓದುಗರ ಪತ್ರ

## ಬಾ ಗುರು, ಅಪ್ಡೇಟ್ ಆಗು !

**ಮಾನ್ಯರೇ,**

ನಮ್ಮ ದಾವಣಗೆರೆ ಜಿಲ್ಲೆಗೆ ಸಂಬಂಧಿಸಿದಂತೆ ಪ್ರತಿದಿನ ದಾವಣಗೆರೆ ಜಿಲ್ಲಾ ಪೊಲೀಸ್ ಇವರಿಂದ ನಿಖರವಾದ ಮಾಹಿತಿಯನ್ನು ಪಡೆಯುವ ವ್ಯವಸ್ಥೆಯು ಉಚಿತವಾಗಿ ಇದೆ ಎಂಬ ಮಾಹಿತಿಯು ಹೆಚ್ಚಿನ ಜನಗಳಿಗೆ ತಿಳಿದಿರುವುದಿಲ್ಲ. ಇದರ ಸಂಬಂಧಿತವಾಗಿ ಮಾಹಿತಿಯನ್ನು ಪಡೆಯುವ ಬಗೆ ಇಲ್ಲಿದೆ.

ವ್ಯಾಟ್ಸಾಪ್ ಬಳಕೆದಾರರು ತಮ್ಮ ಸ್ಮಾರ್ಟ್ ಮೊಬೈಲ್ ಮೂಲಕ ಅಪ್‌ಡೇಟ್ ಮಾಡಿಕೊಂಡಿರುವ ವ್ಯಾಟ್ಸಾಪ್ ತೆರೆದು Channels ಎಂಬ ವಿಭಾಗವನ್ನು ಹುಡುಕಬೇಕು. ಅಲ್ಲಿ ಕಾಣ ಸಿಗುವ Explore ಎಂಬುದರ ಮೇಲೆ ಒತ್ತಿದಾಗ ಒಂದಿಷ್ಟು ಚಾನೆಲ್ ವಾಹಿನಿಗಳು ಕಾಣಿಸುತ್ತವೆ. ಅಲ್ಲಿ Davanagere District Police ಎಂದು ಬರೆದು ಸರ್ಚ್ ಮಾಡಿ. ಆಗ ದಾವಣಗೆರೆ ಜಿಲ್ಲಾ ಪೊಲೀಸ್ ವಾಹಿನಿಯು ಕಾಣುತ್ತದೆ. Follow ಕೊಟ್ಟರೆ ಆ ವಾಹಿನಿಯಲ್ಲಿ ವಿಚಾರಗಳು ಪ್ರಕಟಗೊಂಡಾಗ ತಮಗೆ ನೋಟಿಫಿಕೇಶನ್ ಲಭ್ಯ ಆಗುತ್ತವೆ.

ಇಲ್ಲಿಯವರೆಗೂ ಕೇವಲ 800+ ಮಂದಿ ಫಾಲೋ ಮಾಡಿರುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಈ ವಾಹಿನಿಯನ್ನು ಫಾಲೋ ಮಾಡಿದ್ದೇ ಆದಲ್ಲಿ ಪೊಲೀಸ್‌ರಿಂದ ಸಿಗುವ ಮುನ್ನೆಚ್ಚರಿಕೆಗಳು, ಅಗತ್ಯವಾದ ಮಾಹಿತಿಗಳು ಸುಲಭವಾಗಿ ಸಾರ್ವಜನಿಕರಿಗೆ ತಲುಪುತ್ತವೆ.

ಸಾರ್ವಜನಿಕರಿಗೆ ತಲುಪಲೆಂದೇ ಈ ವೇದಿಕೆ ಆರಂಭಗೊಂಡಿದ್ದರಿಂದ ದಾವಣಗೆರೆ ಜನತೆಯು ಇದರ ಪ್ರಯೋಜನವನ್ನು ಪಡೆದುಕೊಳ್ಳಬೇಕು. ಉತ್ತಮವಾದ ಈ ಡಿಜಿಟಲ್ ವಾಹಿನಿಯನ್ನು ಅಭಿವೃದ್ಧಿ ಪಡಿಸುತ್ತಿರುವ ದಾವಣಗೆರೆ ಜಿಲ್ಲಾ ಪೊಲೀಸ್ ವಿಭಾಗಕ್ಕೆ ಸಾರ್ವಜನಿಕರ ಪರವಾಗಿ ಅಭಿನಂದನೆಗಳು.

**- ವೈ. ವಾದಿರಾಜ ಭಟ್,** ವಕೀಲರು, ದಾವಣಗೆರೆ.

# ಜಾತ್ಯತೀತವಾಗಿ ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆಯಾಗಲಿ

## ಸದಸ್ಯತ್ವ ನೋಂದಣಿ, ಬೂತ್ ಸಮಿತಿ ರಚನೆ ಅಭಿಯಾನದಲ್ಲಿ ಹೆಚ್.ಡಿ. ಕುಮಾರಸ್ವಾಮಿ




ದಾವಣಗೆರೆ, ಅ.13- ಜಿಲ್ಲೆಯಲ್ಲಿ ಪಕ್ಷದ ಸಂಘಟನೆ ಪ್ರತಿ ಬೂತ್ ಮಟ್ಟದಲ್ಲಿ ಜಾತ್ಯತೀತವಾಗಿ ಆಗಬೇಕು ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ನಗರದ ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಸಮುದಾಯ ಭವನದಲ್ಲಿ ಭಾನುವಾರ ಆಯೋಜಿಸಿದ್ದ ಸದಸ್ಯತ್ವ ನೋಂದಣಿ ಹಾಗೂ ಬೂತ್ ಸಮಿತಿ ರಚನೆ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಘಟಿತ ಮನೋಭಾವನೆ ಹಾಗೂ ಸಕ್ರಿಯವಾಗಿ ಪಕ್ಷದಲ್ಲಿ ಕೆಲಸ ಮಾಡುವ ಯಾವುದೇ ಸಮಾಜದ ಯುವಕರಾಗಲೀ ಅವರಿಗೆ ರಾಜಕೀಯವಾಗಿ ಶಕ್ತಿ ತುಂಬುವ ಕಾರ್ಯವನ್ನು ಪಕ್ಷ ಮಾಡಲಿದೆ. ಹಾಗಾಗಿ ಸದಸ್ಯತ್ವ ನೋಂದಣಿ ಪ್ರಾರಂಭಿಸಿದ್ದೇವೆ ಎಂದು ಹೇಳಿದರು.

ರಾಜ್ಯದ ಅಭಿವೃದ್ಧಿಗೆ ಜಾತಿಯ ಅವಶ್ಯಕತೆ ಇಲ್ಲ. ಪಕ್ಷವೂ ಸಹ ಜಾತಿ ರಾಜಕಾರಣ ಮಾಡಿಲ್ಲ. ಈ ನಿಟ್ಟಿನಲ್ಲಿ ನಾಡಿನ ಎಲ್ಲಾ ಬಡವರಿಗೆ ಒಳಿತಾಗಲು ಜನತಾದಳದ ಅನಿವಾರ್ಯವಿದೆ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯ ಮೊದಲು ಜೆಡಿಎಸ್ ಪಕ್ಷದಲ್ಲಿದ್ದವರು, ಜನತಾದಳದ ಕಾರ್ಯಕರ್ತರೇ ಅವರಿಗೆ ಶಕ್ತಿ ನೀಡಿದ್ದಾರೆ ಮತ್ತು ಅನೇಕ ರಾಜಕೀಯ ನಾಯಕರುಗಳನ್ನು ಪಕ್ಷವು ಬೆಳೆಸಿದೆ. ಹಾಗಾಗಿ ಜನತಾದಳವು ನಾಯಕರನ್ನು ಸೃಷ್ಟಿ ಮಾಡುವ ಪಕ್ಷವೆಂದು ಹೆಸರು ಪಡೆದಿದೆ ಎಂದರು.

ನಾನು ಮುಖ್ಯಮಂತ್ರಿ ಆಗಿದ್ದಾಗ ಬಡವರು ಮತ್ತು ರೈತರು ಸೇರಿದಂತೆ ರಾಜ್ಯದ ಎಲ್ಲಾ ವರ್ಗದವರಿಗೂ ಅನುಕೂಲವಾಗುವ ಸಾಕಷ್ಟು ಯೋಜನೆಗಳನ್ನು ಜಾರಿಗೊಳಿಸುವ ಜತೆಗೆ ಸಾಲ ಮನ್ನಾವನ್ನೂ ಮಾಡಿದ್ದೇನೆ ಎಂದು ಹೇಳಿದರು.

ದಾವಣಗೆರೆ ಜಿಲ್ಲೆ ಸೋಲುವ ಕ್ಷೇತ್ರವೇ ಅಲ್ಲ. ಆದರೆ ಪಕ್ಷದಲ್ಲಿನ ಒಡಕಿನಿಂದ ಸೋಲುವಂತಾಯಿತು ಅಷ್ಟೇ. ನಮ್ಮ ಪಕ್ಷದ ಕಾರ್ಯಕರ್ತರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಅದು ಎಲ್ಲರಿಗೂ ಗೊತ್ತಿದೆ ಎಂದು ಸಚಿವರು ಹೇಳಿದರು.

ಸಿದ್ದರಾಮಯ್ಯ ಅವರಿಗೆ ಸಮಸ್ಯೆ ಎದುರಾದಾಗ ಮಾತ್ರ ಅಹಿಂದ ಮತ್ತು ಹಿಂದುಳಿದ ವರ್ಗ ಎಂದು ಮಾತನಾಡುತ್ತಾರೆ. ವಾಲ್ಮೀಕಿ ನಿಗಮದ ಹಣ ದುರ್ಬಳಕೆ ಹಾಗೂ ಎಸ್‌ಸಿಪಿ-ಟಿಎಸ್‌ಪಿ ಹಣ ಗ್ಯಾರಂಟಿಗಳಿಗೆ ಬಳಸಿ ಆ ಸಮುದಾಯಗಳಿಗೆ ಮೋಸ ಮಾಡಿದ್ದಾರೆ ಎಂದು ದೂರಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಕಾರ್ಯಕರ್ತರೇ ಪಕ್ಷಕ್ಕೆ ಜೀವಾಳ. ಪಕ್ಷವು ಬೇರು ಮಟ್ಟದಲ್ಲಿ ಸಂಘಟನೆ ಆಗಬೇಕಿದೆ ಎಂದು ಹೇಳಿದರು.

ಪಕ್ಷವು ಜಿಲ್ಲೆಯಲ್ಲಿ ತನ್ನದೇ ಆದ ಇತಿಹಾಸ ಹೊಂದಿದೆ. ಹಾಗಾಗಿ ಪ್ರತಿ ಕ್ಷೇತ್ರದಲ್ಲಿ ಬೂತ್ ಸಮಿತಿ ರಚನೆ ಹಾಗೂ ಸದಸ್ಯತ್ವ ನೋಂದಣಿ ಸಂಖ್ಯೆ ಹೆಚ್ಚಿಸಿಕೊಂಡರೆ ಪಕ್ಷಕ್ಕೆ ಬಲ ಬರಲಿದೆ ಎಂದರು.

ಮುಂದಿನ ದಿನಗಳಲ್ಲಿ ನಮ್ಮ ನಾಯಕರು ರಾಜ್ಯದ ಮುಖ್ಯಮಂತ್ರಿ ಆಗುವಂತೆ ಎಲ್ಲ ಕಾರ್ಯಕರ್ತರು ಶ್ರಮವಹಿಸಬೇಕು ಎಂದರು.

ಶಾಸಕ ಸಿ.ಬಿ. ಸುರೇಶ್ ಮಾತನಾಡಿ, ಪಕ್ಷವು ಸದೃಢವಾಗಿರಲು ಬೂತ್ ಕಮಿಟಿ ಬಹುಮುಖ್ಯ. ಆದ್ದರಿಂದ ಎಲ್ಲ ಕಾರ್ಯಕರ್ತರು ಕೆಳಹಂತದಲ್ಲಿ ಪಕ್ಷ ಕಟ್ಟುವ ಮೂಲಕ ಬರುವ ದಿನಗಳಲ್ಲಿ ಪೂರ್ಣ ಬಹುಮತದ ಸರ್ಕಾರ ರಚಿಸೋಣ ಎಂದರು.

ಈ ವೇಳೆ ಜೆಡಿಎಸ್ ನಾಯಕ ಸುರೇಶ್ ಬಾಬು, ಮಾಜಿ ಶಾಸಕ ತಿಮ್ಮರಾಯಪ್ಪ, ಮಾಜಿ ಸಚಿವ ಹನುಮಂತಪ್ಪ, ಚೌಡರೆಡ್ಡಿ, ಜಿಲ್ಲಾಧ್ಯಕ್ಷ ಬಿ.ಚಿದಾನಂದಪ್ಪ, ಕಾರ್ಯಾಧ್ಯಕ್ಷ ಗಣೇಶ್ ದಾಸಕರಿಯಪ್ಪ, ಗಾಯತ್ರಿ ಹಾಲೇಶ್, ಜಯಣ್ಣ ಸೇರಿದಂತೆ ಪಕ್ಷದ ಕಾರ್ಯಕರ್ತರು, ಮುಖಂಡರು ಇದ್ದರು.

### ನಾನೂ ಕುರಿ ಸಾಕಿದ್ದೇನೆ..!

**ಮಾತು ಎತ್ತಿದ್ರೆ 'ಕುರಿ ಕಾಯೋನು ಮುಖ್ಯಮಂತ್ರಿ ಆಗಿರುವುದು ಕೆಲವರು ಸಹಿಸುತ್ತಿಲ್ಲ' ಎನ್ನುವ ಸಿ.ಎಂ ಸಿದ್ದರಾಮಯ್ಯನವರು, ಎಷ್ಟು ಕುರಿಗಳನ್ನು ಸಾಕಿದ್ದಾರೋ ತಿಳಿಯುತ್ತಿಲ್ಲ. ನನ್ನ ತೋಟದಲ್ಲಿ ನಾನೂ 500 ಕುರಿ ಸಾಕಿದ್ದೇನೆ ಎಂದು ಹೆಚ್.ಡಿ. ಕುಮಾರಸ್ವಾಮಿ ಟೀಕಿಸಿದರು.**

**ವಾಣಿಜ್ಯ ಕ್ಷೇತ್ರದಲ್ಲಿ ಬೆಂಗಳೂರು ನಗರಕ್ಕೆ ಸರಿಸಾಟಿಯಾಗಿರುವ ಪರ್ಯಾಯ ಜಿಲ್ಲೆಯೇ ದಾವಣಗೆರೆ.**

**- ಹೆಚ್.ಡಿ. ಕುಮಾರಸ್ವಾಮಿ,** ಕೇಂದ್ರ ಸಚಿವ.

## ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪೂಜಾರ ಚಂದ್ರಪ್ಪ ನಿಧನಕ್ಕೆ ಸಂತಾಪ



ಹರಪನಹಳ್ಳಿ, ಅ.13- ತಾಲ್ಲೂಕಿನ ಅರಸೀಕೆರೆ ಗ್ರಾಮದ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಪೂಜಾರ ಚಂದ್ರಪ್ಪ ಅವರು ಇದೇ ದಿನಾಂಕ 8ರಂದು ಹೃದಯಘಾತದಿಂದ ನಿಧನರಾದರು. ತಾಲ್ಲೂಕು ಪಂಚಾಯಿತಿ ಸದಸ್ಯರಾಗಿ, ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 300ಕ್ಕೂ ಹೆಚ್ಚು ದಂಡಿ ದುರುಗಮ್ಮ ದೇವಿ ನಾಟಕ ಪ್ರದರ್ಶನ ಮಾಡಿದ್ದಾರೆ. ನಟನೆಯ ಜೊತೆಗೆ ನಿರ್ದೇಶಕರೂ ಆಗಿದ್ದರು.

ಪೂಜಾರ ಚಂದ್ರಪ್ಪ ನಿಧನಕ್ಕೆ ಶ್ರೀ ಶಾಂತಲಿಂಗ ದೇಶೀಕೇಂದ್ರ ಮಹಾಸ್ವಾಮೀಜಿ, ನೀಲಗುಂದ ಚನ್ನಬಸವ ಸ್ವಾಮೀಜಿ, ವಾಲ್ಮೀಕಿ ನಾಯಕ ಸಮಾಜದ ತಾಲೂಕು ಅಧ್ಯಕ್ಷ ವೈ.ಡಿ.ಅಣ್ಣಪ್ಪ, ಕಾಂಗ್ರೆಸ್ ಎಸ್.ಟಿ ಘಟಕದ ರಾಜ್ಯಾಧ್ಯಕ್ಷ, ಕೆ.ಪಿ.ಪಾಲಯ್ಯ, ಮಾಜಿ ಶಾಸಕ ಎಚ್.ಪಿ. ರಾಜೇಶ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಬಸವನಗೌಡ, ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಅಧ್ಯಕ್ಷ ಕೆ.ಉಚ್ಚಂಗೆಪ್ಪ, ಮುಖಂಡರಾದ ಕೋಡಿಹಳ್ಳಿ ಭೀಮಪ್ಪ, ಹಲಗೇರಿ ಮಂಜುನಾಥ, ಪ್ರಶಾಂತ್ ಪಾಟೀಲ್, ರಾಮನಮಲಿ, ಇಸ್ಮಾಯಿಲ್ ಎಲಿಗಾರ್, ಮಾಲತೇಶ ಮರಿಗೌಡ, ಪೂಜಾರ ಮರಿಯಪ್ಪ, ಸಲಾಂ ಸಾಬ್, ಕಬ್ಬಳ್ಳಿ ಪರಸಪ್ಪ, ಶಿಕ್ಷಕ ಯರಬಳ್ಳಿ ಭೀಮಪ್ಪ, ಜೆ. ಪರಶುರಾಮ್, ಕೆ.ಮಹೇಶ್ ಸಂತಾಪ ಸೂಚಿಸಿದ್ದಾರೆ.

## 'ದಾವಣಗೆರೆ ಬಂದ್'ಗೆ ರೈತ ಸಂಘದ ಬೆಂಬಲ

ದಾವಣಗೆರೆ, ಅ.13- ಎಐಡಿಎಸ್‌ಓ ವಿದ್ಯಾರ್ಥಿ ಸಂಘಟನೆ ಘೋಷಿಸಿದ ಅ.16ರ 'ದಾವಣಗೆರೆ ಬಂದ್ ಹೋರಾಟ'ಕ್ಕೆ ಕರ್ನಾಟಕ ರೈತ ಸಂಘ ಹಾಗೂ ಹಸಿರು ಸೇನೆ (ವಾಸುದೇವ ಮೇಟಿ ಬಣ) ಬೆಂಬಲ ನೀಡಲಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಗುಮ್ಮನೂರು ಬಸವರಾಜ್ ತಿಳಿಸಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶೇ.50ರಷ್ಟು ಸೀಟುಗಳನ್ನು ಪೇಮೆಂಟ್‌ಗೆ ಮಾರಾಟ ಮಾಡುತ್ತಿರುವುದನ್ನು ಎಐಡಿಎಸ್‌ಓ ಸಂಘಟನೆಯ ಜತೆಗೆ ವಾಸುದೇವ ಮೇಟಿ ಬಣದ ರೈತ ಸಂಘವು ಖಂಡಿಸಿದೆ ಎಂದರು.

ಮೆರಿಟ್ ಸೀಟ್‌ಗಳಿಗೆ ನಿಗದಿಪಡಿಸಿದ 43 ಸಾವಿರ ರೂ.ಗಳ ಶುಲ್ಕವೇ ಬಡ ವಿದ್ಯಾರ್ಥಿಗಳಿಗೆ ಹೊರೆಯಾಗಿದ್ದು, ಈ ರೀತಿ ಶುಲ್ಕ ಏರಿಕೆ ಮಾಡುವ ಮೂಲಕ ಸರ್ಕಾರ ಹಗಲು ದರೋಡೆ ಮಾಡುತ್ತಿದೆ ಎಂದು ಆರೋಪಿಸಿದರು.

ಕೂಡಲೇ ಪೇಮೆಂಟ್ ಕೋಟಾ ರದ್ದುಗೊಳಿಸಿ, ಕಾಲೇಜಿನ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸಬೇಕು ಮತ್ತು ಪ್ರತಿಷ್ಠಿತ ಯುಬಿಡಿಟಿ ಕಾಲೇಜಿನ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಬೇಕು ಎಂಬ ವಿದ್ಯಾರ್ಥಿಗಳ ಒತ್ತಾಸೆಯನ್ನು ಈಡೇರಿಸಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದರು.

ದಾವಣಗೆರೆಯ ಯುಬಿಡಿಟಿ ಕಾಲೇಜನ್ನು ರಾಜ್ಯದ ಬಡ ಹಾಗೂ ರೈತ ಮನೆತನದ ವಿದ್ಯಾರ್ಥಿಗಳಿಗಾಗಿ ಉಳಿಸಲು ಇದೇ ದಿನಾಂಕ 16ರಂದು 'ದಾವಣಗೆರೆ ಬಂದ್'ಗೆ ಎಲ್ಲರೂ ಕೈ ಜೋಡಿಸುವಂತೆ ಮನವಿ ಮಾಡಿದರು.

ಈ ವೇಳೆ ಸಂಘದ ತಾಲ್ಲೂಕು ಅಧ್ಯಕ್ಷ ಕೆಂಚಮ್ಮನಹಳ್ಳಿ ಹನುಮಂತಪ್ಪ, ಉಪಾಧ್ಯಕ್ಷ ಕಿತ್ತೂರು ಹನುಮಂತಪ್ಪ, ಕಾರ್ಯದರ್ಶಿ ಕೋಲ್ಕುಂಟೆ ಉಚ್ಚಂಗೆಪ್ಪ, ಮಾಯಕೊಂಡ ಹೋಬಳಿ ಅಧ್ಯಕ್ಷ ಚಿಕ್ಕತೊಗಲೇರಿ ಮಲ್ಲಿಕಾರ್ಜುನ್, ಹರಿಹರ ತಾಲ್ಲೂಕು ಅಧ್ಯಕ್ಷ ಸುನೀಲ್ ಹೊಟ್ಟಿಗೇನಳ್ಳಿ ಸುದ್ದಿಗೋಷ್ಠಿಯಲ್ಲಿದ್ದರು.

### ಟಾಟಾ ಬೈ ತಾತಾ

ರತ್ನದಂತಹ ಹುಡುಗ ನಮ್ಮೆಲ್ಲರ
ರತನ್ ತಾತಾ
ಭಾರತದ ರತ್ನ ವಿಶ್ವಮಾನ್ಯ
ಮುತ್ತು ದೇಶೀ ಸ್ವತ್ತು
ಸೂಜಿಯಿಂದ ವಿಮಾನದವರೆಗಿನ
ಸೃಷ್ಟಿಕರ್ತ ನೀನು
ಅರಮನೆಯಿಂದ
ಗುಡಿಸಲವರೆಗೂ ನಿನ್ನದೇ ಧ್ಯಾನ
ನಿನ್ನ ಜೀವನ ಯಶೋಗಾಥೆಯೇ
ದಾರಿದೀಪ ನಮಗೆ
ನಿನ್ನ ಹೆಸರು
ನಿತ್ಯಹರಿದ್ವರ್ಣಹಸಿರು;ಟಾಟಾ
ತಾತಾ!
ಕಾವ್ಯಾತ್ಮನ ಆಶಯ;ಮರುಜನ್ಮ
ಪಡೆದೀತಾ ಟಾಟಾ!

**- ಶಿವಕುಮಾರಸ್ವಾಮಿ ಕುರ್ಕಿ**

## ಎಸ್ಸೆಸ್ಸೆಲ್ಸಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣ ಪ. ಜಾತಿ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ಅ.13 - ಸಮಾಜ ಕಲ್ಯಾಣ ಇಲಾಖೆಯಿಂದ ಪ್ರಸಕ್ತ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಗೆ ಪ್ರೋತ್ಸಾಹ ಧನ ನೀಡಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಆಸಕ್ತ ಅಭ್ಯರ್ಥಿಗಳು ಸಮಾಜ ಕಲ್ಯಾಣ ಇಲಾಖೆ www.sw.kar.nic.in ವೆಬ್‌ಸೈಟ್ ಮೂಲಕ ಅರ್ಜಿ ಸಲ್ಲಿಸಿ. ಅರ್ಜಿ ಹಾಕಿದ ಪ್ರತಿಯೊಂದಿಗೆ ಅಗತ್ಯ ದಾಖಲೆಗಳನ್ನು ದೃಢೀಕರಣದೊಂದಿಗೆ ಆಯಾ ತಾಲ್ಲೂಕಿನ ಇಲಾಖಾ ಕಚೇರಿಗೆ ಸಲ್ಲಿಸಲು ಜಂಟಿ ನಿರ್ದೇಶಕ ನಾಗರಾಜ್ ತಿಳಿಸಿದ್ದಾರೆ.

## ಹಂದಿ ಹಾವಳಿ ತಡೆಯಲು ಗ್ರಾಮಸ್ಥರ ಮನವಿ



ದಾವಣಗೆರೆ, ಅ.13- ತಾಲ್ಲೂಕಿನ ನಾಗನೂರು, ಶಿರಮಗೊಂಡನಹಳ್ಳಿ, ಶ್ಯಾಮನೂರು, ಕುಂದುವಾಡದಲ್ಲಿ ಹೆಚ್ಚಾದ ಹಂದಿಗಳ ಹಾವಳಿ ತಡೆಯಲು ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಈ ವೇಳೆ ಬಲ್ಲೂರು ರವಿಕುಮಾರ್, ಎನ್.ಎಂ. ಬಸವರಾಜ್, ಎನ್.ಡಿ. ವಿಶ್ವನಾಥ್ ಸೇರಿದಂತೆ ಇತರರು ಇದ್ದರು.

## ನಗರದಲ್ಲಿ ಇಂದು ದತ್ತಿ ಉಪನ್ಯಾಸ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಘಟಕ, ಕದಳಿ ಮಹಿಳಾ ವೇದಿಕೆಯಿಂದ 157ನೇ ಕಮ್ಮಟದಲ್ಲಿ ದತ್ತಿ ಉಪನ್ಯಾಸ, ವಚನ ದಾಸೋಹ, ಕಲ್ಯಾಣಕ್ರಾಂತಿ ವಿಜಯ ಹಾಗೂ ಗಂಗಾಂಬಿಕೆಯವರ ಶರಣೋತ್ಸವವು ಇಂದು ಮಧ್ಯಾಹ್ನ 3.30ಕ್ಕೆ ರಾಘವೇಂದ್ರ ಹೈಟೆಕ್ ಪಿಯು ಕಾಲೇಜಿನಲ್ಲಿ ನಡೆಯಲಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ತಾಲ್ಲೂಕು ಕದಳಿ ಮಹಿಳಾ ವೇದಿಕೆ ಅಧ್ಯಕ್ಷರಾದ ಮಮತಾ ನಾಗರಾಜ್ ವಹಿಸುವರು. 'ಯುವ ಜನಾಂಗ ಮತ್ತು ವ್ಯಕ್ತಿತ್ವ ನಿರ್ಮಾಣದಲ್ಲಿ ಶರಣ ಸಾಹಿತ್ಯ-ಸಂಸ್ಕೃತಿ' ವಿಷಯದ ಕುರಿತು ಎ.ಆರ್.ಜಿ. ಕಾಲೇಜಿನ ಪ್ರೊ. ಡಾ. ಮಲ್ಲಿಕಾರ್ಜುನ ಜವಳಿ ಉಪನ್ಯಾಸ ನೀಡುವರು. ಡಾ. ಎ.ಜೆ. ನೀತಾ, ಪ್ರಿನ್ಸಿಪಾಲ್, ಬಿ.ಇ.ಎ. ಶಿಕ್ಷಣ ವಿದ್ಯಾಲಯ ಉಪಸ್ಥಿತರಿರುವರು.

## ನಗರದ ಈಶ್ವರಮ್ಮ ಶಾಲೆಗೆ ರಾಜ್ಯ ಮಟ್ಟದ ಶಿಕ್ಷಣ ಚೈತನ್ಯ ಪ್ರಶಸ್ತಿ



ದಾವಣಗೆರೆ, ಅ.13- ಶಿಕ್ಷಣ ಕ್ಷೇತ್ರದಲ್ಲಿನ ಗಣನೀಯ ಸಾಧನೆಗಾಗಿ ಶಿಕ್ಷಣ ಸಂಸ್ಥೆಗಳಿಗೆ ಸೂರ್ಯ ಫೌಂಡೇಷನ್ (ಬೆಂಗಳೂರು) ಸಂಸ್ಥೆಯು ಅತ್ಯುತ್ತಮ ಶಾಲೆ ಎಂದು ಕೊಡ ಮಾಡುವ 'ಶಿಕ್ಷಣ ಚೈತನ್ಯ - 2024' ಪ್ರಶಸ್ತಿಗೆ ನಗರದ ಈಶ್ವರಮ್ಮ ಶಾಲೆ ಭಾಜನವಾಗಿದೆ.

ಈಶ್ವರಮ್ಮ ಶಾಲೆಯು ಮೌಲ್ಯ ಶಿಕ್ಷಣ ನೀಡುತ್ತಿರುವ ಮೂಲಕ ಶಾಲೆಯನ್ನು ಸಾಧನೆಯತ್ತ ಮುನ್ನಡೆಸಲಾಗುತ್ತಿದೆ. ಈ ಶಾಲೆಯನ್ನು ಮಾದರಿ ಶಾಲೆ ಎಂದು ಪರಿಗಣಿಸಿ ಈ ಪ್ರಶಸ್ತಿ ನೀಡಲಾಗಿದ್ದು, ಇದೇ ದಿನಾಂಕ 15ರಂದು ಬೆಂಗಳೂರಿನಲ್ಲಿ ಏರ್ಪಾಡಾಗಿರುವ ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಈಶ್ವರಮ್ಮ ಶಾಲೆಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸೂರ್ಯ ಫೌಂಡೇಶನ್ ತಿಳಿಸಿದೆ.

## ಮದರಸಾಗಳು ಆರ್.ಟಿ.ಇ.ಗೆ ಒಳಪಡದೇ ಅನುದಾನ ಬೇಡ : ಮಕ್ಕಳ ಆಯೋಗ

ನವದೆಹಲಿ, ಅ. 13 - ಮದರಸಾಗಳು ಶಿಕ್ಷಣ ಹಕ್ಕು ಕಾಯ್ದೆಗೆ ಬದ್ಧವಾಗದ ಹೊರತು, ಅವುಗಳಿಗೆ ಅನುದಾನ ನೀಡಬಾರದು ಎಂದು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್.ಸಿ.ಪಿ.ಸಿ.ಆರ್.) ತಿಳಿಸಿದೆ.

ಶಿಕ್ಷಣ ಹಕ್ಕು ಕಾಯ್ದೆಯ ಹೊರಗಿರುವ ಧಾರ್ಮಿಕ ಸಂಸ್ಥೆಗಳಿಗೆ ಸರ್ಕಾರ ಅನುದಾನ ನೀಡಬಾರದು. ಈ ಸಂಸ್ಥೆಗಳು ಶಿಕ್ಷಣ ಹಕ್ಕು ಕಾಯ್ದೆಯ ಹೊರಗಿರುವ ಕಾರಣ ಅಲ್ಲಿನ ಮಕ್ಕಳು ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಆಯೋಗದ ವರದಿಯಲ್ಲಿ ತಿಳಿಸಲಾಗಿದೆ.

ಸಂವಿಧಾನದ 29 ಹಾಗೂ 30ನೇ ವಿಧಿಯಲ್ಲಿ ಅಲ್ಪಸಂಖ್ಯಾತರು ತಮ್ಮ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳುವ ಹಾಗೂ ಶಿಕ್ಷಣ ಸಂಸ್ಥೆ ರಚಿಸಿಕೊಳ್ಳುವ ಹಕ್ಕು ನೀಡಲಾಗಿದೆ. ಇದು ಒಂದು ರೀತಿಯಲ್ಲಿ ಮದರಸಾಗಳಲ್ಲಿನ ಮಕ್ಕಳ ವಿರುದ್ಧ ಪಕ್ಷಪಾತಕ್ಕೆ ಕಾರಣವಾಗುತ್ತಿದೆ. ಇಲ್ಲಿನ ಮಕ್ಕಳು ಆರ್.ಟಿ.ಇ. ಕಾಯ್ದೆಯಡಿ ಕಡ್ಡಾಯಗೊಳಿಸಿರುವ ಔಪಚಾರಿಕ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ವರದಿಯಲ್ಲಿ ಹೇಳಲಾಗಿದೆ.

ಮದರಸಾಗಳಲ್ಲಿ ಧಾರ್ಮಿಕ ಶಿಕ್ಷಣಕ್ಕೆ ಆದ್ಯತೆ ನೀಡಲಾಗುತ್ತದೆ. ಹಲವಾರು ಮದರಸಾಗಳಲ್ಲಿ ಔಪಚಾರಿಕ ಶಿಕ್ಷಣಕ್ಕೆ ಅಗತ್ಯವಾದ ಮೂಲಭೂತ ಸೌಲಭ್ಯ, ತರಬೇತಿ ಪಡೆದ ಶಿಕ್ಷಕರು ಹಾಗೂ ಸೂಕ್ತ ಪಠ್ಯಕ್ರಮಗಳು ಇರುವುದಿಲ್ಲ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಮದರಸಾಗಳಲ್ಲಿನ ಮಕ್ಕಳಿಗೆ ಕೆಲವೊಮ್ಮೆ ಪಠ್ಯಪುಸ್ತಕ, ಸಮವಸ್ತ್ರ ಹಾಗೂ ಮಧ್ಯಾಹ್ನದ ಬಿಸಿಯೂಟ ಸಹ ಲಭ್ಯವಾಗುವುದಿಲ್ಲ ಎಂದು ತಿಳಿಸಲಾಗಿದೆ.

2021-22ರ ಯುಡಿಐಎಸ್‌ಇ ವರದಿ ಪ್ರಕಾರ 1.2 ಕೋಟಿ ಮುಸ್ಲಿಂ ಮಕ್ಕಳು ಔಪಚಾರಿಕ ಶಿಕ್ಷಣದಿಂದ ವಂಚಿತರಾಗಿದ್ದಾರೆ ಎಂಬುದನ್ನೂ ಎನ್‌ಪಿಸಿಆರ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

### ಭದ್ರಾ ಜಲಾಶಯ

**ನೀರಿನ ಮಟ್ಟ : 185' 11,**
**ಒಳ ಹರಿವು : 6809 ಕ್ಯೂಸೆಕ್ಸ್,**
**ಹೊರ ಹರಿವು : 6207 ಕ್ಯೂಸೆಕ್ಸ್**
**ಕಳೆದ ವರ್ಷ : 157.2 ಅಡಿ**

## ಪೌರ ಕಾರ್ಮಿಕರಿಗೆ ದಸರಾ ಉಡುಗೊರೆ ನೀಡಿದ ಪಾಲಿಕೆ ಸದಸ್ಯ



ದಾವಣಗೆರೆ, ಅ.13- ನಗರದ ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ವಿಜಯದಶಮಿ ಹಾಗೂ ದಸರಾ ಪ್ರಯುಕ್ತ ಪೌರ ಕಾರ್ಮಿಕರಿಗೆ ಮಹಾನಗರಪಾಲಿಕೆ ಸದಸ್ಯ ಜಿ. ಎಸ್. ಮಂಜುನಾಥ್ ಗಡಿಗುಡಾಳ್ ನೇತೃತ್ವದಲ್ಲಿ ಉಡುಗೊರೆ ನೀಡಿ ಗೌರವಿಸಲಾಯಿತು.

ಬಳಿಕ ಮಾತನಾಡಿದ ಮಂಜುನಾಥ್, ಪೌರಕಾರ್ಮಿಕರು ಮಳೆ, ಗಾಳಿ, ಚಳಿ ಎನ್ನದೇ ನಗರದ ಸ್ವಚ್ಛತೆಗೆ ಶ್ರಮಿಸುತ್ತಾರೆ. ಆರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡುವ ಜೊತೆಗೆ ನಗರ ಸ್ವಚ್ಛತೆಯಾಗಿರಲು ಅವರೇ ಕಾರಣ. ಅವರಿಗೆ ಗೌರವಿಸಬೇಕೆಂಬ ಸದುದ್ದೇಶದಿಂದ ಉಚಿತವಾಗಿ ಉಡುಗೊರೆ ನೀಡಿ ಅಭಿನಂದಿಸಲಾಗುತ್ತದೆ. ಕಳೆದ ವರ್ಷವೂ ಪೌರಕಾರ್ಮಿಕರಿಗೆ ಸನ್ಮಾನಿಸಲಾಗಿತ್ತು. ಈ ವರ್ಷವೂ ಈ ಪರಂಪರೆ ಮುಂದುವರೆದಿದೆ ಎಂದು ತಿಳಿಸಿದರು.

ಪೌರ ಕಾರ್ಮಿಕರ ಶ್ರಮದಿಂದಲೇ 38ನೇ ವಾರ್ಡ್ ಎಂ.ಸಿ.ಸಿ. 'ಬಿ' ಬ್ಲಾಕ್ ಇಷ್ಟೊಂದು ಸ್ವಚ್ಛವಾಗಿರಲು ಕಾರಣ. ತಮಗೆ ವಹಿಸಿದ ಕೆಲಸವನ್ನು ಜವಾಬ್ದಾರಿಯುತವಾಗಿ ನಿರ್ವಹಿಸುತ್ತಾರೆ. ಜನರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದು, ಸ್ವಚ್ಛತೆ ವಿಚಾರದಲ್ಲಿ ಜನರ ಸಮಸ್ಯೆಗೆ ಕೂಡಲೇ ಸ್ಪಂದಿಸುತ್ತಾರೆ. ಪೌರಕಾರ್ಮಿಕರ ಕಾರ್ಯಕ್ಕೆ ಎಲ್ಲರೂ ಪ್ರಶಂಸೆ ವ್ಯಕ್ತಪಡಿಸಬೇಕು ಎಂದು ಹೇಳಿದರು.

ಉಡುಗೊರೆ ಸ್ವೀಕರಿಸಿದ ಪೌರಕಾರ್ಮಿಕರು, ಪ್ರತಿವರ್ಷವೂ ನಮ್ಮನ್ನು ಗುರುತಿಸಿ, ಉಡುಗೊರೆ ನೀಡುವ ಜೊತೆಗೆ ಅಭಿನಂದನೆ ಸಲ್ಲಿಸುತ್ತಿರುವ ಗಡಿಗುಡಾಳ್ ಮಂಜುನಾಥ್‌ರ ಕಾರ್ಯವೈಖರಿಗೆ ಧನ್ಯವಾದ ಸಲ್ಲಿಸುತ್ತೇವೆ ಎಂದು ತಿಳಿಸಿದರು.

## ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಇಂದು ಅನಿರ್ದಿಷ್ಟಾವಧಿ ಮುಷ್ಕರ

ದಾವಣಗೆರೆ, ಅ.13- ಕಂದಾಯ ಮತ್ತು ಅರಣ್ಯದ ಅಂಚಿನ ಪ್ರದೇಶದಲ್ಲಿ ಸಾಗುವಳಿ ಮಾಡುತ್ತಿರುವ ರೈತರಿಗೆ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ, ನಾಳೆ ದಿನಾಂಕ 14 ರಂದು ಉಪವಿಭಾಗಾಧಿಕಾರಿ ಕಚೇರಿ ಮುಂಭಾಗ ಎಐಕೆಕೆಎಂಎಸ್ ವತಿಯಿಂದ ಬಗರ್ ಹುಕ್ಕುಂ ಸಾಗುವಳಿದಾರರ ಅನಿರ್ದಿಷ್ಟ ಅವಧಿಯ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟನೆಯ ರಾಜ್ಯ ಕಾರ್ಯದರ್ಶಿ ಡಾ. ಸುನೀತ್ ಕುಮಾರ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಈ ಕೂಡಲೇ ಭೂ ಮಂಜೂರಾತಿ ಸಮಿತಿ ರಚನೆಗೆ ಆದೇಶ ಹೊರಡಿಸಬೇಕು. ಈ ಸಮಿತಿ ಮುಖಾಂತರ ಬಾಕಿ ಇರುವ ಬಗರ್ ಹುಕ್ಕುಂ ಸಾಗುವಳಿದಾರರ ಅರ್ಜಿಗಳಿಗೆ ಹಕ್ಕುಪತ್ರ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಆಸಕ್ತರು ಜಗಳೂರು-ಚನ್ನಗಿರಿ (ಮಧು ತೊಗಲೇರಿ- 95355-10912), ದಾವಣಗೆರೆ- ನಾಗಸ್ಮಿತಾ (8431862199), ಹೊನ್ನಾಳಿ-ಹರಿಹರ (ಮಂಜುನಾಥ್ ರೆಡ್ಡಿ-8217544498) ಇವರನ್ನು ಸಂಪರ್ಕಿಸಬಹುದು.

ಪತ್ರಿಕಾಗೋಷ್ಠಿಯಲ್ಲಿ ಎಐಕೆಕೆಎಂಎಸ್ ಜಿಲ್ಲಾಧ್ಯಕ್ಷ ಮಧು ತೊಗಲೇರಿ, ಜಿಲ್ಲಾ ಕಾರ್ಯದರ್ಶಿ ನಾಗಸ್ಮಿತಾ, ರಾಮಗೊಂಡನಹಳ್ಳಿ ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.



ದಾವಣಗೆರೆ ಎಂ.ಸಿ.ಸಿ. ಎ ಬ್ಲಾಕ್‌ನಲ್ಲಿರುವ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಶ್ರೀ ಸಾಯಿಬಾಬಾ ಅವರ 106ನೇ ಪುಣ್ಯಾರಾಧನೆ ಮಹೋತ್ಸವದ ಅಂಗವಾಗಿ ಭಾನುವಾರ ಬಾಬಾ ಮೂರ್ತಿ ಮೆರವಣಿಗೆಯು ರಾಜಬೀದಿಗಳಲ್ಲಿ ನಡೆಯಿತು.

## ರಾಜ್ಯ ಪ್ರಶಸ್ತಿಗೆ ಮಂಜುಳಾ ಆಯ್ಕೆ



ದಾವಣಗೆರೆ, ಅ.13- ದಾವಣಗೆರೆ ದಕ್ಷಿಣ ವಲ ಯದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಕನ್ನಡ ಸಹ ಶಿಕ್ಷಕಿ ಶ್ರೀಮತಿ ಮಂಜುಳಾ ಎಸ್. ಪಾಟೀಲ್ ಅವರು ಸೂರ್ಯ ಫೌಂಡೇಷನ್ ಹಾಗೂ ಸ್ಪಾರ್ಕ್ ಅಕಾಡೆಮಿ ವತಿಯಿಂದ ಬೆಂಗಳೂರಿನಲ್ಲಿ ಇದೇ ದಿನಾಂಕ 16 ರಂದು ಆಯೋಜಿಸಿರುವ ರಾಜ್ಯ ಮಟ್ಟದ ಶೈಕ್ಷಣಿಕ ಸಮ್ಮೇಳನದಲ್ಲಿ ಗುರು ಭೂಷಣ ರಾಜ್ಯಮಟ್ಟದ ಪ್ರಶಸ್ತಿಗೆ ಭಾಜನರಾಗಿದ್ದಾರೆ.ಶಿಕ್ಷಣ ಕ್ಷೇತ್ರ, ಸಂಗೀತ, ನಾಟಕ, ನೃತ್ಯ, ಕ್ರೀಡೆ ಹೀಗೆ ವಿವಿಧ ಕಲೆಗಳಲ್ಲಿ ಪಾರಂಗತರಾಗಿರುವ ಮಂಜುಳಾ ಅವರು, ರಾಜ್ಯಮಟ್ಟದವರೆಗೂ ಪ್ರದರ್ಶನ ನೀಡಿದ್ದಾರೆ. ಮಕ್ಕಳ ಸರ್ವತೋಮುಖ ಬೆಳವಣಿಗೆಗೆ, ಶಾಲೆಯ ಅಭಿವೃದ್ಧಿಗೆ ಅವರು ಶ್ರಮಿಸುತ್ತಿದ್ದಾರೆ.

## ಪವರ್‌ಲಿಫ್ಟಿಂಗ್ ಬೆಂಚ್ ಪ್ರೆಸ್ ಸ್ಪರ್ಧೆಗೆ ರಕ್ಷಿತ್ ಆಯ್ಕೆ



ದಾವಣಗೆರೆ, ಅ.13- ನಾಳೆ ದಿನಾಂಕ 14 ರಿಂದ 18 ರವರೆಗೆ ಗೋವಾ ರಾಜ್ಯದ ವಾಸ್ಕೋಡಿಗಾಮಾದಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಬೆಂಚ್ ಪ್ರೆಸ್ ಸ್ಪರ್ಧೆಗೆ ನಗರದ ಶ್ರೀ ಕನ್ನಿಕಾಪರಮೇಶ್ವರಿ ಕೋ-ಆಪ್ ಬ್ಯಾಂಕಿನ ಉದ್ಯೋಗಿ ಮತ್ತು ಶ್ರೀ ಬೀರೇಶ್ವರ ವ್ಯಾಯಾಮ ಶಾಲೆಯ ಕ್ರೀಡಾಪಟು ವಿ.ರಕ್ಷಿತ್ ಅವರು ಆಯ್ಕೆಯಾಗಿದ್ದಾರೆ. ರಕ್ಷಿತ್, ಕ್ರೀಡಾ ತರಬೇತುದಾರ ಪಿ.ವಿಶ್ವನಾಥ್ ಅವರ ಪುತ್ರ.

## ಯುಬಿಡಿಟಿ ಉಳಿಸಿ: ದಾವಣಗೆರೆ ಬಂದ್‌ಗೆ ಸಿಪಿಐ - ಎಐಟಿಯುಸಿ ಬೆಂಬಲ

ದಾವಣಗೆರೆ, ಅ.13- ನಗರದ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಶೇ.50 ಪೇಮೆಂಟ್ ಸೀಟುಗಳನ್ನು ರದ್ದುಪಡಿಸಿ ಸೀಟು ಮಾರಾಟ ನಿಲ್ಲಿಸಿ ಎಂದು ಎಐಡಿಎಸ್‌ಓ ಸಂಘಟನೆ ಮತ್ತು ಯುಬಿಡಿಟಿ ವಿದ್ಯಾರ್ಥಿ ಹೋರಾಟ ಸಮಿತಿಯು ಇದೇ ದಿನಾಂಕ 16 ರಂದು ದಾವಣಗೆರೆ ಬಂದ್‌ಗೆ ನೀಡಿರುವ ಕರೆ ಹಿನ್ನೆಲೆಯಲ್ಲಿ ಭಾರತ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಮಂಡಳಿ ಮತ್ತು ಎಐಟಿಯುಸಿ ಜಿಲ್ಲಾ ಸಮಿತಿ ಬೆಂಬಲ ನೀಡಿ ಭಾಗವಹಿಸಲಿದೆ ಎಂದು ಸಿಪಿಐ ಜಿಲ್ಲಾ ಕಾರ್ಯದರ್ಶಿ ಆವರಗೆರೆ ಚಂದ್ರು, ಎಐಟಿಯುಸಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್. ಜಿ. ಉಮೇಶ್ ತಿಳಿಸಿದ್ದಾರೆ.

ಕಳೆದ ಒಂದು ತಿಂಗಳಿಗಿಂತ ಹೆಚ್ಚು ದಿನಗಳಿಂದ ಯುಬಿಡಿಟಿ ಉಳಿಸಿ ವಿದ್ಯಾರ್ಥಿ ಚಳುವಳಿ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಸಕಾರಾತ್ಮಕ ಸ್ಪಂದನೆ ಸಿಗದ ಹಿನ್ನೆಲೆಯಲ್ಲಿ ಈ ಬಂದ್‌ಗೆ ಕರೆ ನೀಡಲಾಗಿದೆ. ಬಂದ್‌ನಲ್ಲಿ ಸಿಪಿಐ ಮತ್ತು ಸಾಮೂಹಿಕ ಸಂಘಟನೆಗಳ ಕಾರ್ಯಕರ್ತರು ಇದೇ ದಿನಾಂಕ 16 ರ ಬೆಳಿಗ್ಗೆ 10 ಗಂಟೆಗೆ ದಾವಣಗೆರೆ ಜಯದೇವ ಸರ್ಕಲ್ ಬಳಿ ಆಗಮಿಸಬೇಕೆಂದು ಅವರು ಕರೆ ನೀಡಿದ್ದಾರೆ.




## ಬೀಡಿ, ಗಣಿ ಕಾರ್ಮಿಕರ ಮಕ್ಕಳಿಂದ ವಿದ್ಯಾರ್ಥಿ ವೇತನಕ್ಕೆ ಅರ್ಜಿ

ಹರಿಹರ

ಹರಿಹರ, ಅ. 13 - ಕೇಂದ್ರ ಸರ್ಕಾರದ ಕಾರ್ಮಿಕ ಮತ್ತು ಉದ್ಯೋಗ ಇಲಾಖೆ ವತಿಯಿಂದ ಬೀಡಿ ಹಾಗೂ ಗಣಿ ಕಾರ್ಮಿಕರ ಮಕ್ಕಳ ವಿದ್ಯಾರ್ಥಿ ವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರಸಕ್ತ ಸಾಲಿನ ವಿದ್ಯಾರ್ಥಿ ವೇತನಕ್ಕಾಗಿ ಒಂದನೇ ತರಗತಿಯಿಂದ ಪದವಿ ಮಟ್ಟದ ವರೆಗೂ ಅಭ್ಯಾಸ ಮಾಡುತ್ತಿರುವ ಬೀಡಿ ಹಾಗೂ ಗಣಿ ಕಾರ್ಮಿಕರ ಮಕ್ಕಳು ಆನ್‌ಲೈನ್ ವೆಬ್‌ಸೈಟ್ ವಿಳಾಸ - scholarship.gov.in ಮೂಲಕ ವಿದ್ಯಾರ್ಥಿ ವೇತನಕ್ಕೆ ಅಕ್ಟೋಬರ್ 31 ರೊಳಗಾಗಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಬಹುದಾ ಗಿದೆ ಎಂದು ಹರಿಹರದ ಬೀಡಿ ಕಾರ್ಮಿಕರ ಆಸ್ಪತ್ರೆ ವೈದ್ಯಾಧಿಕಾರಿ ತಿಳಿಸಿದ್ದಾರೆ.

## ನಗರದ ಶ್ರೀ ಶಾರದಾಂಬ ದೇವಿ ಪಲ್ಲಕ್ಕಿ



ದಾವಣಗೆರೆ, ಅ.13- ನವರಾತ್ರಿಯ ವಿಜಯ ದಶಮಿ ದಿನವಾದ ಶನಿವಾರ ಸಂಜೆ ನಗರದ ಎಸ್. ನಿಜಲಿಂಗಪ್ಪ ಬಡಾವಣೆಯಲ್ಲಿರುವ ಶ್ರೀ ಶಾರದಾಂಬ ದೇವಿ ಮೂರ್ತಿಯನ್ನು ಪಲ್ಲಕ್ಕಿಯಲ್ಲಿಟ್ಟು ರಾಜಬೀದಿಗಳಲ್ಲಿ ಸಂಚರಿಸಿ, ಬನ್ನಿ ಮಂಟಪಕ್ಕೆ ತೆರಳಿ ಪೂಜೆ ಸಲ್ಲಿಸಲಾಯಿತು. ಶ್ರೀ ಶಾರದಾಂಬ ದೇವಸ್ಥಾನದಿಂದ ಹೊರಟ ಉತ್ಸವಕ್ಕೆ ಪುರೋಹಿತರಾದ ಸುಬ್ರಹ್ಮಣ್ಯ ಭಟ್ ಅವರು ಪೂಜೆ ಸಲ್ಲಿಸಿದರು.

ವೇದಬ್ರಹ್ಮ ಶ್ರೀ ಶಂಕರನಾರಾಯಣ ಶಾಸ್ತ್ರಿಗಳ ಮಾರ್ಗದರ್ಶನದಲ್ಲಿ ಶ್ರೀ ಶಂಕರ ಸೇವಾ ಸಂಘದ ಅಧ್ಯಕ್ಷ ಡಾ. ಬಿ.ಟಿ ಅಚ್ಯುತ್ ಮತ್ತು ಕಾರ್ಯದರ್ಶಿ ಶ್ರೀನಿವಾಸ ಜೋಷಿರವರ ನೇತೃತ್ವದಲ್ಲಿ ಉಪಾಧ್ಯಕ್ಷ ಮೋತಿ ಸುಬ್ರಮಣ್ಯ, ಗಿರೀಶ್ ನಾಡಿಗ್, ಮಂಡಕ್ಕಿ ಸುಬ್ಬಣ್ಣ, ವಿನಾಯಕ ಜೋಶಿ, ಬಾಲಕೃಷ್ಣ ವೈದ್ಯ, ಅನಿಲ್ ಬಾರಂಗೆಳ್, ಶಶಿಧರ್, ರಮೇಶ್ ಪಾಟೀಲ್, ರಮೇಶ್ ಎಸ್, ಪಟ್ಟಾಭಿರಾಮನ್, ದಿವಾಕರ್, ಮಹಿಳೆಯರ ಸಂಘದ ಅಧ್ಯಕ್ಷರಾದ ಶ್ರೀಮತಿ ನಳಿನಿ ಅಚ್ಯುತ್ ಮತ್ತು ಇತರರು ಉತ್ಸವದಲ್ಲಿ ಪಾಲ್ಗೊಂಡಿದ್ದರು.

ಉತ್ಸವ ಹಿಂದಿರುಗಿದ ನಂತರ ದೇವಿಗೆ ಕುಂಕುಮಾರ್ಚನೆ, ಮಹಾ ಮಂಗಳಾರತಿ ನಂತರ ಭಕ್ತರು ದೇವಿಯ ದರ್ಶನ ಪಡೆದು ಬನ್ನಿ ವಿನಿಮಯ ಮಾಡಿಕೊಂಡರು.

# ನಾಲ್ಕನೇ ವರ್ಷದ ಪುಣ್ಯಸ್ಮರಣೆ



ದಾವಣಗೆರೆ ಪಿ.ಜೆ. ಬಡಾವಣೆ ನಿವಾಸಿ
ಶ್ರೀ ವಿನಾಯಕ ರೈಸ್ ಮಿಲ್ ಮಾಲೀಕರೂ, ಗಣ್ಯ ವರ್ತಕರೂ,
ಕೊಡುಗೈ ದಾನಿಗಳೂ ಆದ

## ಶ್ರೀಯುತ ಜಿ. ವೇದಮೂರ್ತಿ (ಮೂರ್ತ್ಯೆಪ್ಪ)

(ನಿಧನ : 15.10.2020)

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದವು...
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ,
ಸದಾ ನಿಮ್ಮ ಸ್ಮರಣೆಯಲ್ಲಿರುವ...

✦ ಶ್ರೀಮತಿ ಮಂಜುಳಾ ಶ್ರೀ ಸತೀಶ್ ಟಿ.ಬಿ.
✦ ಶ್ರೀಮತಿ ಅಶ್ವಿನಿ ಶ್ರೀ ಪ್ರಶಾಂತ್ ಎನ್.ಪಿ.
✦ ಶ್ರೀಮತಿ ಅನುಷಾ ಶ್ರೀ ಸಿದ್ದೇಶ್ ವಿ.
✦ ಶ್ರೀಮತಿ ನೇತ್ರಾವತಿ ಶ್ರೀ ವಿನಯ್‌ಕುಮಾರ್ ಎ.ಎಸ್.

ಮೊಮ್ಮಕ್ಕಳಾದ : ✦ ಲಿಖಿತಾ ✦ ದಿಶಾ ✦ ಅಖಿಲ್ ✦ ಹರ್ಷಿತ ✦ ಉಷಾ
✦ ಪ್ರಣವ್ ✦ ಮನ್ವಿತ್ ✦ ಅನ್ವಿತಾ

ಸಹೋದರರು, ಸಹೋದರಿಯರು, ಸ್ನೇಹಿತರು ಹಾಗೂ ಬಂಧು ಮಿತ್ರರು

**ಶ್ರೀ ವಿನಾಯಕ ರೈಸ್‌ಮಿಲ್ ಸಿಬ್ಬಂದಿ ವರ್ಗ, ದಾವಣಗೆರೆ**

KA/SK/DVG-028/2024-2026. O/P @ B.V. Nagar P.O. JANATHAVANI - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas